ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಡಿಸೆಂಬರ್ ೪ನೇ ವಾರ**

22-12-2025 TO 27-12-2025

# ಒಳಮೀಸಲಾತಿ ಮಸೂದೆಗೆ ಪರಿಷತ್ ಒಪ್ಪಿಗೆ

- ವಿದೇಶಿ ವಿನಿಮಯ ಸಂಗ್ರಹ ಏರಿಕೆ
- ನ್ಯೂಜಿಲೆಂಡ್ ಜೊತೆ ಎಫ್‌ಟಿಎ ಅಂತಿಮ
- ಕಾರವಾರ ಕದಂಬ ನೌಕಾನೆಲೆ
- 20 ಸಾಧಕ ಮಕ್ಕಳಿಗೆ ಬಾಲ ಪುರಸ್ಕಾರ

## ❖ ಒಳಮೀಸಲಾತಿ ಮಸೂದೆಗೆ ಪರಿಷತ್ ಒಪ್ಪಿಗೆ

**ಸಂದರ್ಭ: ಪರಿಶಿಷ್ಟಜಾತಿ ಯವರಿಗೆ ಒಳಮೀಸಲಾತಿ ಕಲ್ಪಿಸುವ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳಿಗೆ ಕಾನೂನಾತ್ಮಕ ರಕ್ಷಣೆ ನೀಡುವ ಉದ್ದೇಶದ ಮಸೂದೆಗೆ ವಿಧಾನ ಪರಿಷತ್ತು ಅಂಗೀಕಾರ ನೀಡಿದೆ.**

- ಸಮಾಜ ಕಲ್ಯಾಣ ಸಚಿವ ವಿಧಾನ ಪರಿಷತ್ತಿನಲ್ಲಿ 'ಕರ್ನಾಟಕ ಅನುಸೂಚಿತ ಜಾತಿಗಳ (ಉಪವರ್ಗೀಕರಣ) ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದರು.

**ಇತರ ಮಸೂದೆಗಳು: ।ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ–2025**

- ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ (ತಿದ್ದುಪಡಿ) ಮಸೂದೆ–2025
- ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆ–2025

## ❖ ಕಾರಾಗೃಹಗಳಲ್ಲಿ ಎಐ ಆಧಾರಿತ ಭದ್ರತೆ

**ಸಂದರ್ಭ: ರಾಜ್ಯದ ಎಲ್ಲ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳನ್ನು ಪತ್ತೆಹಚ್ಚಲು ಕೃತಕ ಬುದ್ದಿಮತ್ತೆ (ಎಐ) ಆಧಾರಿತ ಭದ್ರತಾ ತಂತ್ರಾಂಶವನ್ನು ಅಳವಡಿಸಲಾಗುತ್ತದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ವಿಧಾನ ಸಭೆಯಲ್ಲಿ ಹೇಳಿದರು.**

- 'ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆ ಯನ್ನು ಬಲಪಡಿಸಿ, ಬಂದಿಗಳ ಚಲನವಲನಗಳ ಮೇಲೆ ಇನ್ನೂ ಹೆಚ್ಚಿನ ನಿಗಾವಹಿಸಲು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 'ಎಐ– ಆಡಿಯೊ–ವಿಡಿಯೊ ಅನಾಲಿಟಿಕ್ಸ್ ಸಿಸ್ಟಮ್' ಸಿಸಿಟಿವಿ ಕಣ್ಗಾವಲು ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದನ್ನು ಎಲ್ಲ ಕಾರಾಗೃಹಗಳಿಗೂ ವಿಸ್ತರಿಸಲಾಗುವುದು' ಎಂದರು.
- ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ನಿಯಮ 69ರ ಅಡಿ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಪರಮೇಶ್ವರ, 'ರಾಜ್ಯದ ಯಾವುದೇ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳು ಇರದಂತೆ ತಪಾಸಣೆ ಮಾಡಿ, ಡಿ.31ರೊಳಗೆ ಎಲ್ಲ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಾಗೃಹ ಸಿಬ್ಬಂದಿಗೆ ಸೂಚಿಸಲಾಗಿದೆ' ಎಂದರು.
- ಬಂದಿಗಳನ್ನು ಎ, ಬಿ, ಸಿ ಮಾದರಿಯಲ್ಲಿ ವರ್ಗೀಕರಿಸಿ, ಸೂಕ್ಷ್ಮವಾಗಿ ಮೇಲ್ವಿಚಾರಣೆ ನಡೆಸ ಲಾಗುತ್ತದೆ. ನಿಷೇಧಿತ ವಸ್ತುಗಳನ್ನು ಸರಬರಾಜು ಮಾಡುವ ಸಿಬ್ಬಂದಿ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಸಿಬ್ಬಂದಿಯ ಕರ್ತವ್ಯದ ಆಡಿಟ್ ಮಾಡಿ, ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

Dr. Rajkumar IAS Academy

## ❖ ಅರಣ್ಯ ಗುತ್ತಿಗೆ ಕಾನೂನುಬಾಹಿರ: ಕೇಂದ್ರದ ಪೂರ್ವಾನುಮತಿ ಇಲ್ಲದೆ ಭೂಬಳಕೆ ಸಲ್ಲ: ಸುಪ್ರೀಂ

**ಸಂದರ್ಭ: 1980ರ ಅರಣ್ಯ (ಸಂರಕ್ಷಣಾ) ಕಾಯ್ದೆಯ ಸೆಕ್ಷನ್ 2ರ ಅಡಿ ಯಲ್ಲಿ ಕೇಂದ್ರ ಸರ್ಕಾರದ ಪೂರ್ವಾ ನುಮತಿ ಇಲ್ಲದೆ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಲು ಅಥವಾ ಕೃಷಿ ಉದ್ದೇಶಗಳಿಗಾಗಿ ಬಳಸಲು ಸಾಧ್ಯವಿಲ್ಲ. ಕಾನೂನು ಉಲ್ಲಂಘಿಸಿ ನೀಡಿದ ಅಂತಹ ಯಾವುದೇ ಗುತ್ತಿಗೆ ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.**

- ಕಲಘಟಗಿ ತಾಲ್ಲೂಕಿನ ಗಾಂಧಿ ಜೀವನ್ ಸಾಮೂಹಿಕ ಕೃಷಿ ಸಹಕಾರ ಸಂಘಕ್ಕೆ 134 ಎಕರೆ ಅರಣ್ಯ ಭೂಮಿಯ ಗುತ್ತಿಗೆ ಮುಂದುವರಿಸಲು ಅವಕಾಶ ನೀಡಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ರದ್ದುಪಡಿಸಿದೆ.
- ಅರಣ್ಯ ಭೂಮಿಯನ್ನು ಕೃಷಿ ಉದ್ದೇಶ ಗಳಿಗಾಗಿ ಗುತ್ತಿಗೆ ನೀಡುವುದೇ ಕಾನೂನು ಬಾಹಿರ ಮತ್ತು 1980ರ ಕಾಯ್ದೆಗೆ ವಿರುದ್ಧವಾಗಿದೆ ಎಂದು ಅಭಿಪ್ರಾಯಪಟ್ಟಿ ರುವ ನ್ಯಾಯಪೀಠವು, 'ತಜ್ಞರೊಂದಿಗೆ ಸಮಾಲೋಚಿಸಿ ಸ್ಥಳೀಯ ಸಸ್ಯಗಳು ಮತ್ತು ಮರಗಳನ್ನು ನೆಡುವ ಮೂಲಕ 134 ಎಕರೆ ಪ್ರದೇಶದಲ್ಲಿ ಅರಣ್ಯವನ್ನು ಪುನರ್‌ಸ್ಥಾಪಿಸಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು. ಈ ಸಂಬಂಧ 12 ತಿಂಗಳಲ್ಲಿ ಅನುಸರಣಾ ವರದಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿದೆ.
- 'ಪ್ರತಿವಾದಿ ಸಹಕಾರ ಸಂಘಕ್ಕೆ ಕೃಷಿ ಉದ್ದೇಶಗಳಿಗಾಗಿ ಅರಣ್ಯಭೂಮಿ ಗುತ್ತಿಗೆ ನೀಡಿದ್ದು ಸರಿಯಲ್ಲ. ಇದರಿಂದಾಗಿ, ಸುಮಾರು 134 ಎಕರೆಗಳಷ್ಟು ವಿಸ್ತಾರ ವಾದ ಅರಣ್ಯ ಪ್ರದೇಶ ನಾಶವಾಯಿತು. ಅಲ್ಲದೇ, ಸಹಕಾರ ಸಂಘವು 10 ವರ್ಷಗಳಿಗೂ ಹೆಚ್ಚು ಕಾಲ ಅರಣ್ಯ ಪ್ರದೇಶದ ಗುತ್ತಿಗೆ ಪಡೆದಿತ್ತು. ಗುತ್ತಿಗೆಯ ವಿಸ್ತರಣೆಗೆ ಸಂಘ ಅರ್ಹತೆಯನ್ನೇ ಹೊಂದಿರಲಿಲ್ಲ' ಎಂದು ಪೀಠ ಹೇಳಿದೆ.

**ಪ್ರಕರಣವೇನು?**

- ಕಲಘಟಗಿ ತಾಲ್ಲೂಕಿನ ಬೆಣಚಿ ಮತ್ತು ತುಮರಿಕೊಪ್ಪ ಗ್ರಾಮಗಳಲ್ಲಿರುವ 134 ಎಕರೆ ಮತ್ತು 6 ಗುಂಟೆಯನ್ನು ಸಹಕಾರ ಸಂಘಕ್ಕೆ ಹತ್ತು ವರ್ಷಗಳ ಅವಧಿಗೆ ಅರಣ್ಯ ಇಲಾಖೆ 1976ರಲ್ಲಿ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆ ಅವಧಿಯಲ್ಲಿ, ಸಂಘದ ಸದಸ್ಯರು ಮರಗಳನ್ನು ಕಡಿದು ಭೂಮಿಯಲ್ಲಿ ಸಾಗುವಳಿ ಮಾಡಿದ್ದರು. ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಅರಣ್ಯ ಇಲಾಖೆ 1985ರಲ್ಲಿ ನಿರಾಕರಿಸಿತ್ತು.
- ಈ ಆದೇಶ ಪ್ರಶ್ನಿಸಿ ಸಂಘವು 1987ರಲ್ಲಿ ಹೈಕೋರ್ಟ್ ಮೊರೆ ಹೋಗಿತ್ತು. ಈ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಆ ಬಳಿಕ, ಈ ಜಾಗವನ್ನು ಸ್ವಾಧೀನಕ್ಕೆ ಪಡೆಯಲು ಅರಣ್ಯ ಇಲಾಖೆ ಪ್ರಕ್ರಿಯೆ ಆರಂಭಿಸಿತ್ತು. ಜಾಗ ಸ್ವಾಧೀನಕ್ಕೆ ಅರಣ್ಯ ಸಂರಕ್ಷಣಾಧಿಕಾರಿ 2004ರಲ್ಲಿ ಆದೇಶ ಹೊರಡಿಸಿದ್ದರು. ಸಂಘ ಸಲ್ಲಿಸಿದ್ದ ಮೇಲ್ಮನವಿಯನ್ನು ಅರಣ್ಯ ಸಂರಕ್ಷಣಾಧಿಕಾರಿ 2006ರಲ್ಲಿ ತಿರಸ್ಕರಿಸಿದ್ದರು. ಅರಣ್ಯ ಇಲಾಖೆಯು ಜಾಗವನ್ನು 2007ರಲ್ಲಿ ಸ್ವಾಧೀನಪಡಿಸಿಕೊಂಡಿತ್ತು.
- ಹೈಕೋರ್ಟ್‌ನ 2009ರ ತೀರ್ಪನ್ನು ಪ್ರಶ್ನಿಸಿ ಕರ್ನಾಟಕ ಅರಣ್ಯ ಇಲಾಖೆ ಸಲ್ಲಿಸಿದ ಸಿವಿಲ್ ಮೇಲ್ಮನವಿ ಅರ್ಜಿಯನ್ನು ನ್ಯಾಯಪೀಠ ಪುರಸ್ಕರಿಸಿದೆ.
- ಈ ಜಾಗವು ಅರಣ್ಯ ಇಲಾಖೆಯ ಸ್ವಾಧೀನದಲ್ಲಿದ್ದು, ಯಾವುದೇ ಸಾಗುವಳಿ ಇಲ್ಲ ಎಂದು ಅರಣ್ಯ ಇಲಾಖೆಯು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿತು. ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ 1996 ಹಾಗೂ 2000ರಲ್ಲಿ ತೀರ್ಪು ನೀಡಿದೆ ಎಂದೂ ವಾದಿಸಿತು.
- ಈ ವಾದಗಳನ್ನು ಅಂಗೀಕರಿಸಿದ ನ್ಯಾಯಪೀಠವು, 'ದೊಡ್ಡ ಪ್ರಮಾಣದಲ್ಲಿ ಅರಣ್ಯನಾಶಕ್ಕೆ ಕಾರಣ ಆಗಿರುವುದರಿಂದ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡು ವುದೇ ಅನಪೇಕ್ಷಿತ. ಗುತ್ತಿಗೆ ನೀಡುವ ಹಂತದಲ್ಲಿ ನಡೆದ ಅಕ್ರಮವನ್ನು ಶಾಶ್ವತ ಗೊಳಿಸಲು ಅನುಮತಿಯನ್ನು ಮುಂದು ವರಿಸುವುದು ಸರಿಯಲ್ಲ ಎಂದಿದೆ.

Dr. Rajkumar IAS/KAS Academy

- ಅರಣ್ಯ ಇಲಾಖೆಯು 2007ರಲ್ಲೇ ಭೂಮಿಯನ್ನು ಸ್ವಾಧೀನಕ್ಕೆ ಪಡೆದಿರು ವುದರಿಂದ, ಸಂಘಕ್ಕೆ ಗುತ್ತಿಗೆ ಮುಂದು ವರಿಸಲು ಅವಕಾಶ ನೀಡುವ ಹೈಕೋರ್ಟ್ ನಿರ್ದೇಶನವು ಕಾನೂನಿ ನಲ್ಲಿ ಸಮರ್ಥನೀಯವಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

## ❖ 'ಉತ್ತರ'ದ ಅಭಿವೃದ್ಧಿಗೆ ಬದ್ಧ': ಎಷ್ಟೇ ವೆಚ್ಚವಾದರೂ ಶಿಫಾರಸುಗಳ ಅನುಷ್ಠಾನ: ಸಿ.ಎಂ

**ಸಂದರ್ಭ: 'ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಂಬಂಧಿಸಿದಂತೆ ಆರ್ಥಿಕ ತಜ್ಞ ಪ್ರೊ.ಎಂ. ಗೋವಿಂದ ರಾವ್ ಸಮಿತಿ ನೀಡಲಿರುವ ವರದಿಯಲ್ಲಿನ ಶಿಫಾರಸುಗಳನ್ನು ಜಾರಿಗೆ ತರುವ ಮೂಲಕ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಶ್ರಮಿಸಲು ಬದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.**

- **ಮುಖ್ಯಮಂತ್ರಿ ಹೇಳಿದ್ದೇನು?:** 'ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ನಂಜುಂಡಪ್ಪ ಸಮಿತಿ ರಚನೆಯಾಗಿತ್ತು. ನಂಜುಂಡಪ್ಪ ವರದಿಯ ಬಳಿಕ ನೀಡಿದ ಅನುದಾನಗಳ ಬಳಕೆ, ಅನುಷ್ಠಾನ ಮತ್ತು ಫಲಿತಾಂಶದ ಬಗ್ಗೆ ಅಧ್ಯಯನ ಮಾಡಲು ಗೋವಿಂದ್ ರಾವ್ ಸಮಿತಿ ರಚನೆ ಮಾಡಿದ್ದೇವೆ. ಸಮಿತಿಯ ವರದಿಯ ಪ್ರಕಾರ, ಯಾವ ಜಿಲ್ಲೆ ಹಿಂದುಳಿದಿದೆಯೊ ಆ ಜಿಲ್ಲೆಗಳಿಗೆ ಹೆಚ್ಚು ಒತ್ತು ಕೊಟ್ಟು ಶಕ್ತಿ ತುಂಬುವ ಕೆಲಸ ಮಾಡಲಾಗುವುದು' ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.
- 'ಕರ್ನಾಟಕದ ಎಲ್ಲ ಜನರ ತಲಾ ಆದಾಯ ಹೆಚ್ಚಬೇಕೆನ್ನುವುದು ನಮ್ಮ ಉದ್ದೇಶ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇಲ್ಲಿಯವರೆಗೆ ಸರ್ಕಾರ ಕೆಲಸ ಮಾಡಿದೆ. ಮುಂದೆಯೂ ಹೆಚ್ಚು ಒತ್ತು ನೀಡಿ, ಸಾಧ್ಯವಾದ ಮಟ್ಟಿಗೆ ತಲಾದಾಯದ ಅಂತರ ಕಡಿಮೆ ಮಾಡಲಾಗುವುದು' ಎಂದು ಹೇಳಿದರು.

## ❖ ಜಿಬಿಎ: 12 ಮಾರ್ಗಸೂಚಿ

**ಸಂದರ್ಭ: ಐದು ನಗರ ಪಾಲಿಕೆಗಳ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಲು 12 ಮಾರ್ಗಸೂಚಿಗಳನ್ನು ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.**

- ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024ರಂತೆ ರಚನೆಯಾಗಿರುವ ಐದು ನಗರ ಪಾಲಿಕೆಗಳ ವಾರ್ಡ್ ಮೀಸಲಾತಿ ನಿಗದಿಪಡಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2025ರ ಸೆಪ್ಟೆಂಬರ್ 29ರಂದು ಸಮಿತಿ ರಚಿಸಲಾಗಿತ್ತು.
- ಜಿಬಿಎ ಮುಖ್ಯ ಆಯುಕ್ತ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿ ಅವರು ಸಮಿತಿಯ ಸದಸ್ಯರಾಗಿದ್ದರು.
- ಈ ಸಮಿತಿ ಡಿ.12ರಂದು ಸಭೆ ನಡೆಸಿದ್ದು, ವಾರ್ಡ್ ಮೀಸಲಾತಿ ನಿಗದಿಗೆ ಮಾರ್ಗಸೂಚಿಗಳನ್ನು ಹೊರಡಿಸಬೇಕು ಎಂದು ಅಭಿಪ್ರಾಯಪಟ್ಟಿತು. ಅದರಂತೆ, ಡಿ.19ರಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

### ಮಾರ್ಗಸೂಚಿಗಳು

- ಕೇಂದ್ರ ಸರ್ಕಾರದ ಜನಗಣತಿ ನಿರ್ದೇಶನಾಲಯವು ಅಧಿಕೃತವಾಗಿ ಪ್ರಕಟಿಸಿರುವ 2011ರ ಜನಗಣತಿಯ ಮಾಹಿತಿಯನ್ನು ಪರಿಗಣಿಸಬೇಕು
- ಪರಿಶಿಷ್ಟ ಜಾತಿ/ ಪಂಗಡದವರಿಗೆ ಮೀಸಲಿರಿಸುವ ಸ್ಥಾನಗಳ ಸಂಖ್ಯೆಯನ್ನು ಆಯಾ ನಗರ ಪಾಲಿಕೆಯ ಒಟ್ಟು ಜನಸಂಖ್ಯೆಗೆ ಅನುಸಾರವಾಗಿ ಹಾಗೂ ಒಟ್ಟು ವಾರ್ಡ್‌ಗಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಬೇಕು
- ಒಟ್ಟು ವಾರ್ಡ್‌ಗಳ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು ವಾರ್ಡ್‌ಗಳ ಮೀಸಲಾತಿಯನ್ನು ಹಿಂದುಳಿತ ವರ್ಗಗಳಿಗೆ ನಿಗದಿಪಡಿಸಬೇಕು. ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ.
- ಎಸ್‌ಸಿ, ಎಸ್‌ಟಿ ಮೀಸಲು ಸ್ಥಾನ ನಿಗದಿಪಡಿಸುವಾಗ ವಾರ್ಡ್‌ಗಳಲ್ಲಿ ಆಯಾ ಪ್ರವರ್ಗದಲ್ಲಿ ಇಳಿಮುಖವಾಗುವ ಜನಸಂಖ್ಯೆಯನ್ನು ಪರಿಗಣಿಸಬೇಕು
- ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸಿ ಬಳಿಕ, ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ವಾರ್ಡ್ ಅನ್ನು ನಿಗದಿಪಡಿಸಬೇಕು.
- ಎಸ್‌ಸಿ, ಎಸ್‌ಟಿಗೆ ಮೀಸಲಾದ ಸ್ಥಾನಗಳಲ್ಲಿ ಶೇ 50ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲಿರಬೇಕು.
- ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿ ಹಾಗೂ ಸಾಮಾನ್ಯ ಸ್ಥಾನಗಳ ಪ್ರಮಾಣ ಆಯಾ ನಗರ ಪಾಲಿಕೆ ಮಟ್ಟದಲ್ಲಿ ಕಾಯ್ದುಕೊಳ್ಳಬೇಕು
- ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ಸ್ಥಾನಗಳಲ್ಲಿ ಶೇ 80ರಷ್ಟನ್ನು ಪ್ರವರ್ಗ–ಎ ಮತ್ತು ಶೇ 20ರಷ್ಟನ್ನು ಪ್ರವರ್ಗ–ಬಿ ಅಭ್ಯರ್ಥಿಗಳಿಗೆ ಮೀಸಲಿರಿಸಬೇಕು.
- ಹಿಂದುಳಿದ ಪ್ರವರ್ಗ ಎ ಮತ್ತು ಪ್ರವರ್ಗ ಬಿಗಳಲ್ಲಿ ಶೇ 50ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಬೇಕು.
- ಆಯಾ ನಗರ ಪಾಲಿಕೆಯಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ಪ್ರವರ್ಗ ಎ ಮತ್ತು ಪ್ರವರ್ಗ ಬಿಗಳಿಗೆ ಹಂಚಿಕೆ ಮಾಡಿ, ಉಳಿದ ಸ್ಥಾನಗಳನ್ನು ಸಾಮಾನ್ಯ ಎಂದು ವರ್ಗೀಕರಿಸಬೇಕು
- ಸಾಮಾನ್ಯ ಸ್ಥಾನಗಳಲ್ಲಿ ಶೇ 50ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸಬೇಕು
- ಮೀಸಲಿರಿಸಿದ ಸ್ಥಾನಗಳನ್ನು ಪುನರಾವರ್ತನೆ ಆಗದಂತೆ ನಗರ ಪಾಲಿಕೆಯ ಬೇರೆ ಬೇರೆ ವಾರ್ಡ್‌ಗಳಿಗೆ ಸರದಿ ಮೂಲಕ ಮೀಸಲಾತಿಯನ್ನು ಹಂಚಿಕೆ ಮಾಡಬೇಕು. ಸಾಮಾನ್ಯ ಸ್ಥಾನಗಳಿಗೆ ಪುನರಾವರ್ತನೆ ಪರಿಗಣಿಸುವಂತಿಲ್ಲ.

Dr. Rajkumar IAS/KAS Academy

## ❖ ದಕ್ಷಿಣ ಪಿನಾಕಿನಿ ನ್ಯಾಯಮಂಡಳಿ: 'ಸುಪ್ರೀಂ' ಇಂಗಿತ

**ಸಂದರ್ಭ: ತೀರ್ಪು ಕಾಯ್ದಿರಿಸಿದ ದ್ವಿಸದಸ್ಯ ನ್ಯಾಯಪೀಠ । ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿ ವಿಚಾರಣೆ: ನದಿ ತೀರದ ರಾಜ್ಯಗಳು ಮಾತುಕತೆ ನಡೆಸಲು ನಿರಾಕರಿಸಿದರೆ, ಕೇಂದ್ರ ಸರ್ಕಾರವು ಸಭೆ ಕರೆಯಲು ಸಾಧ್ಯವಿಲ್ಲ.ಐಶ್ವರ್ಯ ಭಾಟಿ,ಹೆಚ್ಚುವರಿ ಸಾಲಿಸಿಟರ್ ಜನರಲ್.**

- ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯ ಮಂಡಳಿ ರಚಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಇಂಗಿತ ವ್ಯಕ್ತಪಡಿಸಿದೆ.
- ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಎನ್.ವಿ.ಅಂಜಾರಿಯಾ ಪೀಠವು, 'ವಿವಾದ ಇತ್ಯರ್ಥಪಡಿಸಲು ನ್ಯಾಯ ಮಂಡಳಿ ರಚಿಸುವುದು ಸೂಕ್ತ. ಆಗ ಉಭಯ ರಾಜ್ಯಗಳು ತಮ್ಮ ವಾದ ಗಳನ್ನು ಅಲ್ಲಿ ಮಂಡಿಸುತ್ತವೆ' ಎಂದು ಅಭಿಪ್ರಾಯಪಟ್ಟಿತು. ಎರಡೂ ರಾಜ್ಯಗಳ ವಾದಗಳನ್ನು ಆಲಿಸಿದ ನ್ಯಾಯಪೀಠವು ತೀರ್ಪನ್ನು ಕಾಯ್ದಿರಿಸಿತು.

- **ಜಲವಿವಾದವೇನು?: ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು. ಜಲವಿವಾದ ನ್ಯಾಯ ಮಂಡಳಿ ಸ್ಥಾಪಿಸುವಂತೆ ಒತ್ತಾಯಿಸಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ 2019ರ ನವೆಂಬರ್‌ನಲ್ಲಿ ಮನವಿ ಮಾಡಿತ್ತು.**
- ಜಲಶಕ್ತಿ ಸಚಿವಾಲಯವು 2020ರಲ್ಲಿ ಸಂಧಾನ ಸಭೆ ನಡೆಸಿತ್ತು. ಆದರೆ, ರಾಜ್ಯ ಸರ್ಕಾರಗಳು ಒಮ್ಮತಕ್ಕೆ ಬಂದಿರಲಿಲ್ಲ. ಹೊಸದಾಗಿ ಸಂಧಾನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರವನ್ನು 2024ರ ಜೂನ್ ನಲ್ಲಿ ಒತ್ತಾಯಿಸಿತ್ತು.
- ಈ ನಡುವೆ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ, ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಜಲಶಕ್ತಿ ಸಚಿವಾಲಯವು ಹೊಸ ಸಂಧಾನ ಸಮಿತಿ ರಚಿಸಿತ್ತು. ಈ ಸಮಿತಿಯು ಉಭಯ ರಾಜ್ಯಗಳ ನಡುವೆ 9 ಸಭೆಗಳನ್ನು ನಡೆಸಿತ್ತು. ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿತ್ತು.
- ಜಲ ವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಕರ್ನಾಟಕ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು. ಮಾತುಕತೆಯ ಮೂಲಕ ಈ ವಿವಾದವನ್ನು ಸೌಹಾರ್ದ ಯುತವಾಗಿ ಬಗೆಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಜಲಶಕ್ತಿ ಸಚಿವಾಲಯಕ್ಕೆ ಪತ್ರ ಬರೆದಿತ್ತು.
- ಕರ್ನಾಟಕದ ಜಲಾನಯನ ಪ್ರದೇಶದಲ್ಲಿ ಒಟ್ಟು 11.77 ಟಿಎಂಸಿ ನೀರಿನಲ್ಲಿ 9.77 ಟಿಎಂಸಿ ನೀರನ್ನು ಬಳಸಲು ಯೋಜಿಸಲಾಗಿದೆ. ಇದರಲ್ಲಿ 2 ಟಿಎಂಸಿ ಮತ್ತು ಹೆಚ್ಚುವರಿ ನೀರು ತಮಿಳುನಾಡಿಗೆ ಉಳಿದಿದೆ. ಇದು ತಮಿಳುನಾಡಿನ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುತ್ತದೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು.

**‘ನ್ಯಾಯಮಂಡಳಿ ರಚಿಸುವ ಅಗತ್ಯವಿಲ್ಲ’**

- ಕೇಂದ್ರ ಸರ್ಕಾರವು 2025ರ ಜನವರಿ 2ರಂದು ಸಲ್ಲಿಸಿದ ಪ್ರಮಾಣಪತ್ರದ ಪ್ರಕಾರ, ಸಚಿವರ ಸಭೆ ನಡೆಸುವ ಮೂಲಕ ಮಾತುಕತೆಯಿಂದಲೇ ಜಲ ವಿವಾದ ಪರಿಹರಿಸಲು ರಾಜ್ಯಗಳಿಗೆ ಇನ್ನೊಂದು ಅವಕಾಶ ನೀಡಬೇಕು. ಇದೊಂದು ಸಣ್ಣ ವಿವಾದ. ನ್ಯಾಯಮಂಡಳಿ ರಚಿಸುವ ಅಗತ್ಯವೇ ಇಲ್ಲ.

## ❖ ಅಣುಶಕ್ತಿ: ಖಾಸಗಿ ಸಹಭಾಗಿತ್ವ ಕೇಂದ್ರ ಸರ್ಕಾರದ ಹುಲಿಸವಾರಿ

**ಸಂದರ್ಭ: ಅಣುಶಕ್ತಿ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ಮಸೂದೆಗೆ ಸಂಸತ್ತು ಅಂಗೀಕಾರ ನೀಡಿದ್ದು, ಈ ಮಸೂದೆ ದೇಶದ ಒಟ್ಟಾರೆ ಅಣುಶಕ್ತಿ ನೀತಿಗೆ ಸಂಬಂಧಿಸಿದಂತೆ ಹೊಸ ಸಾಧ್ಯತೆ ಮತ್ತು ಸವಾಲುಗಳಿಗೆ ಅವಕಾಶ ಕಲ್ಪಿಸಲಿದೆ.**

- ‘ಭಾರತದ ಪ್ರಗತಿಗಾಗಿ ಅಣುಶಕ್ತಿ ಸುಸ್ಥಿರ ಉತ್ಪಾದನೆ’ (ಎಸ್‌ಎಚ್‌ಎಎನ್‌ಟಿಐ– ಶಾಂತಿ ಮಸೂದೆ)ಹೆಸರಿನ ಮಸೂದೆಯು, ಅಣುಶಕ್ತಿ ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವದ ಜೊತೆಗೆ ವಿದೇಶಿ ಹೂಡಿಕೆಗೂ ಅವಕಾಶ ಕಲ್ಪಿಸಲಿದೆ.
- 1962ರ ‘ಅಣುಶಕ್ತಿ ಕಾಯ್ದೆ’ ಹಾಗೂ ಪರಮಾಣು ಹಾನಿಗೆ ಸಂಬಂಧಿಸಿದ 2010ರ ನಾಗರಿಕ ಹೊಣೆಗಾರಿಕೆ ಕಾಯ್ದೆಯನ್ನು ಬದಲಾವಣೆ ಮಾಡಿ ಈ ಮಸೂದೆ ಮಂಡಿಸಲಾಗಿದೆ. ಈ ಎರಡೂ ಕಾಯ್ದೆಗಳು ಪರಮಾಣು ನೀತಿಗೆ ಸಂಬಂಧಿಸಿದಂತೆ ಕಠಿಣ ನಿಬಂಧನೆಗಳನ್ನು ಹೊಂದಿದ್ದವು. ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಅಣು ವಿದ್ಯುತ್ ಉತ್ಪಾದನೆಯ ಪಾಲು ಶೇ 3ರಷ್ಟಿದೆ.
- 2047ರ ವೇಳೆಗೆ 100 ಗಿಗಾವಾಟ್‌ನಷ್ಟು ಅಣು ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಈ ಗುರಿ ಸಾಧನೆಗೆ ಅಗತ್ಯವಾಗಿರುವ ಉದಾರ ಆಡಳಿತ ನೀತಿಗೆ ಹೊಸ ಮಸೂದೆಯು ಅವಕಾಶ ಕಲ್ಪಿಸಲಿದೆ ಎಂದು ಹೇಳಲಾಗಿದೆ.
- ತೀವ್ರಗೊಳ್ಳುತ್ತಿರುವ ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ, ಕಲ್ಲಿದ್ದಲು ಆಧರಿತ ವಿದ್ಯುತ್ ಉತ್ಪಾದನೆಯನ್ನು ನಿಯಂತ್ರಣದಲ್ಲಿ ಇರಿಸುವುದು ಹಾಗೂ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಮಾರ್ಗಗಳನ್ನು ಬಲಪಡಿಸುವುದು ಅನಿವಾರ್ಯ.
- ಆದರೆ ಜಲಶಕ್ತಿ, ಸೌರಶಕ್ತಿ ಹಾಗೂ ಪವನಶಕ್ತಿ ಬಳಸಿಕೊಂಡು ವಿದ್ಯುತ್ ಉತ್ಪಾದಿಸುವುದಕ್ಕೆ ಸಾಕಷ್ಟು ಮಿತಿಗಳಿವೆ. ಹಾಗಾಗಿಯೇ, ಅಣು ವಿದ್ಯುತ್ ಉತ್ಪಾದನೆ ಹೆಚ್ಚಿಸಬೇಕಾದ ಅನಿವಾರ್ಯತೆ ಉಂಟಾಗಿದೆ.
- ಅಣು ವಿದ್ಯುತ್ ಉತ್ಪಾದನೆಯಲ್ಲಿ ಸರ್ಕಾರಿ ಸಂಸ್ಥೆಗಳು ಮಾತ್ರವಲ್ಲದೆ, ದೇಶೀಯ ಹಾಗೂ ವಿದೇಶಿ ಖಾಸಗಿ ಸಂಸ್ಥೆ ಗಳ ಭಾಗವಹಿಸುವಿಕೆಯನ್ನು ಉತ್ತೇಜಿ ಸುವುದು ಈ ಮಸೂದೆಯ ಉದ್ದೇಶ ವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.
- ಈ ಸಂಸ್ಥೆಗಳಿಗೆ ಪರವಾನಗಿ ನೀಡುವ ಅವಕಾಶವನ್ನು ಹೊಸ ಮಸೂದೆ ಕೇಂದ್ರಕ್ಕೆ ಒದಗಿಸಲಿದೆ. ಇಲ್ಲಿಯವರೆಗೆ, ಅಣು ವಿದ್ಯುತ್ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಭಾರತೀಯ ಅಣು ವಿದ್ಯುತ್ ನಿಗಮ (ಎನ್‌ಪಿಸಿಐಎಲ್) ಮಾತ್ರ ಅಧಿಕಾರ ಹೊಂದಿತ್ತು.
- ಪರಮಾಣು ಸ್ಥಾವರದ ನಿರ್ವಹಣೆ ಮತ್ತು ಪೂರೈಕೆ ನಿರ್ವಹಣೆಗೆ ಸಂಬಂಧಿಸಿದ ಕೆಲವು ಕ್ಷೇತ್ರಗಳಲ್ಲಿ ಖಾಸಗಿ ಭಾಗವಹಿಸು ವಿಕೆ ಇದ್ದರೂ, ಮುಖ್ಯ ಹಾಗೂ ಬಹುಸೂಕ್ಷ್ಮ ಕ್ಷೇತ್ರಗಳ ನಿರ್ವಹಣೆ ಸರ್ಕಾರದ ಅಧೀನದಲ್ಲೇ ಇತ್ತು.
- ಈ ನಿರ್ಬಂಧಗಳನ್ನು ಮಸೂದೆಯು ತೆರವುಗೊಳಿಸಲಿದ್ದು, ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಶ್ರೇಣೀಕೃತ ಹೊಣೆಗಾರಿಕೆ ವ್ಯವಸ್ಥೆಗೆ ಅವಕಾಶ ಕಲ್ಪಿಸಲಿದೆ.
- ಕಾನೂನು ಚೌಕಟ್ಟಿನ ಸರಳೀಕರಣ ಹಾಗೂ ವಹಿವಾಟು ವೆಚ್ಚಗಳ ಕಡಿತ ಸಾಧ್ಯವಾಗಲಿದ್ದು, ಆಡಳಿತಾತ್ಮಕ ಅನುಮೋದನೆಗಳಿಗೆ ಸಂಬಂಧಿಸಿದ ವಿಳಂಬವನ್ನೂ ಕಡಿಮೆ ಮಾಡುವ ಗುರಿಯನ್ನು ಮಸೂದೆ ಹೊಂದಿದೆ.

Dr. Rajkumar IAS/KAS Academy

- ಪೇಟೆಂಟ್ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಸಂಶೋಧನೆಗಳನ್ನು ಉತ್ತೇಜಿಸುವ ಗುರಿಯನ್ನೂ ಹೊಂದಿದೆ.
- ಅಣುಶಕ್ತಿ ಕ್ಷೇತ್ರದಲ್ಲಿ ಖಾಸಗಿಯವರಿಗೆ ಅವಕಾಶ ಕಲ್ಪಿಸುವ ಚಿಂತನೆ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಪೂರಕವಾಗಿದ್ದರೂ, ಮಸೂದೆಯಲ್ಲಿನ ಕೆಲವು ಅಂಶಗಳು ಆತಂಕಕ್ಕೆ ಕಾರಣ ಆಗುವಂತಿವೆ.
- ಯುಪಿಎ ಸರ್ಕಾರದ ಮೈಲಿಗಲ್ಲುಗಳಲ್ಲಿ ಒಂದಾದ ಭಾರತ–ಅಮೆರಿಕ ಪರಮಾಣು ಒಪ್ಪಂದ ಮತ್ತು 2010ರ ಕಾಯ್ದೆಯೂ ಖಾಸಗಿ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸಿತ್ತು. ಆದರೆ, ಅಮೆರಿಕದ ಪೂರೈಕೆದಾರರು ಭಾರತೀಯ ಕಾನೂನು ನಿರ್ಬಂಧಗಳ ಬಗ್ಗೆ, ವಿಶೇಷವಾಗಿ ಉತ್ತರದಾಯಿತ್ವದ ಕಾನೂನುಗಳ ಬಗ್ಗೆ ಎಚ್ಚರದಿಂದಿದ್ದರು.
- ಈ ಹೊಣೆಗಾರಿಕೆಗೆ ವಿಧಿಸಿದ್ದ ನಿಬಂಧನೆಗಳನ್ನು ಪ್ರಸ್ತಾವಿತ ಮಸೂದೆಯು ತೆಗೆದುಹಾಕಿದೆ. ಪರಮಾಣು ಸ್ಥಾವರಗಳಲ್ಲಿ ದುರಂತ ಸಂಭವಿಸಿದರೆ ಸ್ಥಾವರದ ನಿರ್ವಹಣೆ ಹೊತ್ತ ಸಂಸ್ಥೆಯು ಪಾವತಿಸಬೇಕಾದ ಗರಿಷ್ಠ ಹೊಣೆಗಾರಿಕೆಯ ಮೊತ್ತವು, ಆ ಸಂಸ್ಥೆ ಬಳಕೆ ಮಾಡುವ ಪರಮಾಣು ಸ್ಥಾವರದ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ.
- ಈ ಹೊಣೆಗಾರಿಕೆ ಮೊತ್ತವನ್ನು ₹3 ಸಾವಿರ ಕೋಟಿಗೆ ಮಿತಿಗೊಳಿಸಿದೆ. ಜೊತೆಗೆ ಪರಿಹಾರ ನೀಡಬೇಕಾದ ಜವಾಬ್ದಾರಿಯನ್ನೂ ಮಿತಗೊಳಿಸಲಿದೆ. ಬಹು ಸಂಕೀರ್ಣವಾದ ಅಣುಶಕ್ತಿ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಖಾಸಗಿಯವರಿಗೆ ಅವಕಾಶ ಕಲ್ಪಿಸುವ ಹಾಗೂ ಅವರಿಗೆ ಶಾಸನಬದ್ಧ ಸುರಕ್ಷತೆ ಒದಗಿಸುವ ನಿರ್ಧಾರ ಪ್ರತಿ ಪಕ್ಷಗಳ ಟೀಕೆಗೆ ಸಹಜವಾಗಿಯೇ ಒಳಗಾಗಿದೆ.
- ಪರಿಹಾರಕ್ಕೆ ಸಂಬಂಧಿಸಿದಂತೆ ನ್ಯಾಯಾಂಗದ ವ್ಯಾಪ್ತಿಯನ್ನು ಕಿರಿದುಗೊಳಿಸುವುದರ ಜೊತೆಗೆ, ಅಣುಶಕ್ತಿ ಕ್ಷೇತ್ರಕ್ಕೆ ಸಂಬಂಧಿಸಿದ ಸ್ವತಂತ್ರ ನಿಯಂತ್ರಕಗಳನ್ನು ಇಲ್ಲವಾಗಿಸಿರುವುದರ ಬಗ್ಗೆಯೂ ಟೀಕೆಗಳಿವೆ. ಅಣು ವಿದ್ಯುತ್ ಸ್ವಾವಲಂಬನೆ ಹೆಸರಿನಲ್ಲಿ ಅಸುರಕ್ಷತೆ, ಅಪಾಯ ಕಲ್ಪಿಸುವ ಸಾಧ್ಯತೆ ಇರುವುದರಿಂದಲೇ, 'ಎಸ್‌ಎಚ್‌ಎಎನ್‌ಟಿಐ–ಶಾಂತಿ ಮಸೂದೆ' ಸರ್ಕಾರದ ಪಾಲಿಗೆ ಮುಂದಿನ ದಿನಗಳಲ್ಲಿ ಹುಲಿಸವಾರಿಯಾಗಿ ಪರಿಣಮಿಸಿದರೆ ಅಚ್ಚರಿಯೇನಿಲ್ಲ.

## ❖ ನೇರ ತೆರಿಗೆ ಸಂಗ್ರಹ ಹೆಚ್ಚಳ: ₹17.04 ಲಕ್ಷ ಕೋಟಿ ವರಮಾನ ಸಂಗ್ರಹ: ಮರುಪಾವತಿಯು ಶೇ 14ರಷ್ಟು ಇಳಿಕೆ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಡಿಸೆಂಬರ್ 17ರವರೆಗೆ ನಿವ್ವಳ ನೇರ ತೆರಿಗೆ ಸಂಗ್ರಹವು ₹17.04 ಲಕ್ಷ ಕೋಟಿ ಯಷ್ಟಾಗಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯ (ಸಿಬಿಡಿಟಿ) ಅಂಕಿ–ಅಂಶಗಳು ತಿಳಿಸಿವೆ.**

- ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ನೇರ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ 8ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.
- ಮರುಪಾವತಿಯು ಮಂದಗೊಂಡಿ ರುವುದು ಮತ್ತು ಕಾರ್ಪೊರೇಟ್‌ಗಳಿಂದ ಮುಂಗಡ ತೆರಿಗೆ ಸಂಗ್ರಹದ ಪ್ರಮಾಣದಲ್ಲಿ ಏರಿಕೆಯಾಗಿರುವುದು ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.
- ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಶೇ 10.54ರಷ್ಟು ಹೆಚ್ಚಳವಾಗಿ,₹8.17 ಲಕ್ಷ ಕೋಟಿಯಾಗಿದೆ. ವೈಯಕ್ತಿಕ ಆದಾಯ ತೆರಿಗೆಯನ್ನು ಒಳಗೊಂಡಿರುವ ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹವು ₹8.47 ಲಕ್ಷ ಕೋಟಿಯಾಗಿದ್ದು, ಶೇ 6.37ರಷ್ಟು ಏರಿಕೆ ಕಂಡಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹವು ₹40,195 ಕೋಟಿಯಾಗಿದೆ.
- ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮರುಪಾವತಿಯು (ರೀಫಂಡ್) ಶೇ 14ರಷ್ಟು ಇಳಿದಿದ್ದು, ₹2.97 ಲಕ್ಷ ಕೋಟಿಯಾಗಿದೆ. ಮರುಪಾವತಿಯನ್ನು ಸರಿಹೊಂದಿಸುವ ಮೊದಲು ಒಟ್ಟು ನೇರ ತೆರಿಗೆ ಸಂಗ್ರಹವು ಶೇ 4.16ರಷ್ಟು ಏರಿಕೆಯಾಗಿ, ₹20.01 ಲಕ್ಷ ಕೋಟಿ ದಾಟಿದೆ.

- ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು, ನೇರ ತೆರಿಗೆ ಮೂಲಕ ₹25.20 ಲಕ್ಷ ಕೋಟಿ ಸಂಗ್ರಹಿಸಲು ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 12.7ರಷ್ಟು ಹೆಚ್ಚಳ. ಷೇರು ವಹಿವಾಟು ತೆರಿಗೆ ಮೂಲಕ ₹78 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.
- 'ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಿರುವುದು ಕಾರ್ಪೊರೇಟ್ ಕಂಪನಿಗಳ ಸದೃಢ ಗಳಿಕೆಯನ್ನು ಸೂಚಿಸುತ್ತಿದೆ' ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ರೋಹಿಂಟನ್ ಸಿಧ್ವಾ ಹೇಳಿದ್ದಾರೆ. ಮರುಪಾವತಿ ಸಂಬಂಧಿಸಿದ ಪ್ರಕರಣಗಳ ಹೆಚ್ಚಿನ ಪರಿಶೀಲನೆಯಿಂದಾಗಿ ಮರುಪಾವತಿ ವಿತರಣೆಯಲ್ಲಿ ಇಳಿಕೆ ಕಂಡು ಬಂದಿದೆ ಎಂದು ಹೇಳಿದ್ದಾರೆ.

## ❖ ವಿದೇಶಿ ವಿನಿಮಯ ಸಂಗ್ರಹ ಏರಿಕೆ

**ಸಂದರ್ಭ: ಡಿಸೆಂಬರ್ 12ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣ ₹15,144 ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ತಿಳಿಸಿದೆ.**


- ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹61.77 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.
- ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹8,122 ಕೋಟಿಯಷ್ಟು ಹೆಚ್ಚಳವಾಗಿದ್ದು, ₹50 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ₹6,795 ಕೋಟಿ ಏರಿಕೆಯಾಗಿದ್ದು, ₹9.65 ಲಕ್ಷ ಕೋಟಿಯಾಗಿದೆ.
- ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.68 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹42,007 ಕೋಟಿಯಾಗಿದೆ ಎಂದು ತಿಳಿಸಿದೆ.


ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಡಿಸೆಂಬರ್ 12ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣ ₹15,144 ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ಶುಕ್ರವಾರ ತಿಳಿಸಿದೆ.

ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹61.77 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹8,122 ಕೋಟಿಯಷ್ಟು ಹೆಚ್ಚಳವಾಗಿದ್ದು, ₹50 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ₹6,795 ಕೋಟಿ ಏರಿಕೆಯಾಗಿದ್ದು, ₹9.65 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.68 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹42,007 ಕೋಟಿಯಾಗಿದೆ ಎಂದು ತಿಳಿಸಿದೆ.


## ❖ ಘಟ್ಟಕ್ಕೆ ಅಪಾಯಕಾರಿ ಯೋಜನೆ ಬೇಕೆ?

**ಸಂದರ್ಭ: ಶರಾವತಿ ನದಿ ಹರಿವು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವ ಯೋಜನೆ ಪಶ್ಚಿಮ ಘಟ್ಟದ ನಿಬಿಡ ಅರಣ್ಯ ಹಾಗೂ ಜೀವವೈವಿಧ್ಯಕ್ಕೆ ಹಾನಿ ಉಂಟುಮಾಡುತ್ತದೆ.**

- ಕಳೆದೊಂದು ದಶಕದಲ್ಲಿ ವಿದ್ಯುತ್ ಬೇಡಿಕೆಯ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಗರಿಷ್ಠ ಬೇಡಿಕೆಯ ಸಮಯ ಬದಲಾಗಿದೆ. ಬಳಕೆಯ ಸ್ವರೂಪದ ಬದಲಾವಣೆ, ಸೌರ ವಿದ್ಯುತ್ ಉತ್ಪಾದನೆಯ ಹೆಚ್ಚಳ ಹಾಗೂ ಬೇಡಿಕೆ, ನಿರ್ವಹಣಾ ವ್ಯವಸ್ಥೆಗಳ ಸುಧಾರಣೆ ಇದಕ್ಕೆ ಪ್ರಮುಖ ಕಾರಣಗಳಾಗಿವೆ.
- ಲಭ್ಯವಿರುವ ದತ್ತಾಂಶಗಳ ಪ್ರಕಾರ, ಕರ್ನಾಟಕದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಬದಲಾಗುತ್ತಿರುವ ಈ ಬೇಡಿಕೆ ಮಾದರಿಗಳನ್ನು ನಿರ್ವಹಿಸಲು ಸಾಕಷ್ಟು ನವೀಕರಿಸ ಬಹುದಾದ ಶಕ್ತಿ ಸಾಮರ್ಥ್ಯವಿದೆ. ಆದ್ದರಿಂದ ಗರಿಷ್ಠ ವಿದ್ಯುತ್ ಬೇಡಿಕೆ ನಿರ್ವಹಣೆ ಹಿಂದಿನಂತೆ ಗಂಭೀರ ಸಮಸ್ಯೆಯಾಗಿಲ್ಲ.
- ಸೌರ ಫೋಟೊವೋಲ್ಟಾಯಿಕ್ ವ್ಯವಸ್ಥೆಗಳಿಗೆ ಬ್ಯಾಟರಿ ಶಕ್ತಿ ಸಂಗ್ರಹಣೆಯನ್ನು ಸಂಯೋಜಿಸುವುದು ತಾಂತ್ರಿಕವಾಗಿಯೂ ಹಾಗೂ ಆರ್ಥಿಕವಾಗಿಯೂ ಪರಿಣಾಮ ಕಾರಿ. ಇದಕ್ಕೆ ನಿದರ್ಶನವಾಗಿ, ಸೌರಶಕ್ತಿ ನಿಗಮ ಇತ್ತೀಚೆಗೆ ಹೊರಡಿಸಿರುವ ಟೆಂಡರ್‌ಗಳನ್ನು ಗಮನಿಸಬಹುದು. 'ಅರ್‌ಇ-ಆರ್‌ಟಿಸಿ' (ರೆನ್ಯೂಬಲ್ ಎನರ್ಜಿ- ರೌಂಡ್ ದಿ ಕ್ಲಾಕ್) ಟೆಂಡರ್‌ಗಳಲ್ಲಿ ವಿದ್ಯುತ್ ದರವು ಪ್ರತಿ ಯೂನಿಟ್‌ಗೆ ಸುಮಾರು ₹3ಕ್ಕೆ ಇಳಿದಿದೆ. ಇದಕ್ಕೆ ಹೋಲಿಸಿದರೆ, ಪಂಪ್ ಹೈಡ್ರೋ ಯೋಜನೆಗಳಿಂದ ಉತ್ಪಾದನೆಯಾಗುವ ವಿದ್ಯುತ್ ದರ ಪ್ರತಿ ಯೂನಿಟ್‌ಗೆ ಕನಿಷ್ಠ ₹6ರಿಂದ 28 ಆಗಿರುತ್ತದೆ.
- ಬ್ಯಾಟರಿ ಸಂಗ್ರಹಣೆ ವ್ಯವಸ್ಥೆಯಲ್ಲಿ ಸಾಕಷ್ಟು ಲಾಭಗಳಿವೆ. ಆ ಲಾಭಗಳಲ್ಲಿ, ಕಡಿಮೆ ಅವಧಿಯಲ್ಲಿ ಸ್ಥಾಪನೆ ಸಾಧ್ಯ. ಹಂತ ಹಂತವಾಗಿ ವಿಸ್ತರಿಸಬಹುದಾದ ವ್ಯವಸ್ಥೆ, ವಿಶಾಲ ಭೂಮಿ ಅಥವಾ ಅರಣ್ಯ ಮುಳುಗಡೆ ಇಲ್ಲದಿರುವುದು, ದೊಡ್ಡ ಜಲವಿದ್ಯುತ್ ಯೋಜನೆ ಗಳಿಗಿಂತ ಬಹಳ ಕಡಿಮೆ ಪರಿಸರ ಹಾನಿ ಸೇರಿವೆ.
- ಪಂಪ್ ಹೈಡ್ರೋ ಯೋಜನೆಗಳ ಪರಿಣಾಮಗಳು ನಿರ್ಮಾಣ ಸ್ಥಳಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಇವು ಭೂಮಿಯ ಹಾಗೂ ಜಲ ಪರಿಸರ ವ್ಯವಸ್ಥೆಗಳ ಮೇಲೆ ವ್ಯವಸ್ಥಾತ್ಮಕ, ಪರೋಕ್ಷ ಮತ್ತು ಸಂಚಯಾತ್ಮಕ ಪರಿಣಾಮ ಉಂಟುಮಾಡುತ್ತವೆ.
- ಪಶ್ಚಿಮಘಟ್ಟಗಳಲ್ಲಿನ ನಿತ್ಯಹರಿದ್ವರ್ಣ ಹಾಗೂ ಅರೆ ನಿತ್ಯಹರಿದ್ವರ್ಣ ಕಾಡುಗಳು ಅತ್ಯಧಿಕ ಕಾರ್ಬನ್ ಸಂಗ್ರಹ ಸಾಮರ್ಥ್ಯ ಹೊಂದಿವೆ. ಒಮ್ಮೆ ಹಾನಿಗೊಳಗಾದರೆ, ಇವು ತಮ್ಮ ಮೂಲ ಕಾರ್ಬನ್ ಸಂಗ್ರಹ ಸಾಮರ್ಥ್ಯವನ್ನು ಮರುಪಡೆಯಲು 100ರಿಂದ 300 ವರ್ಷ ಬೇಕಾಗುತ್ತದೆ. ಪಂಪ್ ಹೈಡ್ರೋ ಯೋಜನೆಗಳು ನೈಸರ್ಗಿಕ ನೀರಿನ ಹರಿವಿನ ಕ್ರಮವನ್ನು ಬದಲಾಯಿಸುತ್ತವೆ. ಇದರ ಪರಿಣಾಮವಾಗಿ ಮಣ್ಣಿನ ತೇವಾಂಶ, ಆವೋತ್ರ ಸರಣ
- (Evapotranspiration) ಮಾದರಿಗಳು ಹಾಗೂ ಭೂಗರ್ಭಜಲ ಪುನರ್ಭರಣ ಮಾದರಿಗಳಲ್ಲಿ ವ್ಯತ್ಯಯ ಉಂಟಾಗುತ್ತದೆ. ಇದರಿಂದ ಕಾಡು ನದಿ ವಾತಾವರಣದ ನಡುವಿನ ನೈಸರ್ಗಿಕ ಸಂಬಂಧ ದುರ್ಬಲಗೊಳ್ಳುತ್ತದೆ. ದೀರ್ಘಾವಧಿಯಲ್ಲಿ, ಸ್ಥಳೀಯ ತಾಪಮಾನ ಏರಿಕೆ, ವಾತಾವರಣದ ತೇವಾಂಶ ಪುನರಾವರ್ತನೆ ಕುಗ್ಗುವುದು ಹಾಗೂ ಉಪ ಪ್ರಾದೇಶಿಕ ಮಟ್ಟದಲ್ಲಿ ಮಳೆಗಾಲದ ಮಾದರಿಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.
- ಪಶ್ಚಿಮಘಟ್ಟಗಳು ಜಾಗತಿಕವಾಗಿ ಅತ್ಯಂತ ಪ್ರಮುಖ ಜೀವವೈವಿಧ್ಯ ತಾಣಗಳಾಗಿವೆ. ಅರಣ್ಯ ತುಂಡಾಗುವಿಕೆ ಮತ್ತು ಜಲಚಕ್ರದ ವ್ಯತ್ಯಯಗಳು ಉಭಯಚರಗಳನ್ನು ಗಂಭೀರ ಅಪಾಯಕ್ಕೆ ಒಳಪಡಿಸುತ್ತವೆ. 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ'ಗೆ ಸಂಬಂಧಿಸಿದಂತೆ ಈ ಎಲ್ಲ ಸೂಕ್ಷ್ಮಗಳನ್ನು ಗಮನಿಸ ಬೇಕಾಗಿದೆ.

Dr. Rajkumar IAS/KAS Academy

- ಸರ್ಕಾರವು ಶರಾವತಿ ನದಿಯ ಹರಿವನ್ನು ಬಳಸಿಕೊಂಡು ಸುಮಾರು 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಯನ್ನು ರೂಪಿಸಿದೆ. ಆ ಪ್ರದೇಶದ ಗಂಭೀರ ಪರಿಸರ ಪರಿಣಾಮಗಳನ್ನು ಸಮರ್ಪಕವಾಗಿ ಪರಿಗಣಿಸದೆ, ಅಲ್ಲಿರುವ ಅಮೂಲ್ಯ ಸಸ್ಯಸಂಪತ್ತು ಮತ್ತು ಜೀವಸಂಕುಲಕ್ಕೆ ಭಾರೀ ಹಾನಿ ಉಂಟುಮಾಡುವ ಸಾಧ್ಯತೆ ಯಿದೆ. ಶತಮಾನಗಳ ಕಾಲದಲ್ಲಿ ರೂಪುಗೊಂಡಿರುವ ಈ ಪರಿಸರ ವ್ಯವಸ್ಥೆ ಅಲ್ಪ ವ್ಯತ್ಯಯಕ್ಕೂ ಅತ್ಯಂತ ಸಂವೇದನಾಶೀಲವಾಗಿದೆ. ಸ್ಥಳ ಪರಿಶೀಲನೆ ನಡೆಸಿದ ಅರಣ್ಯ ಸಲಹಾ ಸಮಿತಿ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ
- ಹಿರಿಯ ಅಧಿಕಾರಿಗಳು ಈ ಯೋಜನೆಗೆ ಗಂಭೀರ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಪರಿಸರ ಸಚಿವಾಲಯದ ಅಧಿಕಾರಿಗಳು, ಪಶ್ಚಿಮಘಟ್ಟಗಳಿಗೆ ಮಾತ್ರ ಸೀಮಿತವಾದ ಸಿಂಹಬಾಲದ ಸಿಂಗಳೀಕಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ದಾಖಲೆಗಳ ಪ್ರಕಾರ, ಈ ಜಾತಿಯ ಸುಮಾರು 730 ಪ್ರಾಣಿಗಳು ಮಾತ್ರ ಉಳಿದಿವೆ.
- ಈ ಯೋಜನೆಯು ಎರಡು ಜಲಾಶಯಗಳ ನಿರ್ಮಾಣ, ಗರಿಷ್ಠ 3.2 ಕಿ.ಮೀ ಉದ್ದದ ಸುರಂಗ, ಗರಿಷ್ಠ 500 ಮೀಟರ್ ಆಳದವರೆಗೆ ತೋಡಿಕೆ, ಹಾಗೂ ಭೂಗತ ಕಾಮಗಾರಿಗಳಿಗೆ ಡ್ರಿಲ್ಲಿಂಗ್ ಮತ್ತು ಸ್ಫೋಟ ಕಾರ್ಯಗಳನ್ನು ಒಳಗೊಂಡಿದೆ. ಯೋಜನಾ ಪ್ರದೇಶವು ಭೂಕಂಪ ವಲಯ-3ರಲ್ಲಿ ಇರುವುದಾಗಿ ಸಮಿತಿ ಹೇಳಿದ್ದು, ಇಳಿಜಾರು ಕತ್ತರಿಕೆ, ಸ್ಫೋಟ ಕಾರ್ಯಗಳು ಮತ್ತು ಭಾರಿ ಮಾನ್ಸೂನ್ ಮಳೆಯ ಸಂಯೋಜನೆಯಿಂದ ಭೂಕುಸಿತ ಮತ್ತು ಮಣ್ಣು ಕೊಚ್ಚುವ ಅಪಾಯಗಳು ಹೆಚ್ಚಾಗುವ ಸಾಧ್ಯತೆ ಇದೆ.
- ಪರಿಸರದ ದೃಷ್ಟಿಯಿಂದ ಅತ್ಯಂತ ಸಂವೇದನಾಶೀಲವಾದ ಪ್ರದೇಶದಲ್ಲಿ 54 ಎಕರೆ ಅರಣ್ಯ ಭೂಮಿಯನ್ನು ಪರಿವರ್ತಿಸುವುದು ಮತ್ತು ಸುಮಾರು 15,000 ಮರಗಳನ್ನು ಕಡಿಯುವ ಪ್ರಸ್ತಾವಕ್ಕೆ ಸಮಿತಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಇಂತಹ ಕ್ರಮಗಳು ಈಗಾಗಲೇ ಅಪರೂಪವಾಗುತ್ತಿರುವ ಮತ್ತು ಮರುಸ್ಥಾಪಿಸಲಾಗದ ಅರಣ್ಯಗಳಿಗೆ ಭಾರೀ ಅಪಾಯ ಉಂಟುಮಾಡುತ್ತವೆ. ಶರಾವತಿ ಕಣಿವೆ ಅಭಯಾರಣ್ಯದ ಒಳಭಾಗದಲ್ಲಿರುವುದು ಹಾಗೂ ಮಧ್ಯ ಪಶ್ಚಿಮಘಟ್ಟಗಳ ಪರಿಸರ ಸಂವೇದನಾಶೀಲತೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.
- ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಮೇಲ್ನೋಟಕ್ಕೆ ಆಕರ್ಷಕವಾಗಿ ಕಂಡರೂ, ಪರಿಸರ ಹಾನಿಯ ಬೆಲೆತೆತ್ತು ಸಾಕಾರಗೊಳ್ಳುವ ಯೋಜನೆಯನ್ನು ರಾಜ್ಯ ಸರ್ಕಾರ ಕೈಬಿಡುವುದೇ ಒಳ್ಳೆಯದು.




**ಬಾಂಗ್ಲಾದೇಶ ಮತ್ತೊಮ್ಮೆ ಪ್ರಕ್ಷುಬ್ಧಗೊಂಡಿದೆ .ಇಂಕ್ವಿಲಾಬ್ ಮಂಚ್ ವಕ್ತಾರ ಶರೀಫ್ ಉಸ್ಮಾನ್ ಹಾದಿ ಹತ್ಯೆಯಿಂದ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಹಲವೆಡೆ ಹಿಂಸಾಚಾರ ನಡೆದಿವೆ. ಹಿಂದೂವೊಬ್ಬರ ಮೇಲೆ ಗುಂಪು ಹಲ್ಲೆ ನಡೆಸಿ ಹತ್ಯೆ ಮಾಡಲಾಗಿದೆ. ಈ ಬೆಳವಣಿಗೆಗಳು ಭಾರತದ ಮೇಲೆ ಎಂಥ ಪರಿಣಾಮ ಬೀರಲಿವೆ ಎನ್ನುವುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಬಾಂಗ್ಲಾದಲ್ಲಿ ಇಸ್ಲಾಂ ಮೂಲಭೂತವಾದಿಗಳ ಕೈ ಮೇಲಾಗುತ್ತಿದ್ದು, ಭಾರತ ವಿರೋಧಿ ಭಾವನೆ ತೀವ್ರಗೊಳ್ಳುತ್ತಿದೆ. ಇದರಿಂದಾಗಿ ಉಭಯ ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಸೃಷ್ಟಿಯಾಗಿದೆ**

ಪ್ರಜಾವಾಣಿ ವಾರ್ತೆ

ದಶಕಗಳ ಕಾಲ ಶಾಂತಿ, ಸಮೃದ್ಧಿ ನೆಲಸಿದ್ದ ಬಾಂಗ್ಲಾದೇಶದಲ್ಲಿ ಮೀಸಲಾತಿ ನೀತಿ ವಿರುದ್ಧ ಕಾಲೇಜು ವಿದ್ಯಾರ್ಥಿಗಳು ಕಳೆದ ವರ್ಷ ಆರಂಭಿಸಿದ್ದ ಹೋರಾಟವು ಭಾರಿ ಬದಲಾವಣೆಗಳಿಗೆ ಕಾರಣವಾಗಿತ್ತು. ಪ್ರಧಾನಿ ಶೇಖ್ ಹಸೀನಾ ಸರ್ಕಾರ ಪತನಗೊಂಡಿತ್ತು. ಜೀವ ಉಳಿಸಿಕೊಳ್ಳಲು ಭಾರತಕ್ಕೆ ಬಂದ ಹಸೀನಾ, ಅಂದಿನಿಂದ ದೆಹಲಿಯಲ್ಲಿಯೇ ಆಶ್ರಯ ಪಡೆದಿದ್ದಾರೆ. ಅವರನ್ನು ಬಾಂಗ್ಲಾದೇಶಕ್ಕೆ ಒಪ್ಪಿಸುವಂತೆ ಭಾರತದ ಮೇಲೆ ಬಾಂಗ್ಲಾ ಒತ್ತಡ ಹೇರುತ್ತಲೇ ಇದೆ. ಹಸೀನಾ ಅವರಿಗೆ ನೆಲೆ ಕಲ್ಪಿಸಿದೆ ಎನ್ನುವ ಕಾರಣಕ್ಕೆ ಬಾಂಗ್ಲಾದಲ್ಲಿ ಭಾರತ ವಿರೋಧಿ ಭಾವನೆ ಹೆಚ್ಚಾಗುತ್ತಿದೆ. ಮೀಸಲಾತಿ ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಶರೀಫ್ ಉಸ್ಮಾನ್ ಹಾದಿ ಅವರ ಹತ್ಯೆಯ ನಂತರ ಹಿಂಸೆಯ ತೀವ್ರತೆ ಹೆಚ್ಚಾಗಿದೆ.

2024ರ ಜುಲೈ–ಆಗಸ್ಟ್‌ನಲ್ಲಿ ನಡೆದಿದ್ದ ವಿದ್ಯಾರ್ಥಿ ದಂಗೆಯ ನಾಯಕತ್ವ ವಹಿಸಿದ್ದವರ ಪೈಕಿ ಶರೀಫ್ ಉಸ್ಮಾನ್ ಹಾದಿ ಒಬ್ಬರಾಗಿದ್ದರು. ತಮ್ಮ ಭಾರತ ವಿರೋಧಿ ನಿಲುವಿಗೆ ಹೆಸರಾಗಿದ್ದ ಅವರು, ಹಸೀನಾ ಅವರನ್ನು ಭಾರತವು ಬಾಂಗ್ಲಾಕ್ಕೆ ಹಸ್ತಾಂತರಿಸಬೇಕು ಎಂದು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರು. ಫೆಬ್ರುವರಿಯಲ್ಲಿ ನಡೆಯಲಿದ್ದ ಬಾಂಗ್ಲಾದೇಶ ಸಾರ್ವತ್ರಿಕ ಚುನಾವಣೆಯಲ್ಲಿ ಢಾಕಾ–8 ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಇರಾದೆ ಹೊಂದಿದ್ದರು. ಅದಕ್ಕೆ ಸಿದ್ಧತೆಯನ್ನೂ ನಡೆಸುತ್ತಿದ್ದರು. ಹಸೀನಾ ನಂತರದ ಬಾಂಗ್ಲಾದಲ್ಲಿ ಒಂದು ಶಕ್ತಿಯಾಗಿ ರೂಪುಗೊಳ್ಳುತ್ತಿದ್ದ ಹಾದಿ ಅವರನ್ನು ಅಪರಿಚಿತ ಮುಸುಕುಧಾರಿಗಳು ಗುಂಡಿಟ್ಟು ಕೊಂದಿದ್ದಾರೆ. ಈ ಒಂದು ಕೊಲೆಯಿಂದ ಇಡೀ ದೇಶ ಪ್ರಕ್ಷುಬ್ಧಗೊಂಡಿದೆ. 2026ರ ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆಗೆ ಸಜ್ಜಾಗುತ್ತಿದ್ದ ಬಾಂಗ್ಲಾದಲ್ಲಿ ಮತ್ತೆ ರಾಜಕೀಯ ಅಸ್ಥಿರತೆ ತಲೆದೋರಿದೆ. ಈ ಹತ್ಯೆಯನ್ನು ಭಾರತಕ್ಕೆ ತಳಕು ಹಾಕಲಾಗುತ್ತಿದ್ದು, ಮೊದಲಿನಿಂದಲೂ ಭಾರತವನ್ನು ವಿರೋಧಿಸುತ್ತಲೇ ಬಂದಿರುವ ಮತಾಂಧ ಶಕ್ತಿಗಳು ದೇಶದ ಮೇಲೆ ಹಿಡಿತ ಸಾಧಿಸಲು ಕೋಮುಧ್ರುವೀಕರಣ ನಡೆಸಲು ಈ ಸಂದರ್ಭವನ್ನು ಬಳಸಿಕೊಳ್ಳುತ್ತಿವೆ ಎನ್ನಲಾಗುತ್ತಿದೆ.

**ಭಾರತ ವಿರೋಧಿ ಕಥನ:** ಸಿಂಗಪುರ ಆಸ್ಪತ್ರೆಯಲ್ಲಿ ಹಾದಿ ಮೃತಪಟ್ಟ (ಡಿ.18) ಹಿಂದಿನ ದಿನವೂ ಭಾರತದ ವಿರುದ್ಧ ಪ್ರತಿಭಟನೆ ನಡೆದಿತ್ತು. ಹಸೀನಾ ಅವರನ್ನು ವಾಪಸ್ ಕರೆತರಬೇಕು ಎಂದು ಘೋಷಣೆ ಕೂಗುತ್ತಾ ಪ್ರತಿಭಟನಕಾರರು ಢಾಕಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿಯ ಮುಂಭಾಗದಲ್ಲಿ ಹಾದುಹೋಗಿದ್ದರು. ಭಾರತವು ರಾಜತಾಂತ್ರಿಕ ಕಚೇರಿಯನ್ನು ಒಂದು ದಿನದ ಮಟ್ಟಿಗೆ ಮುಚ್ಚಿ, ವೀಸಾ ನೀಡುವಿಕೆಯನ್ನು ಸ್ಥಗಿತಗೊಳಿಸಿತ್ತು.

ಶೇಖ್ ಹಸೀನಾ ಭಾರತದಲ್ಲಿ ಆಶ್ರಯ ಪಡೆದ ನಂತರ ಬಾಂಗ್ಲಾದೇಶದಲ್ಲಿ ಭಾರತ ವಿರೋಧಿ ಕಥನವನ್ನು ಹೆಣೆದು ಜನರಲ್ಲಿ ಭಾರತ ವಿರೋಧಿ ಭಾವನೆ ಬಿತ್ತಲಾಗುತ್ತಿದೆ. ಈಗ ಹಾದಿ ಹತ್ಯೆಗೂ ಭಾರತಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆ. ಹತ್ಯೆ ಮಾಡಿದವರು, ಕೃತ್ಯದ ನಂತರ ಭಾರತಕ್ಕೆ ಪಲಾಯನ ಮಾಡಿದ್ದಾರೆ ಎನ್ನುವ ವದಂತಿಯನ್ನು ಹರಿಬಿಡಲಾಯಿತು. ಅದರಿಂದ ಕೆರಳಿದ ಪ್ರತಿಭಟನಕಾರರು, ಚಿತ್ತಗಾಂಗ್‌ನಲ್ಲಿರುವ ಭಾರತದ ರಾಜತಾಂತ್ರಿಕ ಕಚೇರಿ ಮೇಲೆ ಕಲ್ಲು ತೂರಾಟ ನಡೆಸಿದರು. ಭಾರತವನ್ನು ಬೆಂಬಲಿಸುತ್ತಿವೆ ಮತ್ತು ಶರೀಫ್ ಸಾವಿಗೆ ನೆಲ ಸಜ್ಜುಗೊಳಿಸಿವೆ ಎಂದು ಆರೋಪಿಸಿ 'ಪ್ರೊಥೊಮ್ ಅಲೊ' ಮತ್ತು 'ದಿ ಡೈಲಿ ಸ್ಟಾರ್' ಪತ್ರಿಕಾ ಕಚೇರಿಗಳ ಮೇಲೂ ದಾಳಿ ನಡೆಸಿದರು.

ಭಾರತವು ಬಾಂಗ್ಲಾದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎನ್ನುವ ಭಾವನೆ ಕೆಲವರಲ್ಲಿದೆ. ಶೇಖ್ ಹಸೀನಾ ಅವರನ್ನು ಭಾರತದಿಂದ ಕರೆತಂದು ವಿಚಾರಣೆ ನಡೆಸಬೇಕು. ಅವರ ಜತೆಯಲ್ಲೇ ಶರೀಫ್ ಅವರನ್ನು ಕೊಂದವರನ್ನೂ ವಿಚಾರಣೆಗೊಳಪಡಿಸಬೇಕು ಎನ್ನುವ ಒತ್ತಾಯ ಕೇಳಿಬಂದಿದೆ. ಆದರೆ, ಈ ಎಲ್ಲ ಪ್ರತಿಭಟನೆ, ಹಿಂಸಾಚಾರಗಳ ಹಿಂದೆ ಬಾಂಗ್ಲಾದೇಶದ ಮುಸ್ಲಿಂ ಮೂಲಭೂತವಾದಿ ಶಕ್ತಿಗಳ ಕೈವಾಡವಿದ್ದು, ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಅವು ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

**ಚುನಾವಣೆ ಮುಂದೂಡಲು ಪಿತೂರಿ?:** ಶೇಖ್ ಹಸೀನಾ ಅವರು ಪ್ರಧಾನಿಯಾಗಿದ್ದಾಗ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಅವರ ಪದಚ್ಯುತಿಯೊಂದಿಗೆ ಪರಿಸ್ಥಿತಿ ಬದಲಾಗಿದೆ. ಪಾಕಿಸ್ತಾನದಂತೆ ಬಾಂಗ್ಲಾದೇಶದಲ್ಲೂ ಭಾರತ ವಿರೋಧಿ ಇಸ್ಲಾಂ ಮೂಲಭೂತವಾದಿಗಳ ಕೈ ಮೇಲಾಗುತ್ತಿದೆ. ಬಲಪಂಥೀಯ ಮುಸ್ಲಿಮರ ನೇತೃತ್ವದ ಜಮಾತ್–ಎ–ಇಸ್ಲಾಮಿ ಪಕ್ಷವು ದೇಶದ ಪ್ರಮುಖ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಚುನಾವಣೆಗಳಲ್ಲಿ ಗೆಲುವು ಸಾಧಿಸಿದೆ.

ಆದರೆ, ಭಾರತವೂ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳು ಬಾಂಗ್ಲಾದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಸಾರ್ವತ್ರಿಕ ಚುನಾವಣೆ ನಡೆದು, ಪ್ರಜಾಪ್ರಭುತ್ವವಾದಿ ಸರ್ಕಾರ ಸ್ಥಾಪನೆಯಾಗುವುದನ್ನು ಎದುರುನೋಡುತ್ತಿವೆ. ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಲಾಗುವುದು ಎಂದು ಮಧ್ಯಂತರ ಸರ್ಕಾರ ಈಗಾಗಲೇ ಘೋಷಿಸಿದೆ. ಆದರೆ, ಚುನಾವಣೆಗಳು ನಿಜಕ್ಕೂ ನಡೆಯುವವೇ ಎನ್ನುವುದರ ಬಗ್ಗೆ ಭಿನ್ನ ಕಥನಗಳು ಕೇಳಿಬರುತ್ತಿವೆ. ಹಾಗೊಂದು ವೇಳೆ ಚುನಾವಣೆಗಳು ನಡೆದರೂ, ಹಸೀನಾ ಅವರ ಅವಾಮಿ ಲೀಗ್ ಪಕ್ಷಕ್ಕೆ ಸ್ಪರ್ಧಿಸಲು ಅವಕಾಶ ನೀಡಲಾಗುವುದೇ ಎನ್ನುವ ಪ್ರಶ್ನೆಯೂ ಮುಖ್ಯವಾಗಿದೆ. ಇಂಥ ಸ್ಥಿತಿಯಲ್ಲಿಯೇ ಶರೀಫ್ ಹಾದಿ ಹತ್ಯೆ ನಡೆದಿದೆ. ಅದಾಗಿ ಕೆಲವೇ ದಿನಗಳಲ್ಲಿ ಧರ್ಮನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಅಲ್ಪಸಂಖ್ಯಾತ ಹಿಂದೂ ಸಮುದಾಯಕ್ಕೆ ಸೇರಿದ ದೀಪುಚಂದ್ರ ದಾಸ್ ಎಂಬ ಯುವಕನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಚುನಾವಣೆಗಳನ್ನು ಮುಂದೂಡುವ ದೃಷ್ಟಿಯಿಂದಲೇ ಈಗಿನ ಹಿಂಸಾಚಾರಗಳನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ ಎಂದು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಆರೋಪಿಸಿದೆ. ಹಿಂಸಾಚಾರ, ಹತ್ಯೆಗಳನ್ನು ದೇಶದಲ್ಲಿ ಅಶಾಂತ ವಾತಾವರಣ ಮೂಡಿಸಿ ಚುನಾವಣೆಗಳನ್ನು ಮುಂದೂಡಲು, ಭಾರತ ವಿರೋಧಿ ಭಾವನೆ ಉದ್ದೀಪಿಸಿ ಜನಬೆಂಬಲ ಗಳಿಸಲು ಮೂಲಭೂತವಾದಿ ಗುಂಪುಗಳು ಬಳಸಿಕೊಳ್ಳುತ್ತಿವೆ ಎಂದು ವಿಶ್ಲೇಷಿಸಲಾಗಿದೆ.

ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ದಿನದಿಂದ ದಿನಕ್ಕೆ ಪರಿಸ್ಥಿತಿ ಕೈಮೀರುತ್ತಿದೆ. ಬಾಂಗ್ಲಾದಲ್ಲಿ ಚುನಾವಣೆಗಳು ತಡವಾಗುತ್ತಿರುವುದರಿಂದಲೇ ಅನಪೇಕ್ಷಿತ ವಿದ್ಯಮಾನಗಳು ನಡೆಯುತ್ತಿವೆ ಎನ್ನುವುದು ಭಾರತದ ನಿಲುವು. ಕೆಲವೇ ವರ್ಷಗಳ ಹಿಂದೆ ಮಿತ್ರ ರಾಷ್ಟ್ರವಾಗಿದ್ದ, ನೆರೆಯ ಬಾಂಗ್ಲಾದಲ್ಲಿ ಅಸ್ಥಿರತೆ ಉಂಟಾಗಿರುವುದು ಭಾರತದ ಮಟ್ಟಿಗೆ ಉತ್ತಮ ಬೆಳವಣಿಗೆಯೇನಲ್ಲ. ಆದರೆ, ಭಾರತವು ತಕ್ಷಣಕ್ಕೆ ಯಾವುದೇ ರೀತಿಯ ಕ್ರಮಕ್ಕೂ ಮುಂದಾಗದೇ, ಅಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

**ಆಧಾರ:** ಪಿಟಿಐ, ಬಿಬಿಸಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಂಸದೀಯ ಸ್ಥಾಯಿ ಸಮಿತಿ ವರದಿ, ಮಾಧ್ಯಮ ವರದಿಗಳು

## ಬಾಂಗ್ಲಾಸ್ಥಿರತೆ: ಭಾರತಕ್ಕೆ ಏಕೆ ಮುಖ್ಯ?

- ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಭಾರತದ ಪ್ರಮುಖ ಪಾಲುದಾರ ರಾಷ್ಟ್ರ
- ದಕ್ಷಿಣ ಏಷ್ಯಾದಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರ. ಭಾರತದ ಸರಕು ಮತ್ತು ಕಚ್ಚಾ ವಸ್ತುಗಳ ಬಹುದೊಡ್ಡ ಗ್ರಾಹಕ ರಾಷ್ಟ್ರ
- ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಭಾರತದ ಸಂಪರ್ಕ ಕೊಂಡಿ
- ಬಾಂಗ್ಲಾದೇಶ, ಭೂತಾನ್, ಭಾರತ, ಮ್ಯಾನ್ಮಾರ್, ನೇಪಾಳ, ಶ್ರೀಲಂಕಾ ಮತ್ತು ಥಾಯ್ಲೆಂಡ್‌ಗಳನ್ನೊಳಗೊಂಡ ಬೇ ಆಫ್ ಬೆಂಗಾಲ್ ಇನಿಷಿಯೇಟಿವ್ ಫಾರ್ ಮಲ್ಟಿ ಸೆಕ್ಟೋರಲ್ ಟೆಕ್ನಿಕಲ್ ಮತ್ತು ಎಕಾನಮಿಕ್ ಕೊ–ಆಪರೇಷನ್ ಮುಖ್ಯ ಕಚೇರಿ ಇರುವುದು ಢಾಕಾದಲ್ಲಿ
- ಭಾರತದ ಈಶಾನ್ಯ ರಾಜ್ಯಗಳಿಗೆ ಬಾಂಗ್ಲಾದೇಶದ ಮೂಲಕವೂ ಹೋಗಬಹುದು. ಭಾರತದ ಇತರ ರಾಜ್ಯಗಳು ಈಶಾನ್ಯ ರಾಜ್ಯಗಳನ್ನು ಸಂಪರ್ಕಿಸಲು ಕಿರಿದಾದ 'ಚಿಕನ್ ನೆಕ್' ಕಾರಿಡಾರ್ ಮೇಲೆ ಹೆಚ್ಚು ಅವಲಂಬಿಸುವುದನ್ನು ಇದು ತಪ್ಪಿಸುತ್ತದೆ
- ರಾಜಕೀಯ ಅಸ್ಥಿರತೆಯಲ್ಲೇ ಇರುವ, ಭಯೋತ್ಪಾದಕರ ಕಪಿಮುಷ್ಟಿಯಲ್ಲಿರುವ ಪಾಕಿಸ್ತಾನದಿಂದಾಗಿ ದೇಶದ ಉತ್ತರದ ಕಾಶ್ಮೀರದಲ್ಲಿ ಭದ್ರತೆಗೆ ಸದಾ ಅಪಾಯ ಎದುರಾಗಿತ್ತಿರುವ ಹೊತ್ತಿನಲ್ಲೇ, ಪಶ್ಚಿಮದಲ್ಲಿರುವ ನೆರೆ ರಾಷ್ಟ್ರದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗುವುದು ಭಾರತದ ಭದ್ರತೆಗೂ ಸವಾಲೊಡ್ಡಲಿದೆ



ಬಾಂಗ್ಲಾದ ರಾಜ್‌ಶಾಹಿಯಲ್ಲಿರುವ ಭಾರತೀಯ ಹೈಕಮಿಷನ್ ಕಚೇರಿ ಮುಂದೆ ಇದೇ 18ರಂದು ಪ್ರತಿಭಟಿಸಲು ಯತ್ನಿಸಿದವರನ್ನು ಭದ್ರತಾ ಸಿಬ್ಬಂದಿ ತಡೆದರು –ಎಎಫ್‌ಪಿ ಚಿತ್ರ

## '1971ರ ನಂತರದ ಬಹುದೊಡ್ಡ ಸವಾಲು'

ಬಾಂಗ್ಲಾದೇಶದ ಜನರಲ್ಲಿ ವಿಶೇಷವಾಗಿ ಯುವಜನಾಂಗದಲ್ಲಿ ಭಾರತ ವಿರೋಧಿ ಭಾವನೆ ಬೆಳೆಯುತ್ತಿರುವುದನ್ನು ಮತ್ತು ಉದ್ದೇಶಪೂರ್ವಕವಾಗಿ ಭಾರತದ ವಿರುದ್ಧವಾದ ಭಾವನೆ ಮೂಡುವಂತಹ ಕಥನವನ್ನು ಸೃಷ್ಟಿಸುತ್ತಿರುವುದರ ಕುರಿತಾಗಿ ಶಶಿ ತರೂರ್ ಅಧ್ಯಕ್ಷತೆಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಂಸದೀಯ ಸಮಿತಿಯು ತನ್ನ 'ಭಾರತ–ಬಾಂಗ್ಲಾದೇಶದ ಸಂಬಂಧದ ಭವಿಷ್ಯ' ವರದಿಯಲ್ಲಿ ಪ್ರಸ್ತಾಪಿಸಿದೆ. ಇದೇ 18ರಂದು ಸಂಸತ್ತಿನಲ್ಲಿ ವರದಿಯನ್ನು ಮಂಡಿಸಲಾಗಿದೆ. ಬಾಂಗ್ಲಾದೇಶದಲ್ಲಿನ ಬೆಳವಣಿಗೆಗಳು, ಆಡಳಿತದಲ್ಲಿ ಮೂಲಭೂತವಾದಿಗಳ ಹಿಡಿತ ಹೆಚ್ಚಾಗುತ್ತಿರುವುದು, ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳ ಬಗ್ಗೆ ಸಮಿತಿಯು ತೀವ್ರ ಆತಂಕ ವ್ಯಕ್ತಪಡಿಸಿದೆ.

1971ರಲ್ಲಿ ನಡೆದಿದ್ದ ವಿಮೋಚನಾ ಯುದ್ಧದ ನಂತರದಲ್ಲಿ ಇದೇ ಮೊದಲ ಬಾರಿಗೆ ಭಾರತವು ಬಾಂಗ್ಲಾದೇಶದಲ್ಲಿ ದ್ವಿಪಕ್ಷೀಯ ಸಂಬಂಧಕ್ಕೆ ಸಂಬಂಧಿಸಿದಂತೆ ಬಹುದೊಡ್ಡ ಸವಾಲನ್ನು ಎದುರಿಸುತ್ತಿದೆ. 1971ರಲ್ಲಿದ್ದ ಸವಾಲು ಅಸ್ತಿತ್ವಕ್ಕಾಗಿ, ಮಾನವೀಯತೆಯಿಂದ ಕೂಡಿದ್ದಾಗಿತ್ತು. ಅದು ಒಂದು ರಾಷ್ಟ್ರದ ಹುಟ್ಟಿಗೂ ಕಾರಣವಾಗಿತ್ತು. ಆದರೆ, ಈಗಿನ ಸವಾಲು ಹೆಚ್ಚು ಗಂಭೀರವಾದದ್ದು; ತಲೆಮಾರುಗಳ ವರ್ತನೆ, ಮೌಲ್ಯಗಳಲ್ಲಿ ಆದ ಬದಲಾವಣೆ, ರಾಜಕೀಯ ನಿಲುವಿನಲ್ಲಿ ಆದ ಬದಲಾವಣೆ ಮತ್ತು ಭಾರತದೊಂದಿಗಿನ ಸಂಬಂಧದಿಂದ ದೂರ ಸರಿಯುವ ಸಾಧ್ಯತೆಗೆ ಸಂಬಂಧಿಸಿದ್ದಾಗಿದೆ. ಅವಾಮಿ ಲೀಗ್‌ನ ಪತನದೊಂದಿಗೆ ಯುವ ಸಮುದಾಯ ನೇತೃತ್ವದ ರಾಷ್ಟ್ರೀಯತೆ, ಇಸ್ಲಾಂ ಮೂಲಭೂತವಾದಿಗಳ ಮರುಪ್ರವೇಶ ಮತ್ತು ಚೀನಾ, ಪಾಕಿಸ್ತಾನದ ಪ್ರಭಾವ ಹೆಚ್ಚುತ್ತಿರುವುದು ಬಾಂಗ್ಲಾದೊಂದಿಗೆ ಭಾರತದ ಹೊಂದಿರುವ ಸಂಬಂಧ ಪ್ರಮುಖ ತಿರುವಿನ ಬಿಂದುವಾಗಿದ್ದು, ತಕ್ಷಣವೇ ಈ ಪರಿಸ್ಥಿತಿಯನ್ನು ಭಾರತ ತಕ್ಷಣವೇ ಸರಿಪಡಿಸಿಕೊಳ್ಳಬೇಕು ಎಂದು ತಜ್ಞರೊಬ್ಬರ ಅಭಿಪ್ರಾಯವನ್ನು ಸಮಿತಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಭಾರತವು ಬಾಂಗ್ಲಾದ ಆಂತರಿಕ ರಾಜಕೀಯದಲ್ಲಿ ಮಧ್ಯಪ್ರವೇಶಿಸದೆ, ಅಲ್ಲಿನ ಪ್ರಜಾಪ್ರಭುತ್ವ ಪ್ರಕ್ರಿಯೆಗೆ, ಮುಕ್ತ, ನ್ಯಾಯಸಮ್ಮತ, ಎಲ್ಲರನ್ನೊಳಗೊಂಡ ಚುನಾವಣೆಗೆ ಬೆಂಬಲ ನೀಡಬೇಕು ಎಂದು ಸಮಿತಿ ತನ್ನ ಶಿಫಾರಸಿನಲ್ಲಿ ಹೇಳಿದೆ.

ಭಾರತದಲ್ಲಿ ಅಲ್ಲಿನ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಆಶ್ರಯ ಪಡೆದಿರುವುದನ್ನೂ ಉಲ್ಲೇಖಿಸಿರುವ ವರದಿಯು, ಜೀವಕ್ಕೆ ಆಪತ್ತು, ಅಸ್ತಿತ್ವಕ್ಕೆ ಅಪಾಯ ಎದುರಿಸುತ್ತಿರುವ ವ್ಯಕ್ತಿಗಳಿಗೆ ನಾಗರಿಕ ನಡವಳಿಕೆ, ಮಾನವೀಯ ನೆಲೆಯಲ್ಲಿ ಆಶ್ರಯ ನೀಡುವ ಸಂಪ್ರದಾಯದ ಅನುಸಾರ ಭಾರತವು ಶೇಖ್ ಹಸೀನಾ ಅವರಿಗೆ ಆಶ್ರಯ ನೀಡಿದೆ. ಸರ್ಕಾರವು ಈ ಪರಿಸ್ಥಿತಿಯನ್ನು ತುಂಬಾ ಸೂಕ್ಷ್ಮತೆಯಿಂದ ನಿರ್ವಹಿಸಬೇಕು ಎಂದೂ ಸಮಿತಿ ಸಲಹೆ ನೀಡಿದೆ.

Publication Date
23/12/2025

## ❖ ನ್ಯೂಜಿಲೆಂಡ್ ಜೊತೆ ಎಫ್‌ಟಿಎ ಅಂತಿಮ: ಭಾರತ- ನ್ಯೂಜಿಲೆಂಡ್ ಪ್ರಧಾನ ಮಂತ್ರಿಗಳ ನಡುವೆ ಮಾತುಕತೆ ನಂತರ ಘೋಷಣೆ

**ಸಂದರ್ಭ: ಈ ಒಪ್ಪಂದದ ಪರಿಣಾಮವಾಗಿ ಎರಡೂ ದೇಶಗಳ ನಡುವಿನ ವ್ಯಾಪಾರದ ಮೊತ್ತವು (ಸರಕು ಮತ್ತು ಸೇವೆಗಳನ್ನು ಪರಿಗಣಿಸಿ) ಐದು ವರ್ಷಗಳಲ್ಲಿ 5 ಬಿಲಿಯನ್ ಅಮೆರಿಕನ್ ಡಾಲರ್ ಹೆಚ್ಚಲಿದೆ ಎಂದು ಅಂದಾಜು.**

### ಒಪ್ಪಂದದ ಪ್ರಮುಖ ಅಂಶಗಳು

- ಇದರಿಂದಾಗಿ ಕಾರ್ಮಿಕರ ಶ್ರಮ ಹೆಚ್ಚಿನಮಟ್ಟದಲ್ಲಿ ಅಗತ್ಯವಿರುವ ಭಾರತದ ಜವಳಿ, ಸಿದ್ಧಉಡುಪು, ಚರ್ಮ, ಪಾದರಕ್ಷೆ, ಸಮುದ್ರ ಉತ್ಪನ್ನಗಳು, ಮುತ್ತು ಮತ್ತು ಅಭರಣ, ಕರಕುಶಲವಸ್ತುಗಳು, ಎಂಜಿನಿಯರಿಂಗ್ ಸರಕುಗಳು ಮತ್ತು ಆಟೊಮೊಬೈಲ್ ಉತ್ಪನ್ನಗಳು ನ್ಯೂಜಿಲೆಂಡ್ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಲಿವೆ
- ಮುಂದಿನ 15 ವರ್ಷಗಳಲ್ಲಿ ಭಾರತದಲ್ಲಿ 20 ಬಿಲಿಯನ್ ಡಾಲರ್ (ಅಂದಾಜು ₹1.79 ಲಕ್ಷ ಕೋಟಿ) ಹೂಡಿಕೆ ಮಾಡುವ ಬದ್ಧತೆಯನ್ನು ನ್ಯೂಜಿಲೆಂಡ್ ವ್ಯಕ್ತಪಡಿಸಿದೆ
- ಮರದ ದಿಮ್ಮಿ, ಕಿಟ್ಟಯುಕ್ತ ಕಲ್ಲಿದ್ದಲು, ಲೋಹದ ತ್ಯಾಜ್ಯವನ್ನು ಭಾರತಕ್ಕೆ ಸುಂಕರಹಿತವಾಗಿ ಆಮದುಮಾಡಿಕೊಳ್ಳಲು ಅವಕಾಶ
- ಬೆಣ್ಣೆಹಣ್ಣು, ಪರ್ಸಿಮ್ಮಾನ್ ಹಣ್ಣುಗಳನ್ನು ಭಾರತದ ಮಾರುಕಟ್ಟೆಗೆ ರವಾನಿಸುವಾಗ ನ್ಯೂಜಿಲೆಂಡ್‌ಗೆ ಸುಂಕ ವಿನಾಯಿತಿ ಸಿಗಲಿದೆ.
- ಭಾರತದಿಂದನ್ಯೂಜಿಲೆಂಡ್‌ಗೆ ಆಗುವ ಎಲ್ಲ ರಫ್ತುಗಳು ಸುಂಕರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲಿವೆ
- ದೇಶದ ರೈತರು ಎಂಎಸ್‌ಎಂಇ ವಲಯವನ್ನು ಉದ್ದೇಶದಿಂದ ಹಾಲಿನ ವಲಯದ ಯಾವುದೇ ಹಾಗೂ ರಕ್ಷಿಸುವ ಉತ್ಪನ್ನಗಳ ಉತ್ಪನ್ನಕ್ಕೆ ಸುಂಕ ರಹಿತ ಪ್ರವೇಶ ನೀಡಲು ಭಾರತ ಒಪ್ಪಿಲ್ಲ. ಹಾಲಿನ ಉತ್ಪನ್ನಗಳ ವಲಯವು ಭಾರತದಲ್ಲಿ ರಾಜಕೀಯವಾಗಿ ಸೂಕ್ಷ್ಮ ಕೂಡಹೌದು.
- ಪ್ರತಿ ವರ್ಷ ಭಾರತದ ಐದು ಸಾವಿರ ಕುಶಲ ನೌಕರರಿಗೆ ನ್ಯೂಜಿಲೆಂಡ್ ತಾತ್ಕಾಲಿಕ ನೌಕರಿ ವೀಸಾ ನೀಡುತ್ತದೆ. ಇದಕ್ಕೆ ಮೂರು ವರ್ಷಗಳ ಮಾನ್ಯತೆ ಇರುತ್ತದೆ. ಆಯುಷ್ ವೈದ್ಯರು. cteert ತರಬೇತುದಾರರು, ಬಾಣಸಿಗರು, ಸಂಗೀತ ಶಿಕ್ಷಕರು, ಐ.ಟಿ, ಎಂಜಿನಿಯರಿಂಗ್, ಆರೋಗ್ಯಸೇವೆ, ಶಿಕ್ಷಣ, ಕಟ್ಟಡ ನಿರ್ಮಾಣ ವಲಯದ ನೌಕರರಿಗೆ ಇದು ಪ್ರಯೋಜನ ನೀಡಲಿದೆ.
- ಒಪ್ಪಂದಕ್ಕೆ ಇನ್ನು ಏಳರಿಂದ ಎಂಟು ತಿಂಗಳಲ್ಲಿ ಸಹಿ ಬೀಳುವ ನಿರೀಕ್ಷೆ ಇದೆ.

## ❖ ಮೂಲಸೌಕರ್ಯ ವಲಯದ ಪ್ರಗತಿ ಏರಿಕೆ

**ಸಂದರ್ಭ: ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆ ನವೆಂಬರ್ ತಿಂಗಳಿನಲ್ಲಿ ಶೇ 1.8ರಷ್ಟು ದಾಖಲಾಗಿದೆ.**

- ಕಳೆದ ವರ್ಷದ ಇದೇ ತಿಂಗಳಿನಲ್ಲಿ ಬೆಳವಣಿಗೆಯು ಶೇ 5.8ರಷ್ಟು ದಾಖಲಾಗಿತ್ತು. ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಿಸಿದ ಉತ್ಪನ್ನಗಳು ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆ ಆಗಿದೆ. ಇದರಿಂದ ಪ್ರಸಕ್ತ ನವೆಂಬರ್ ತಿಂಗಳಿನಲ್ಲಿ ಪ್ರಗತಿ ಮಂದಗೊಂಡಿದೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ತಿಳಿಸಿದೆ.
- ಆದರೆ, ಈ ವರ್ಷದ ಅಕ್ಟೋಬರ್‌ನಲ್ಲಿ ಬೆಳವಣಿಗೆಯ ಪ್ರಮಾಣ ಶೇ (-) 0.1ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ನವೆಂಬರ್‌ನಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.
- ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ನವೆಂಬರ್ ತಿಂಗಳಿನಲ್ಲಿ ಈ ವಲಯದ ಬೆಳವಣಿಗೆ ಶೇ 2.4ರಷ್ಟು ದಾಖಲಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಶೇ 4.4ರಷ್ಟಿತ್ತು.

Dr. Rajkumar IAS/KAS Academy

## ❖ ಮಂಥನ್' 18ನೇ ಆವೃತ್ತಿಗೆ ಚಾಲನೆ

**ಸಂದರ್ಭ:'ದೇಶದ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಲು ಕಾಲೇಜು ಉದ್ಯಮದ ಬಗ್ಗೆ ಅರಿವು ನೀಡಿ, ಅವರನ್ನು ಉದ್ಯಮಿಗಳಾಗಿ ರೂಪಿಸುವ ಅಗತ್ಯವಿದೆ' ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದರು.**

- 'ಮಂಥನ್' ಕಾರ್ಯಕ್ರಮದ ಪ್ರಯೋಜನವು ಸರ್ಕಾರಿ ಕಾಲೇಜು ವಿದ್ಯಾರ್ಥಿ ಗಳಿಗೂ ಲಭಿಸಬೇಕು ಎನ್ನುವ ಆಶಯದಿಂದ ರಾಜ್ಯ ಸರ್ಕಾರವು ಇದೇ ಮೊದಲ ಬಾರಿಗೆ ಎಫ್‌ಕೆಸಿಸಿಐ ಜೊತೆ ಸಹಯೋಗ ಮಾಡಿಕೊಂಡಿದೆ. ವಿದ್ಯಾರ್ಥಿಗಳು ತಮ್ಮ ಬಳಿ ಇರುವ ಉದ್ಯಮದ ಯೋಜನೆಯನ್ನು
- ಉತ್ತಮ ಯೋಜನೆಗಳಿಗೆ ₹25 ಲಕ್ಷದವರೆಗೆ ಬಹುಮಾನ ನೀಡಲಾಗುವುದು ಎಂದರು.
- 'ರಾಜ್ಯದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಯಾವುದೇ ಪದವಿ, ಪದವಿ, ಡಿಪ್ಲೊಮಾ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮಲ್ಲಿನ ಹೊಸ ಉದ್ಯಮ ಯೋಜನೆಯನ್ನು ಎಫ್‌ಕೆಸಿಸಿಐ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕು' ಎಂದು 'ಇನ್ನೊ ಮಂಥನ್ 2026' ಅಧ್ಯಕ್ಷಶ್ರವಣ್ ಜಿ. ಹೇಳಿದರು.
- ಲಾಗಿನ್ ಆಗಿ, 2026ರ ಜನವರಿ 31ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು. ಉದ್ಯಮದ ಯೋಜನೆ ಸಲ್ಲಿಸಲು ಏಪ್ರಿಲ್ 8 ಕೊನೆಯ ದಿನ. ವಿದ್ಯಾರ್ಥಿಗಳಿಗೆ ಅಗತ್ಯ ನೆರವು ನೀಡಲಾಗುವುದು ಎಂದರು.
- 'ವಿದ್ಯಾರ್ಥಿಗಳು ಪದವಿ ಪಡೆದರಷ್ಟೇ ಸಾಲದು, ಅವರನ್ನು ಯಶಸ್ವಿ ಉದ್ಯಮಿಗಳ ನ್ನಾಗಿಸುವ ಉದ್ದೇಶವನ್ನು ಹೊಂದಲಾಗಿದೆ. ಮಂಥನ್‌ನಂತಹ ವೇದಿಕೆ ಇದಕ್ಕೆ ಅವಕಾಶ ಕಲ್ಪಿಸುತ್ತಿದೆ' ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಉಮಾರೆಡ್ಡಿ ಹೇಳಿದರು.


IAS/KAS Academy




## ❖ 3.67 ಕೋಟಿ ಹೆಸರು ಹೊರಕೆ: 11 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮತದಾರರ ಕರಡು ಪಟ್ಟಿ ಪ್ರಕಟ

**ಸಂದರ್ಭ:ಕೇಂದ್ರ ಚುನಾವಣಾ ಆಯೋಗವು 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆ ನಡೆಸಿ, 3.67 ಕೋಟಿ ಮತದಾರರನ್ನು ಕೈಬಿಟ್ಟಿದೆ.**

- ಎರಡನೇ ಹಂತದಲ್ಲಿ ಎಸ್ಐಆರ್ ಪ್ರಕ್ರಿಯೆ ಕೈಗೊಂಡ ಮಧ್ಯಪ್ರದೇಶ, ಛತ್ತೀಸಗಢ, ಕೇರಳ ಹಾಗೂ ಅಂಡಮಾನ್ ಮತ್ತು ನಿಕೋಬಾರ್‌ನ ಕರಡು ಮತದಾರರ ಪಟ್ಟಿ ಪ್ರಕಟವಾಗಿದೆ. ಪಶ್ಚಿಮ ರಾಜಸ್ಥಾನ, ಗೋವಾ, ಪುದುಚೇರಿ, ಲಕ್ಷದ್ವೀಪ, ಗುಜರಾತ್ ಮತ್ತು ತಮಿಳುನಾಡಿನ ಕರಡು ಪಟ್ಟಿಗಳನ್ನು ಆಯೋಗವು ಕಳೆದ ಹತ್ತು ದಿನಗಳಲ್ಲಿ ಬಿಡುಗಡೆ ಮಾಡಿದೆ.




- ಇದರೊಂದಿಗೆ ಉತ್ತರ ಪ್ರದೇಶ ಹೊರತುಪಡಿಸಿ ಎರಡನೇ ಹಂತದಲ್ಲಿ ಎಸ್ಐಆರ್ ಪ್ರಕ್ರಿಯೆ ನಡೆಸಿದ ಎಂಟು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ ಕರಡು ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದಂತಾಗಿದೆ. ಉತ್ತರ ಪ್ರದೇಶದ ಕರಡು ಪಟ್ಟಿಯನ್ನು ಡಿಸೆಂಬರ್ 31ಕ್ಕೆ ಪ್ರಕಟಿಸಲಾಗುವುದು.
- ಕರಡು ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆಯದೇ ಇರುವ ಅರ್ಹ ಮತದಾರರು ಅರ್ಜಿಗಳನ್ನು ಭರ್ತಿ ಮಾಡಿ, ದಾಖಲೆ ಗಳನ್ನು ಸಲ್ಲಿಸುವ ಮೂಲಕ ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆಯುವ ಅವಕಾಶ ವಿದೆ ಎಂದು ಆಯೋಗ ಹೇಳಿದೆ. ಕರಡು ಪಟ್ಟಿ ಬಗ್ಗೆ ಆಕ್ಷೇಪಣೆ ಸಲ್ಲಿಕೆಗೆ ಜನವರಿ 22ರಗಡುವು ನೀಡಲಾಗಿದೆ.
- ಮೊದಲ ಹಂತದ ಎಸ್ಐಆರ್ ಈ ವರ್ಷದ ಆರಂಭದಲ್ಲಿ ಬಿಹಾರದಲ್ಲಿ ನಡೆದಿತ್ತು. ಅಲ್ಲಿ 7.89 ಕೋಟಿ ಮತದಾರರ ಪೈಕಿ ಸುಮಾರು 65 ಲಕ್ಷ ಮತದಾರರನ್ನು ಕರಡು ಪಟ್ಟಿಯಿಂದ ಕೈಬಿಡಲಾಗಿತ್ತು. ಆ ಬಳಿಕ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸುವ ಅವಧಿಯಲ್ಲಿ ಸುಮಾರು ಮೂರು ಲಕ್ಷ ಮತದಾರರನ್ನು ಮತ್ತೆ ಪಟ್ಟಿಗೆ ಸೇರಿಸಲಾಗಿದೆ.
- ಎರಡನೇ ಹಂತದ ಎಸ್ಐಆರ್ ನಡೆದ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಹಿಂದಿನ ಪಟ್ಟಿಯಲ್ಲಿ 35.52 ಕೋಟಿ ಮತದಾರರು ಇದ್ದರು. ಅದರಲ್ಲಿ 31.85 ಕೋಟಿ ಮತದಾರರು ಕರಡು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.
- ಆಯೋಗವು ಕೈಬಿಟ್ಟಿರುವ 3.67 ಕೋಟಿ ಮತದಾರರಲ್ಲಿ 99.81 ಲಕ್ಷ ಮಂದಿ 'ಮೃತಪಟ್ಟವರು' ಎಂದು ಹೇಳಿದೆ. 2.47 ಕೋಟಿ ಮತದಾರರು ಶಾಶ್ವತವಾಗಿ ವಲಸೆ ಹೋಗಿದ್ದಾರೆ. ಒಂದಕ್ಕಿಂತ ಹೆಚ್ಚು ಕಡೆ ನೋಂದಾಯಿಸಿ ದ್ದಾರೆ ಎಂಬ ಕಾರಣಕ್ಕೆ 18.60 ಲಕ್ಷ ಮತದಾರರನ್ನು ಕೈಬಿಡಲಾಗಿದೆ.

## ❖ ಚಿಕ್ಕಣ್ಣ, ಪೋತೆಗೆ ‘ಜಾನಪದ ತಜ್ಞ ಪ್ರಶಸ್ತಿ'

**ಸಂದರ್ಭ: ಕರ್ನಾಟಕ ಜಾನಪದ ಅಕಾಡೆಮಿಯು 2025ನೇ ಸಾಲಿನ ಪ್ರಶಸ್ತಿ ಪ್ರಕಟಿಸಿದ್ದು. ವಾರ್ಷಿಕ ಜಾನಪದ ವಿದ್ವಾಂಸರಾದ ಚಿಕ್ಕಣ್ಣ ಯಣ್ಣೆಕಟ್ಟೆ ಹಾಗೂ ಎಚ್.ಟಿ.ಪೋತೆ ಅವರು 'ಜಾನಪದ ತಜ್ಞ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.**

- ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಬಿಡುಗಡೆ ಮಾಡಿದರು.
- ತಜ್ಞ ಪ್ರಶಸ್ತಿ'ಯು ಜಾನಪದ ತಜ್ಞ ತಲಾ 50 ಸಾವಿರ ನಗದು ಒಳ ಗೊಂಡಿದೆ. ವಾರ್ಷಿಕ ಗೌರವ ಪ್ರಶಸ್ತಿಗೆ 31 * ಜಿಲ್ಲೆಗಳಿಂದ 30 ಕಲಾವಿದರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ: 25 ಸಾವಿರ ನಗದು ಒಳಗೊಂಡಿದೆ.
- ಗೌರವ ಬೆಂಗಳೂರಿನ ಸಿದ್ದರಾಜು (ನೀಲಗಾರರ ಪದ ಮತ್ತು ತಂಬೂರಿ ಪದ), ಬೆಂಗಳೂರು ಗ್ರಾಮಾಂತರದ ಬಚ್ಚಮ್ಮ (ಸೋಬಾನೆ ಪದ, ತತ್ವಪದ, ಸಂಪ್ರದಾಯ ಪದ), ರಾಮನಗರದ ಬಿ. ಸಿದ್ದರಾಜಯ್ಯ (ಜಾನಪದ ಗಾಯನ), ಕೋಲಾರದ ಸೀತಮ್ಮ (ತತ್ವಪದ), ಚಿಕ್ಕಬಳ್ಳಾಪುರದ ಕೆ.ಎಂ. ನಾರಾಯಣ ಸ್ವಾಮಿ (ಕೀಲು ಕುದುರೆ), ತುಮಕೂರಿನ ರೇವಣ್ಣ ಅಲುಕುಣಿತ ದಾವಣಗೆರೆಯ ಜಿ. ಪರಮೇಶ್ವರಪ್ಪ ಕತ್ತಿಗೆ (ತತ್ವಪದ), ಚಿತ್ರದುರ್ಗದ ಜಿ.ಎನ್. ವಿರೂಪಾಕ್ಷಪ್ಪ (ಜಾನಪದ ಸಂಗೀತ), ಶಿವಮೊಗ್ಗದ ಕೆ.ಎಸ್. ಲಿಂಗಪ್ಪ (ಅಂಟಿಕೆ ಪಂಟಿಕೆ), ಮೈಸೂರಿನ ಚನ್ನಾಜಮ್ಮ (ಸೋಬಾನೆ ಪದ ಮತ್ತು ಜಾನಪದ ಗಾಯನ)
- (ಗೀಗೀ ಪದ, ಲಾವಣಿ, ತತ್ವಪದ ಮತ್ತು ಭಜನೆ), ಚಿಕ್ಕಮಗಳೂರಿನ ಎಚ್.ಎಂ. ರವಿ (ವೀರಗಾಸೆ), ಚಾಮರಾಜ ನಗರದ ಬಸವರಾಜು ಯರಕನಗದ್ದೆ (ಗೊರುಕನ ನೃತ್ಯ), ದಕ್ಷಿಣ ಕನ್ನಡದ ಸುಮತಿ ಕೊರಗೆ ಕೊರಗರ ಡೋಲು), ಉಡುಪಿಯ ಗುಲಾಬಿ ಗೌಡ್ತಿ (ನಾಟಿ ವೈದ್ಯ), ಕೊಡಗಿನ ಅಮ್ಮಣಿ (ಸೂಲಗಿತ್ತಿ, ಕುಡಿಯ ಜನಾಂಗದ ಹಾಡುಗಾರಿಕೆ), ಬೆಳಗಾವಿಯ ಭೀಮಪ್ಪ ಸಿದ್ದಪ್ಪ ಮುತ್ನಾಳ್ (ಪುರವಂತಿಕೆ), ಧಾರ ವಾಡದ ಪ್ರಕಾಶ ಮಲ್ಲಿಗವಾಡ (ಜಾನಪದ ನೃತ್ಯ), ವಿಜಯಪುರದ ಜ್ಯೋತಿರ್ಲಿಂಗ
- ಮಂಡ್ಯದ ಹೊನ್ನಯ್ಯ (ಕೋಲಾಟ), ಹಾಸನದ ಯೋಗೇಂದ್ರ ದುದ್ದ ಹೊಸಕಟ್ಟೆ (ಜಾನಪದ ಗಾಯನ) ಬಾಗಲಕೋಟೆಯ ಚಂದ್ರಲಿಂಗಪ್ಪ ನಿಂಗಪ್ಪ ಬಸರಕೋಡ (ಪುರವಂತಿಕೆ), ಉತ್ತರ ಕನ್ನಡದ ಗೌರಿ ನಾಗಪ್ಪ ನಾಯ್ಕ (ಸುಗ್ಗಿ ಹಾಡುಗಳು, ಜಾನಪದ ಕಣ್ಣ ಸಂಪ್ರದಾಯದ ಪದಗಳು), ಹಾವೇರಿಯ ಭಿಕ್ಷಾಪತಿ ಮೋತಿ (ಹಗಲುವೇಷ), ಗದಗದ ಕಾಶೀಮಸಾಬ ಹುಸೇನಸಾಬ (ಹೆಜ್ಜೆ ಮೇಳ), ಕಲಬುರಗಿಯ ಭಾಗಪ್ಪ (ತತ್ವಪದ), ಬೀದರ್‌ನ ಇಂದ್ರಮ್ಮ (ಮೊಹರಂ ಪದ), ರಾಯಚೂರಿನ ಯಂಕನಗೌಡ (ತತ್ವಪದ), ಕೊಪ್ಪಳದ ರಾಮಣ್ಣ (ಹಗಲು ವೇಷ), ವಿಜಯನಗರದ ಕಿಂಡ್ರಿ ಲಕ್ಷ್ಮೀಪತಿ (ಸುಡುಗಾಡು ಸಿದ್ದರು) ಹಾಗೂ ಯಾದಗಿರಿಯ ಪ್ರಶಸ್ತಿ ಪ್ರದಾನ ಸಮಾರಂಭದ ದಿನಾಂಕ: ಹಾಗೂ ಸ್ಥಳವನ್ನು ಮುಂದಿನ ದಿನಗಳಲ್ಲಿ ನಿಗದಿಸರಿ, ಸಲಾಗುವುದು ಎಂದು ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು. ಸುದ್ದಿಗೋಷ್ಠಿ ಯಲ್ಲಿ ಅಕಾಡೆಮಿ ಸದಸ್ಯರಾದ ಸಿ.ಎನ್. ಮಂಜೇಶ್ ಚೆನ್ನಾಪುರ, ಹುಲಿಕುಂಟೆ ಮೂರ್ತಿ, ಕೆಂಪಮ್ಮ ಎಂ., ವಿಜಯಕುಮಾರ ಸೋನಾರೆ, ಮಲ್ಲಿ ಕಾರ್ಜುನ ಕಲಮರಹಳ್ಳಿ ಹಾಗೂ ಮೆಹ ಕಿಲ್ಲೇದಾರ ಉಪಸ್ಥಿತರಿದ್ದರು.

## ❖ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ: ಹುಲಿಗಳ ಸೆರೆಗೆ ಬೋನು, ಅರಿವಳಿಕೆ ಕಾರ್ಯಾಚರಣೆ

**ಸಂದರ್ಭ: ಚಾಮರಾಜನಗರ ತಾಲ್ಲೂಕಿನ ನಂದೇದೇವಪುರದಲ್ಲಿ ಕಾಣಿಸಿಕೊಂಡಿರುವ ಐದು ಹುಲಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಮೊದಲಿಗೆ ಬೋನುಗಳನ್ನು ಅಳವಡಿಸಬೇಕು.**

- ಅಗತ್ಯವಿದ್ದರೆ ಅರಿವಳಿಕೆ ನೀಡಿ ಸೆರೆ ಹಿಡಿಯಬೇಕು' ಎಂದು ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.
- ವಿಡಿಯೊ ಸಂವಾದದ ಮೂಲಕ ಮಂಗಳವಾರ ತುರ್ತು ಸಭೆ ನಡೆಸಿದ ಖಂಡ್ರೆ, 'ಖಾಸಗಿ ಜಮೀನಿನಲ್ಲಿ ಹುಲಿಗಳು ಕಾಣಿಸಿಕೊಂಡಿದ್ದು, ಜನರು ಭಯಭೀತರಾಗಿದ್ದಾರೆ. ಜೀವಹಾನಿ ಆಗದ ರೀತಿಯಲ್ಲಿ ಮತ್ತು ವನ್ಯ ಜೀವಿಗಳಿಗೂ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.
- 'ಹುಲಿಗಳ ಚಲನವಲನದ ಮೇಲೆ ಸತತ ನಿಗಾ ಅತ್ಯಗತ್ಯ. ಡ್ರೋನ್ ಕ್ಯಾಮೆರಾಗಳು, ಥರ್ಮಲ್ ಕ್ಯಾಮೆರಾಗಳನ್ನು ಬಳಸಿ ಹುಲಿಗಳು
- ಎಲ್ಲಿವೆ ಎಂಬ ಬಗ್ಗೆ ಖಚಿತ ಮಾಹಿತಿ ಪಡೆದು ಗ್ರಾಮಸ್ಥರಿಗೆ ತಕ್ಷಣ ಮಾಹಿತಿ ನೀಡಬೇಕು ಮತ್ತು ಅಲ್ಲಿಗೆ ಅರಣ್ಯ ಇಲಾಖೆಯ ತಂಡಗಳನ್ನು ಕಳುಹಿಸಿ ಯಾವುದೇ ಅನಾಹುತ ಆಗದಂತೆ ಕ್ರಮ ವಹಿಸಬೇಕು' ಎಂದರು.
- 'ಐದು ಹುಲಿಗಳ ಸೆರೆಗೆ ಕಾರ್ಯಾಚರಣೆ ಸುಲಭದ ಕೆಲಸವಲ್ಲ. ಹುಲಿಗಳನ್ನು ಹಿಡಿಯುವಾಗ ಕಾರ್ಯಾಚರಣೆ ತಂಡದ ಮೇಲೆ ದಾಳಿ ಮಾಡದಂತೆ ಮತ್ತು ಬಡಗಲಪುರದಲ್ಲಿ ಹುಲಿ ರಕ್ಷಣೆ ಕಾರ್ಯಾಚರಣೆ ವೇಳೆ ವ್ಯಕ್ತಿಯ ಮೇಲೆ ದಾಳಿ ಆಗಿರುವಂತಹ ಪ್ರಕರಣಗಳು ಮರುಕಳಿಸದಂತೆ ಹಿರಿಯ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು. ಸಿಬ್ಬಂದಿಯ ಸುರಕ್ಷತೆಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು' ಎಂದರು.
- ಸಭೆಯಲ್ಲಿ ಅರಣ್ಯ ಪಡೆ ಮುಖ್ಯಸ್ಥ ಮೀನಾಕ್ಷಿ ನೇಗಿ, ಹಿರಿಯ ಅಧಿಕಾರಿಗಳಾದ ಮನೋಜ್, ಬಿಸ್ವಜಿತ್ ಮಿಶ್ರಾ ಮತ್ತು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಇದ್ದರು.
- ವೈದ್ಯರ ನಿಯೋಜನೆ: 'ಹುಲಿಗಳ ರಕ್ಷಣಾ ಕಾರ್ಯಾಚರಣೆಗೆ ಅಗತ್ಯವಿರುವ ಎಲ್ಲ ಸಲಕರಣೆ, ಹೆಚ್ಚುವರಿ ಪಶುವೈದ್ಯರು, ಶಾರ್ಪ್ ಶೂಟರ್‌ಗಳನ್ನೂ ನಿಯೋಜಿಸಬೇಕು ಹಾಗೂ ಹೆಚ್ಚುವರಿಯಾಗಿ ಆನೆಗಳನ್ನು ತಕ್ಷಣವೇ ತರಿಸಿಕೊಳ್ಳಬೇಕು. ಅಲ್ಲದೆ, ಕಾಡಿನಿಂದ ನಾಡಿನತ್ತ ವನ್ಯಜೀವಿಗಳು ಬಾರದಂತೆ ಶಾಶ್ವತ ಪರಿಹಾರ ಏನು ಎಂಬ ಬಗ್ಗೆ ಅಧಿಕಾರಿಗಳು, ತಜ್ಞರೊಂದಿಗೆ ಚರ್ಚಿಸಿ ರೂಪುರೇಷೆ ತಯಾರಿಸಿ, ವರದಿ ಸಲ್ಲಿಸಬೇಕು' ಎಂದೂ ಸೂಚಿಸಿದರು.
- ತುರುವೇಕೆರೆಯಲ್ಲಿ ಮಹಿಳೆಯ ಮೇಲೆ ದಾಳಿ ಮಾಡಿ ಸಾವಿಗೆ ಕಾರಣವಾಗಿದ್ದ ಚಿರತೆ, ಮಹಿಳೆಯ ದೇಹದ ಮಾಂಸ ಭಕ್ಷಣೆ ಮಾಡಿರುವ ಕಾರಣ ಅದನ್ನು ಸೆರೆ ಹಿಡಿದು ಪುನರ್ವಸತಿ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು
- ಸಭೆಯಲ್ಲಿ ಅರಣ್ಯ ಪಡೆ ಮುಖ್ಯಸ್ಥ ಮೀನಾಕ್ಷಿ ನೇಗಿ, ಹಿರಿಯ ಅಧಿಕಾರಿಗಳಾದ ಮನೋಜ್, ಬಿಸ್ವಜಿತ್ ಮಿಶ್ರಾ ಮತ್ತು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಇದ್ದರು.

## ❖ 'ಜೀವಿತಾವಧಿವರೆಗೆ ಶಿಕ್ಷೆ ವಿಧಿಸುವಂತಿಲ್ಲ'

**ಸಂದರ್ಭ: ವಿಚಾರಣಾ ನ್ಯಾಯಾಲಯ ಒಬ್ಬ ವ್ಯಕ್ತಿಯ ಸ್ವಾಭಾವಿಕ ಜೀವಿತಾವಧಿ ವರೆಗೆ ಜೀವಾವಧಿ ಶಿಕ್ಷೆಯನ್ನು ವಿಧಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.**

- ನ್ಯಾಯ ಮೂರ್ತಿಗಳಾದ ಅಹಸಾನುದ್ದೀನ್ ಅಮಾನುಲ್ಲಾಹ್ ಮತ್ತು ಕೆ.ವಿನೋದ್ ಚಂದ್ರನ್ ನೇತೃತ್ವದ ನ್ಯಾಯಪೀಠವು, ಜೀವಿತಾವಧಿಯವರೆಗೆ ಜೀವಾವಧಿ ಶಿಕ್ಷೆ ವಿಧಿಸುವ ಅಧಿಕಾರ ಸಾಂವಿಧಾನಿಕ ನ್ಯಾಯಾಲಯಗಳಿಗೆ ಮಾತ್ರ ಇರುತ್ತದೆ.

- ಸೆಷನ್ಸ್ ಕೋರ್ಟ್‌ಗಳಿಗೆ ಅಂಥ ಅಧಿಕಾರ ಇರುವುದಿಲ್ಲ ಎಂದು ಸ್ಪಷ್ಟಪಡಿಸಿತು. ಲೈಂಗಿಕವಾಗಿ ಸಹಕರಿಸದ ಘಟನೆ ನಡೆದ 10 ದಿನಗಳ ನಂತರ ವಿಧವೆಯೊಬ್ಬರಿಗೆ ಬೆಂಕಿ ಇಟ್ಟ ಪ್ರಕರಣದ ನ್ಯಾಯಾಲಯವು ಭಾಗಶಃ ಪರಿಗಣಿಸಿತು. ಅಪರಾಧಿ ಕಿರಣ್ ಮನವಿಯನ್ನು ಸಂತ್ರಸ್ತೆಯು ಮೃತಪಟ್ಟಿದ್ದರು.
- ತಪ್ಪಿತಸ್ಥನಿಗೆ ವಿಚಾರಣಾ ನ್ಯಾಯಾಲಯವು ಜೀವಿತಾವಧಿಯವರೆಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತ್ತು ಮತ್ತು ಕಸ್, 428ರ ಅಡಿಯಲ್ಲಿ ಕ್ಷಮೆಯನ್ನೂ ಪಡೆಯುವಂತಿಲ್ಲ ಎಂದು ಸೂಚಿಸಿತ್ತು.
- ಪ್ರಕರಣದ ವಿಚಾರಣೆ ನಡೆಸಿದ ಪೀಠವು, ತಪ್ಪಿತಸ್ಥ ಎಂಬ ತೀರ್ಪನ್ನು ಎತ್ತಿಹಿಡಿಯಿತು ಮತ್ತು 14 ವರ್ಷಗಳ ಜೀವಾವಧಿ ಶಿಕ್ಷೆಯಾಗಿ ಪರಿಷ್ಕರಿಸಿತು.

## ❖ ಹೊಸ ತಲೆಮಾರಿನ ಅಮೆರಿಕದ ಸಂವಹನ ಉಪಗ್ರಹ 'ಬ್ಲೂಬರ್ಡ್ ಬ್ಲಾಕ್-2' ಅನ್ನುನಭಕ್ಕೆ ಹೊತ್ತೊಯ್ಯುವ ಎಲ್‌ವಿಎಂ-ಎಂ ರಾಕೆಟ್ ಉಡಾವಣೆಗೆ ಕ್ಷಣಗಣನೆ ಆರಂಭವಾಗಿದೆ: ಇಸ್ರೋ.

**ಸಂದರ್ಭ: "ಬ್ಲೂಬರ್ಡ್ ಬ್ಲಾಕ್-2' ಉಪಗ್ರಹವನ್ನು ಡಿಸೆಂಬರ್ 24ರಂದು ಬೆಳಿಗ್ಗೆ 8.54ಕ್ಕೆ ಆಂಧ್ರ ಪ್ರದೇಶದ ಶ್ರೀಹರಿಕೋಟಾ ಉಡ್ಡಯನ ಕೇಂದ್ರದ ಎರಡನೇ ಲಾಂಚ್ ಪ್ಯಾಡ್‌ನಿಂದ ಉಡ್ಡಯನ ಮಾಡಲು ಇಸ್ರೋ ಸಿದ್ಧತೆ ಮಾಡಿಕೊಂಡಿದೆ.**

- ಎಲ್‌ವಿಎಂ3 ರಾಕೆಟ್, ಇದೇ ಮೊದಲ ಬಾರಿಗೆ 6,100 ಕೆ.ಜಿ ತೂಕದ ಪೇಲೋಡ್‌ಗಳನ್ನು ನಭಕ್ಕೆ ಹೊತ್ತೊಯ್ಯುತ್ತಿದೆ.
- ಭೂ ಮೇಲ್ಮನಿಂದ 600 ಕಿ.ಮೀ. ಎತ್ತರದಲ್ಲಿ ವಾಣಿಜ್ಯ ಉದ್ದೇಶದ ಉಪಗ್ರಹವನ್ನು ಸೇರಿಸುವ ಮಹತ್ವದ ಯೋಜನೆ ಇದಾಗಿದೆ. ಬ್ಲೂಬರ್ಡ್ ಬ್ಲಾಕ್-2 ಉಪಗ್ರಹವು ಉಡಾವಣೆಯಾದ 15 ನಿಮಿಷಗಳ ಬಳಿಕ ಉಡಾವಣಾ ವಾಹಕದಿಂದ ಪ್ರತ್ಯೇಕಗೊಳ್ಳಲಿದೆ. ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮತ್ತು ಅಮೆರಿಕ ಮೂಲದ ಎಎಸ್‌ಟಿ ಸ್ಪೇಸ್ ಮೊಬೈಲ್ ನಡುವೆ ನಡೆದ ಖಾಸಗಿ ಒಪ್ಪಂದದ ಭಾಗವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.
- ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್, ಇಸ್ರೋ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಂಗಸಂಸ್ಥೆಯಾಗಿದೆ.
- ಉಪಗ್ರಹ ಉಡಾವಣೆ ಮುನ್ನ ಇಸ್ರೋ ಅಧ್ಯಕ್ಷ ವಿ.ನಾರಾಯಣನ್ ಅವರು ಮಂಗಳವಾರ ತಿರುಪತಿಯ ವೆಂಕಟೇಶ್ವರ ದೇಗುಲಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.




### ಉಪಗ್ರಹದ ವಿಶೇಷತೆ

- ಜಗತ್ತಿನಾದ್ಯಂತ ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಹೈ-ಸ್ಪೀಡ್ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ಪೂರೈಸುವಂತೆ ಈ ಉಪಗ್ರಹವನ್ನು ವಿನ್ಯಾಸ ಗೊಳಿಸಲಾಗಿದೆ
- ಎಎಸ್‌ಟಿ ಸ್ಪೇಸ್‌ಮೊಬೈಲ್ ಕಂಪನಿಯು ಇದೇ ಮೊದಲ ಬಾರಿಗೆ ಬಾಹ್ಯಾಕಾಶ ಆಧಾರಿತ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ನಿರ್ಮಿಸುತ್ತಿದೆ. ಇದನ್ನು ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಳಕೆ ಮಾಡಬಹುದು. ಇದನ್ನು ಸರ್ಕಾರಿ ಮತ್ತು ವಾಣಿಜ್ಯ ಸೇವೆಗಳ ಅಪ್ಲಿಕೇಷನ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ
- ಪ್ರತಿಯೊಬ್ಬರಿಗೂ ಎಲ್ಲಾ ಸಮಯದಲ್ಲೂ 4ಜಿ, 5ಜಿ ಧ್ವನಿ ಮತ್ತು ವಿಡಿಯೊ ಕಾಲ್, ಟೆಕ್ಸ್ಟ್, ಸ್ಟ್ರೀಮಿಂಗ್ ಮತ್ತು ಡೇಟಾವನ್ನು ಒದಗಿಸುತ್ತದೆ

## ❖ 'ತಾಯಂದಿರ ಮರಣ ಪ್ರಮಾಣ ಗಣನೀಯ ಇಳಿಕೆ'

**ಸಂದರ್ಭ: ಭಾರತದಲ್ಲಿ ಆರೋಗ್ಯ ಸಂಸ್ಥೆಗಳಿಗೆ ಬಂದು ಹೆರಿಗೆ ಮಾಡಿಸಿಕೊಳ್ಳುವವರ ಪ್ರಮಾಣ ಶೇ 89ರಷ್ಟು ಹೆಚ್ಚಾಗಿದೆ. ಹೀಗಾಗಿ ತಾಯಂದಿರ ಮರಣ ಪ್ರಮಾಣ ದಲ್ಲಿ (ಎಂಎಂಆರ್) ಗಣನೀಯ ಇಳಿಕೆ ದಾಖಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಮಂಗಳವಾರ ಹೇಳಿದ್ದಾರೆ.**

- ಧಾರ್ ಜಿಲ್ಲೆಯಲ್ಲಿ ಸಾರ್ವಜನಿಕ ಮತ್ತು ಜೆ.ಪಿ.ನಡ್ಡಾ ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ನಿರ್ಮಿಸಲಾಗುತ್ತಿರುವ ವೈದ್ಯಕೀಯ ಕಾಲೇಜಿಗೆ ಶಿಲಾನ್ಯಾಸ ನೆರವೇರಿಸಿ, ನಡ್ಡಾ ಈ ಹೇಳಿಕೆ ನೀಡಿದರು.
- ಅಲ್ಲದೇ, ನಾಗರಿಕರಿಗೆ ಉತ್ತಮ ಆರೋಗ್ಯ ಸೌಲಭ್ಯ ಒದಗಿಸಿಕೊಡಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಶ್ರಮಿಸುತ್ತಿದೆ. ಇದಕ್ಕಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ.

## ❖ ಇ-ವಾಣಿಜ್ಯ ವೇದಿಕೆಗಳಿಂದಲೂ ಮಾಹಿತಿ: ಹಣದುಬ್ಬರ ಸೂಚ್ಯಂಕವನ್ನು ಇನ್ನಷ್ಟು ನಿಖರ, ವಿಶ್ವಾಸಾರ್ಹ ಆಗಿಸಲು ಕ್ರಮ


**ಸಂದರ್ಭ: ಹಣದುಬ್ಬರದ ಪ್ರಮಾಣವನ್ನು ಲೆಕ್ಕಹಾಕುವಾಗ ಇ-ವಾಣಿಜ್ಯ ವೇದಿಕೆಗಳಲ್ಲಿ ವಿವಿಧ ಉತ್ಪನ್ನಗಳಿಗೆ ನಿಗದಿ ಮಾಡಿರುವ ಬೆಲೆ, ವಿವಿಧ ಆನ್‌ಲೈನ್ ವೇದಿಕೆಗಳಲ್ಲಿ ನಮೂದಾಗಿರುವ ಬೆಲೆಯನ್ನು ಕೂಡ ಪರಿಗಣಿಸಲು ಕೇಂದ್ರ ಸರ್ಕಾರ ಆಲೋಚನೆ ನಡೆಸುತ್ತಿದೆ.**

- ಹೀಗೆ ಮಾಡುವುದರಿಂದ ಹಣದುಬ್ಬರ ಲೆಕ್ಕಹಾಕಲು ಆಶ್ರಯಿಸುವ ಗ್ರಾಹಕ ಬೆಲೆ ಸೂಚ್ಯಂಕದ (ಸಿಪಿಐ) ವಿಶ್ವಾಸಾರ್ಹತೆಯು ಸುಧಾರಿಸುತ್ತದೆ ಎಂಬುದು ಸರ್ಕಾರದ ನಿರೀಕ್ಷೆ.
- ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯವು ಸಿಪಿಐ, ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಮತ್ತು ಒಟ್ಟು ಅಂತರಿಕ ಉತ್ಪಾದನೆಯ (ಜಿಡಿಪಿ) ಮೂಲ ವರ್ಷವನ್ನು ಪರಿಷ್ಕರಿಸುವ ಪ್ರಕ್ರಿಯೆ ಕೈಗೆತ್ತಿಕೊಂಡಿದೆ.
- ಸಚಿವಾಲಯವು ಸಮಾಲೋಚನಾ ಕಾರ್ಯಾಗಾರ ವೊಂದನ್ನು ಆಯೋಜಿಸಿತ್ತು.
- ಈಗಿರುವ ವ್ಯವಸ್ಥೆಯ ಅಡಿಯಲ್ಲಿ ಭೌತಿಕ ಮಳಿಗೆಗಳಿಂದ ಬೆಲೆಯ ವಿವರ ಸಂಗ್ರಹಿಸಲಾಗುತ್ತಿದೆ. ಹೊಸ ವ್ಯವಸ್ಥೆಯ ಅಡಿಯಲ್ಲಿ ಇದರ ಜೊತೆಯಲ್ಲೇ, ಇ-ವಾಣಿಜ್ಯ ವೇದಿಕೆಗಳಿಂದಲೂ ವಿವಿಧ ಉತ್ಪನ್ನಗಳ ಬೆಲೆಯ ವಿವರ ಪಡೆಯಲಾಗುತ್ತದೆ. 25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ 12 ಆಯ್ದ ನಗರಗಳು ಲ್ಲಿನ ಇ-ಕಾಮರ್ಸ್ ವೇದಿಕೆಗಳಿಂದ ಬೆಲೆ ವಿವರ ಸಂಗ್ರಹಿಸಲಾಗುತ್ತದೆ.
- ಮಾಹಿತಿಯನ್ನು ಪಡೆಯುವುದರಿಂದ ಸಿಪಿಐ ಸೂಚ್ಯಂಕವು ಹೆಚ್ಚು ಪ್ರಾತಿನಿಧಿಕವಾಗುತ್ತದೆ. ಅದು ಹೆಚ್ಚು ವಿಶ್ವಾಸಾರ್ಹವಾಗುತ್ತದೆ, ಅದರ ದತ್ತಾಂಶವು ಇನ್ನಷ್ಟು ನಿಖರವಾಗುತ್ತದೆ ಎಂದು ಸಚಿವಾಲಯ ಹೇಳಿದೆ.
- ಸಚಿವಾಲಯವು ಇನ್ನಷ್ಟು ಸಂಖ್ಯೆಯ ಗ್ರಾಮೀಣ ಹಾಗೂ ನಗರ ಮಾರುಕಟ್ಟೆಗಳಿಂದ ವಿವರ ಸಂಗ್ರಹಿಸಲು ಮುಂದಾಗಿದೆ.
- ಸಚಿವಾಲಯದ ಕಾರ್ಯದರ್ಶಿ ಸೌರಭ್ ಕಾರ್ಯಾಗಾರದಲ್ಲಿ ಮಾತನಾಡಿದ ಗರ್ಗ್ ಅವರು, ಫೆಬ್ರುವರಿಯಲ್ಲಿ ಹೊಸ ದತ್ತಾಂಶ ಸರಣಿಯನ್ನು ಬಿಡುಗಡೆ ಮಾಡಿದ ನಂತರದಲ್ಲಿಯೂ ಬಿಡಿಪಿ ಸಂಬಂಧಿತ ಅಂಕಿ ಅಂಶಗಳಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಲಿಕ್ಕಿಲ್ಲ ಎಂದು ಹೇಳಿದ್ದಾರೆ.
- ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು 1,181 ಗ್ರಾಮೀಣ ಮಾರುಕಟ್ಟೆಗಳಿಂದ ಹಾಗೂ 1,114 ನಗರ ಮಾರುಕಟ್ಟೆ-ಗಳಿಂದ ಮಾಹಿತಿ ಸಂಗ್ರಹಿಸಿ ಸಿಪಿಐ ಸೂಚ್ಯಂಕದ ಮಟ್ಟವನ್ನು ನಿರ್ಧರಿಸುತ್ತದೆ. ಸಿಪಿಐ ಆಧಾರಿತ ಚಿಲ್ಲರೆ ಹಣದುಬ್ಬರದ ಪ್ರಮಾಣ ಆಧರಿಸಿ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ರೆಪೊ ದರ ಎಷ್ಟಿರಬೇಕು ಎಂಬುದನ್ನು ತೀರ್ಮಾನಿಸುತ್ತದೆ.
- ದತ್ತಾಂಶದ ಹೊಸ ಸರಣಿಯನ್ನು ಕೇಂದ್ರವು 2026ರ ಫೆಬ್ರುವರಿ 12ರಂದು ಬಿಡುಗಡೆ ಮಾಡುವ ನಿರೀಕ್ಷೆ ಇದೆ.

## ❖ ಕಕ್ಷೆಗೆ ಸೇರಿದ ಬ್ಲೂಬರ್ಡ್ ಬ್ಲಾಕ್

**ಸಂದರ್ಭ: ಸ್ವದೇಶಿ ನಿರ್ಮಿತ ಬಾಹುಬಲಿ' ರಾಕೆಟ್ ಮೂಲಕ ಹೊಸ ತಲೆಮಾರಿನ ಅಮೆರಿಕದ ಸಂವಹನ ಉಪಗ್ರಹವನ್ನು ಇಸ್ರೋ ಯಶಸ್ವಿಯಾಗಿ ನಿಗದಿತ ಕಕ್ಷೆಗೆ ಸೇರಿಸಿತು. ಈ ಮೂಲಕ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು.**

- 6.100 ಕೆ.ಜಿ ತೂಕದ ಬ್ಲೂಬರ್ಡ್ ಬ್ಲಾಕ್ -2 ಸಂವಹನ ಉಪಗ್ರಹವನ್ನು ಹೊತ್ತ ಎಲ್‌ವಿಎಂ3-ಎಂ6 ರಾಕೆಟ್, ಆಂಧ್ರ ಪ್ರದೇಶದ ಶ್ರೀಹರಿಕೋಟಾ ಬಾಹ್ಯಾಕಾಶ ಉಡ್ಡಯನ ಕೇಂದ್ರದ ಎರಡನೇ ಲಾಂಚ್ ಪ್ಯಾಡ್‌ನಿಂದ ಬೆಳಿಗ್ಗೆ 8.55ಕ್ಕೆ ಸರಿಯಾಗಿ ನಭಕ್ಕೆ ಚಿಮ್ಮಿತು. ಭಾರತದ ಮಣ್ಣಿನಿಂದ ಉಡಾವಣೆಯಾದ ಅತಿ ಹೆಚ್ಚು ತೂಕದ ಉಪಗ್ರಹ ಇದಾಗಿದೆ ಎಂದು ಇಸ್ರೋ ತಿಳಿಸಿದೆ.
- ಅತ್ಯಂತ ಭಾರವಾದ ಸಲಕರಣೆಗಳನ್ನು ಹೊತ್ತೊಯ್ಯು LMV-3 M-06 'ಬಾಹುಬಲಿ' ಎಂದೇ ಕರೆಯಲಾಗುತ್ತಿದೆ ಎಂದು ಅದು ತಿಳಿಸಿದೆ.
- ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮತ್ತು ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್ ನಡುವೆ ನಡೆದ ಒಪ್ಪಂದದ ಭಾಗವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್, ಇಸ್ರೋ ಅಡಿಯಲ್ಲಿ ಕಾರ್ಯನಿರ್ವಹಿಸುವ ವಾಣಿಜ್ಯ ಸಂಸ್ಥೆಯಾಗಿದೆ.
- ಬಾಹ್ಯಾಕಾಶ ನೌಕೆಯು ಉಡಾವಣೆಯಾದ 15 ನಿಮಿಷಗಳ ಬಳಿಕ ಉಡಾವಣಾ ವಾಹಕದಿಂದ ಪ್ರತ್ಯೇಕ-ಗೊಂಡಿತು. ಬಳಿಕ ಯಶಸ್ವಿಯಾಗಿ ಉಪಗ್ರಹವನ್ನು ಕಕ್ಷೆಗೆ ಸೇರಿಸಿತು ಎಂದು ಇಸ್ರೋ ಹೇಳಿದೆ.
- ಇದರೊಂದಿಗೆ ಇಸ್ರೋ 52 ದಿನಗಳ ಒಳಗಾಗಿ ಎರಡು ಎಲ್ ವಿಎಂ3 ರಾಕೆಟ್‌ಗಳನ್ನು ಉಡಾವಣೆ ಮಾಡಿದಂತಾಗಿದೆ. ಇದಕ್ಕೂ ಮುನ್ನ ನವೆಂಬರ್ 2ರಂದು 4,400 ಕೆ.ಜಿ ತೂಕದ ಉಪಗ್ರಹವನ್ನು ಆಗಸಕ್ಕೆ ಕೊಂಡೊಯ್ದಿತ್ತು ಎಂದು ಹೇಳಿದರು.




ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಎಲ್‌ವಿಎಂ3–ಎಂ6 ರಾಕೆಟ್ ಬುಧವಾರ ನಭಕ್ಕೆ ಚಿಮ್ಮಿತು —ಎಎಫ್‌ಪಿ ಚಿತ್ರ

### ಉಪಗ್ರಹದ ವೈಶಿಷ್ಟ್ಯ

- ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಹೈ ಸ್ಪೀಡ್ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ಪೂರೈಸುವ ಸಾಮರ್ಥ್ಯ ಹೊಂದಿದೆ
- ಈ ಬಾಹ್ಯಾಕಾಶ ಕಾರ್ಯಕ್ರಮವು ಉಪಗ್ರಹದ ಮೂಲಕ ನೇರವಾಗಿ ಮೊಬೈಲ್ ಸಂಪರ್ಕ ಒದಗಿಸುತ್ತದೆ. ಇದರಿಂದ ಪ್ರತಿಯೊಬ್ಬರಿಗೂ ಎಲ್ಲ ಸಮಯದಲ್ಲಿಯೂ 4ಜಿ, 5ಜಿ ಧ್ವನಿ, ವಿಡಿಯೊ ಕರೆ, ಟೆಕ್ಸ್ಟ್, ಸ್ಟ್ರೀಮಿಂಗ್ ಮತ್ತು ಡೇಟಾ ಸೌಲಭ್ಯ ದೊರೆಯಲಿದೆ
- ಎಎಸ್‌ಟಿ ಸ್ಪೇಸ್‌ಮೊಬೈಲ್ ಕಂಪನಿಯು ಇದೇ ಮೊದಲ ಬಾರಿಗೆ ಬಾಹ್ಯಾಕಾಶ ಆಧಾರಿತ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ನಿರ್ಮಿಸುತ್ತಿದೆ. ಇದನ್ನು ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಳಕೆ ಮಾಡಬಹುದು. ಇದನ್ನು ಸರ್ಕಾರಿ ಮತ್ತು ವಾಣಿಜ್ಯ ಸೇವೆಗಳ ಅಪ್ಲಿಕೇಷನ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ



### 'ಗಗನಯಾನ ಯೋಜನೆಗೆ ಮತ್ತಷ್ಟು ಬಲ'

ಬ್ಲೂಬರ್ಡ್ ಬ್ಲಾಕ್–2 ಉಪಗ್ರಹದ ಯಶಸ್ವಿ ಉಡ್ಡಯನವು ಮಾನವ ಸಹಿತ ಗಗನಯಾನ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ನಡೆಸುವ ಭಾರತದ ಮಹತ್ವಾಕಾಂಕ್ಷೆಗೆ ಮತ್ತಷ್ಟು ಆತ್ಮವಿಶ್ವಾಸವನ್ನು ತುಂಬಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಮೆರಿಕದ ಬಾಹ್ಯಾಕಾಶ ನೌಕೆಯನ್ನು ಕಕ್ಷೆಗೆ ಸೇರಿಸುವ ಈ ಕಾರ್ಯಕ್ರಮವು ಬಹಳ ಮಹತ್ವದ್ದಾಗಿತ್ತು. ಏಕೆಂದರೆ ಭಾರತದ ಗಗನಯಾನ ಯೋಜನೆಯಲ್ಲಿಯೂ ಎಲ್‌ವಿಎಂ3 ಬಾಹ್ಯಾಕಾಶ ನೌಕೆಯು ನಿರ್ಣಾಯಕ ಪಾತ್ರ ವಹಿಸಲಿದೆ. ಭಾರತದ ಗಗನಯಾನಿಗಳನ್ನು ಕಕ್ಷೆಗೆ ಕೊಂಡೊಯ್ಯಲಿದೆ ಮತ್ತು ಸುರಕ್ಷಿತವಾಗಿ ಭೂಮಿಗೆ ಮರಳಿ ಕರೆತರಲಿದೆ' ಎಂದು ಹೇಳಿದರು.

ಈ ಎಲ್‌ವಿಎಂ3 ನೌಕೆಯು ಬ್ಲೂಬರ್ಡ್ ಬ್ಲಾಕ್–2 ಉಪಗ್ರಹವನ್ನು ನಿಗದಿತ ಕಕ್ಷೆಗೆ ನಿಖರವಾಗಿ ಸೇರಿಸಿದೆ. ಈ ನೌಕೆಯು ಶೇ 100ರಷ್ಟು ವಿಶ್ವಾಸಾರ್ಹವಾಗಿದೆ ಎಂದು ತಿಳಿಸಿದರು.

'520 ಕಿ.ಮೀ ದೂರದ ಸೆಲ್ಯುಲಾರ್ ಕಕ್ಷೆಗೆ ಉಪಗ್ರಹವನ್ನು ಸೇರಿಸುವ ಗುರಿ ಹೊಂದಲಾಗಿತ್ತು. ಸದ್ಯ 518.8 ಕಿ.ಮೀ ದೂರದ ಕಕ್ಷೆಗೆ ಸೇರಿಸಲಾಗಿದೆ. ಜಗತ್ತಿನ ಅತ್ಯುತ್ತಮ ಉಪಗ್ರಹ ಉಡಾವಣೆಗಳಲ್ಲಿ ಇದೂ ಒಂದು' ಎಂದು ಅವರು ಬಣ್ಣಿಸಿದರು.

## ❖ ಕೃಷಿ ಭೂಮಿ ಪರಿವರ್ತನೆ ಸಲೀಸು

**ಸಂದರ್ಭ: ಹೊರತಾದ, ಪರಿಭಾವಿತ (ಡೀಮ್ಡ್) ಭೂ ಪರಿವರ್ತನೆಗೂ 30 ದಿನಗಳ ಗಡುವು ನಿಗದಿ ಮಾಡಲಾಗಿದ್ದು, ನವೀಕರಿಸ ಬಹುದಾದ ಇಂಧನ ಘಟಕ ಸ್ಥಾಪನೆ**

- 1964ಕ್ಕೆ ಕಳೆದ ಮೂರು ವರ್ಷಗಳಲ್ಲಿ ತರಲಾದ ತಿದ್ದುಪಡಿಗಳ ಅನ್ವಯ ಹೊಸ ನಿಯಮಗಳನ್ನು ರಚಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.
- ಹೊಸ ನಿಯಮಗಳ ಪ್ರಕಾರ, ಕೃಷಿ ಭೂಮಿ ಖರೀದಿ ಸರಳೀಕರಣ ಮತ್ತು ಕೆಲವು ಉದ್ದೇಶಗಳಿಗೆ ಭೂಮಿ ಪರಿವರ್ತನೆ ನಿಯಮ ಸಡಿಲಿಸಲಾಗಿದೆ. ಭೂ ಪರಿವರ್ತನೆಗೆ ಆನ್‌ಲೈನ್ ಮೂಲಕ ಸಲ್ಲಿಕೆಯಾದ ಅರ್ಜಿಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು 30 ದಿನಗಳ ಒಳಗಾಗಿ ಅನುಮತಿ ನೀಡಬೇಕು. ದಾಖಲೆಗಳು ಸರಿ ಇಲ್ಲದಿದ್ದರೆ ಸಕಾರಣ ನೀಡಿ, ಅರ್ಜಿಗಳನ್ನು ತಿರಸ್ಕರಿಸಬಹುದು
- ನಿಗದಿತ ಅವಧಿಯ ಒಳಗೆ ಜಿಲ್ಲಾಧಿಕಾರಿ ಗಳು ನಿರ್ಧಾರ ತೆಗೆದುಕೊಳ್ಳದಿದ್ದರೆ ಸ್ವಯಂ ಚಾಲಿತವಾಗಿ ಭೂ ಪರಿವರ್ತನೆ ಯಾಗುತ್ತದೆ. ಮಾಸ್ಟರ್ ಇರುವ ಜಮೀನುಗಳಿಗೂ ಪರಿವರ್ತನೆಯಿಂದ ನೀಡಲಾಗಿದ್ದು, ಅಂಥವರು ನೇರವಾಗಿ ಯೋಜನಾ ಅನುಮೋದನೆಗೆ ಅರ್ಜಿ ಸಲ್ಲಿಸಬಹುದಾಗಿದೆ.




- ನವೀಕರಿಸಬಹುದಾದ ಇಂಧನದ ಯೋಜನಾ ಘಟಕ ಸ್ಥಾಪನೆಗೆ ಭೂ ಪರಿವರ್ತನೆಯಿಂದ ವಿನಾಯಿತಿ ಪಡೆಯಬೇಕಾದರೆ ಇಂಧನ ಇಲಾಖೆಯ ಅನುಮತಿ ಪಡೆಯುವುದು ಕಡ್ಡಾಯ. ಹೊಸ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಆಶಯದಿಂದ ಎರಡು ಎಕರೆವರೆಗಿನ ಕೃಷಿ ಭೂಮಿಯನ್ನು ಭೂಪರಿವರ್ತನೆ ಇಲ್ಲದೇ ಕೈಗಾರಿಕಾ ಉದ್ದೇಶಕ್ಕೆ ಕಲ್ಪಿಸಲಾಗಿದೆ. ಬಳಸಲು ಅವಕಾಶ ಕಂದಾಯ ನ್ಯಾಯಾಲಯಗಳನ್ನು ನಡೆಸುವ ಕುರಿತು ಸ್ಪಷ್ಟ ನಿಯಮ ರೂಪಿಸಲಾಗಿದೆ. ಉಪ ವಿಭಾಗಾಧಿಕಾರಿ ಗಳ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಆದೇಶಗಳನ್ನು ಹೊರಡಿಸದಂತೆ, ಕಾನೂನು ಮೀರಿ ಆದೇಶಗಳನ್ನು ನೀಡದಂತೆ ನಿರ್ಬಂಧ ಗಳನ್ನು ವಿಧಿಸಲಾಗಿದೆ. ಹೊಸ ಸುಧಾರಣೆ ಗಳಿಂದಾಗಿ ಸಾರ್ವಜನಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆಯುವುದು ತಪ್ಪಲಿದೆ.

## ❖ ನದಿ ಜೋಡಣೆ ಡಿಪಿಆರ್: ರಾಜ್ಯ ಒಪ್ಪಿಗೆ

**ಸಂದರ್ಭ: ಕರ್ನಾಟಕದಲ್ಲಿ ಪರಿಸರಾಸಕ್ತರ ವ್ಯಾಪಕ ವಿರೋಧದ ನಡುವೆಯೂ ಬೇಡ್ತಿ-ವರದಾ ನದಿಗಳ ಜೋಡಣೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ.**



ಮೇಕೆದಾಟು: ಎರಡು ತಿಂಗಳಲ್ಲಿ ಎಲ್ಲ ದಾಖಲೆ ಸಲ್ಲಿಕೆ

ಬೇಡ್ತಿ ವರದಾ

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳನ್ನು ಕೇಂದ್ರ ಜಲ ಆಯೋಗಕ್ಕೆ ಎರಡು ತಿಂಗಳಲ್ಲಿ ಸಲ್ಲಿಸಲಾಗುವುದು ಎಂದು ಶಿವಕುಮಾರ್ ತಿಳಿಸಿದರು. 'ಮೇಕೆದಾಟು ಯೋಜನೆಯ ಪರಿಷ್ಕೃತ ಡಿಪಿಆರ್ ಸಲ್ಲಿಸುತ್ತಿದ್ದೇವೆ. ರಾಮನಗರ ದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಕಚೇರಿ ಆರಂಭಿಸಲಾಗುತ್ತಿದೆ. ಅರಣ್ಯ ಇಲಾಖೆಯ ಎಷ್ಟು ಭೂಮಿ ಬೇಕಾಗುತ್ತದೆ, ಅದಕ್ಕೆ ಎಷ್ಟು ಪರ್ಯಾಯ ಭೂಮಿ ನೀಡಬೇಕು ಎಂದೆಲ್ಲಾ ತೀರ್ಮಾನ ಆಗಬೇಕಿದೆ. ಪರ್ಯಾಯ ಭೂಮಿಯನ್ನು ಈಗಾಗಲೇ ಗುರುತಿಸಲಾಗಿದೆ. ಅದೆಲ್ಲವನ್ನು ಮುಗಿಸಿಕೊಂಡು ಹಂತ ಹಂತವಾಗಿ ಮುಂದುವರಿಯುತ್ತೇವೆ. ಈ ವಿಷಯದಲ್ಲಿ ಮಂಡ್ಯ ಅಥವಾ ಬೆಂಗಳೂರು ದಕ್ಷಿಣದ ಜಿಲ್ಲಾಧಿಕಾರಿಗೆ ಜವಾಬ್ದಾರಿ ನೀಡುತ್ತೇವೆ' ಎಂದರು.

- ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ನದಿ ಜೋಡಣೆಯ ವಿಶೇಷ ಸಮಿತಿ ಸಭೆಯಲ್ಲಿ ಬೇಡ್ತಿ-ವರದಾ ಜೋಡಣೆ ಬಗ್ಗೆ ಚರ್ಚೆಯಾಗಲಿದೆ. ಈ ನದಿಗಳ ಜೋಡಣೆಗೆ ಜಲಶಕ್ತಿ ಸಚಿವಾಲಯ ಡಿಪಿಆರ್ ತಯಾರಿಸಲಿದೆ.

- ಈ ಯೋಜನೆಗೆ ₹10 ಸಾವಿರ ಕೋಟಿ ವೆಚ್ಚ ಆಗಲಿದ್ದು, ಕೇಂದ್ರ ಸರ್ಕಾರ 19 ಸಾವಿರ ಕೋಟಿ ಭರಿಸಲಿದೆ' ಎಂದು ಮಾಹಿತಿ ನೀಡಿದರು.
- ಈ ಯೋಜನೆಯು ಪಶ್ಚಿಮಕ್ಕೆ ಹರಿಯುವ ನದಿಗಳಿಂದ ರಾಜ್ಯದಪೂರ್ವ ಭಾಗದ ಬರ ಪೀಡಿತ ಭಾಗಗಳಿಗೆ ನೀರನ್ನು ಹರಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.
- 'ಗೋದಾವರಿ-ಕಾವೇರಿ ನದಿಗಳ ಜೋಡಣೆ ಯೋಜನೆಯ ಮೊದಲ ಹಂತದಲ್ಲಿ 148 ಟಿಎಂಸಿ ಅಡಿ ನೀರನ್ನು ತಿರುಗಿಸಲು ಪ್ರಸ್ತಾಪಿಸಲಾಗಿದೆ. ಇದರಲ್ಲಿ ಕರ್ನಾಟಕಕ್ಕೆ ಕೇವಲ 15.90 ಟಿಎಂಸಿ ಅಡಿ ಹಂಚಿಕೆ ಮಾಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಇತರ ಫಲಾನು ಭವಿ ರಾಜ್ಯಗಳಿಗೆ ನೀರಾವರಿ ಸೇರಿದಂತೆ ವಿವಿಧ ಉದ್ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ. ಬೇಡ್ತಿ-ವರದಾನದಿ ಜೋಡಣೆ ಬಳಿಕವೂ ರಾಜ್ಯಕ್ಕೆ ಸಿಗುವುದು ಕೇವಲ 34.40 ಟಿಎಂಸಿ ಅಡಿಗೆ ಮಾತ್ರ, ನದಿ ಜೋಡಣೆ ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಕನಿಷ್ಠ 40-45 ಟಿಎಂಸಿ ಅಡಿ ನೀರನ್ನು ನೀಡಬೇಕು. ಗೋದಾವರಿ- ಕಾವೇರಿ ನದಿ ಜೋಡಣೆ ಯೋಜನೆಯಲ್ಲಿ ಹೆಚ್ಚುವರಿ 5 ಟಿಎಂಸಿ ಅಡಿ ನೀರನ್ನು ಭೀಮಾ ನದಿ ಪ್ರದೇಶಕ್ಕೆ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.
- ಬೇಡ್ತಿ-ವರದಾ ನದಿ ಜೋಡಣೆ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದ ಉಪಯೋಗವಾಗಲು ಕೇಂದ್ರ ಸರ್ಕಾರ ಜನರಿಗೆ ₹10 ಸಾವಿರ ಕೋಟಿ ಹಾಕಿ ರಾಜ್ಯದಿಂದ ₹1 ಸಾವಿರ ಕೋಟಿ ಕೇಳುತ್ತಿರುವಾಗ ನಾವು ಈ ಯೋಜನೆ ಬೇಡ ಎನ್ನಲು ಆಗುತ್ತದೆಯೇ? ಸಮುದ್ರಕ್ಕೆ ಹೋಗುವ ನೀರನ್ನು ಜನರ ಅನುಕೂಲಕ್ಕೆ ಬಳಸುವುದು ನಮ್ಮ ಉದ್ದೇಶ' ಎಂದರು.
- ಬೆಂಗಳೂರಿನಲ್ಲಿ ಪ್ರಾದೇಶಿಕ ಕ್ಷಿಪ್ರ ಸಂಚಾರ ವ್ಯವಸ್ಥೆಗೆ ಮನವಿ ಮಾಡ ಲಾಗಿದೆ. ಬಿಡದಿ- ಮೈಸೂರು, ಹಾರೋಹಳ್ಳಿ-ಕನಕಪುರ, ನೆಲಮಂಗಲ-ತುಮಕೂರು, ವಿಮಾನ ನಿಲ್ದಾಣ ಚಿಕ್ಕಬಳ್ಳಾಪುರ, ಹೊಸಕೋಟೆ-ಕೋಲಾರ ಮಧ್ಯೆ ಈ ಸಂಚಾರ ವ್ಯವಸ್ಥೆ ನಿರ್ಮಿಸಲು ಡಿಪಿಆರ್ ತಯಾರಿಸಲು ಮನವಿ ಮಾಡಿದ್ದೇವೆ. ಬೆಂಗಳೂರಿನ ದಟ್ಟಣೆ ಹಾಗೂ ಒತ್ತಡ ಕಡಿಮೆ ಟೌನ್ ನಿರ್ಮಿಸಬೇಕು ಎಂದು ಈ ಮಾಡಲು ಈ ಭಾಗದಲ್ಲಿ ಸ್ಯಾಟಲೈಟ್ ಯೋಜನೆಗೆ ಮನವಿ ಮಾಡಿದ್ದು, ಇದನ್ನು ಪರಿಗಣಿಸುವುದಾಗಿ ಕೇಂದ್ರ ನಗರಾಭಿವೃದ್ಧಿ ಸಚಿವರು ನೀಡಿದ್ದಾರೆ ಎಂದರು.

## ❖ ಹೊಸ ಸ ಗಣಿಗಾರಿಕೆ ಗುತ್ತಿಗೆ ನಿಷೇಧ

**ಸಂದರ್ಭ: ಅರಾವಳಿ ಪರ್ವತ ಶ್ರೇಣಿ' ವ್ಯಾಪ್ತಿಯಲ್ಲಿ ಹೊಸದಾಗಿ ಗಣಿಗಾರಿಕೆ ಗುತ್ತಿಗೆಗಳನ್ನು ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಕೇಂದ್ರ ಸರ್ಕಾರ.**

### ಹೊಸ ಗಣಿಗಾರಿಕೆ ಗುತ್ತಿಗೆ ನಿಷೇಧ

- ಅರಾವಳಿ ಭಾಗದ ಹಲವೆಡೆ ಕೇಂದ್ರ ಸರ್ಕಾರ ಈಗಾಗಲೇ ಗಣಿ-ಗಾರಿಕೆಯನ್ನು ನಿಷೇಧಿಸಿದೆ. ಅದರ ಜತೆಗೆ ಈ ಪ್ರದೇಶದಲ್ಲಿ ಗಣಿಗಾರಿಕೆ ಯನ್ನು ನಿಷೇಧಿಸಬೇಕಾದ ಹೆಚ್ಚುವರಿ ಪ್ರದೇಶಗಳು ಮತ್ತು ವಲಯಗಳನ್ನು ಗುರುತಿಸುವಂತೆ ಪರಿಸರ ಮತ್ತು ಅರಣ್ಯ ಸಚಿವಾಲಯವು ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿಗೆ (ಐಸಿಎಫ್ಆರ್ಇ) ನಿರ್ದೇಶಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ
- ಈ ನಿಷೇಧವು ಅರಾವಳಿ ಭಾಗದಲ್ಲಿ ಏಕರೂಪವಾಗಿ ಅನ್ವಯಿಸುತ್ತದೆ. ಇಲ್ಲಿನ ಭೂರಚನೆಯ ಸಮಗ್ರತೆಯನ್ನು ಕಾಪಾಡುವ ಮತ್ತು ಅನಿಯಂತ್ರಿತ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯುವ ಗುರಿಯನ್ನು ಇದು ಹೊಂದಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.
- ಈಗ ನಡೆಯುತ್ತಿರುವ ಗಣಿಗಾರಿಕೆ ಚಟುವಟಿಕೆಗಳನ್ನು ಹೆಚ್ಚುವರಿ ನಿರ್ಬಂಧಗಳೊಂದಿಗೆ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಅವರು ತಿಳಿಸಿದೆ.
- ಇಡೀ ಅರಾವಳಿ ಪ್ರದೇಶಕ್ಕೆ ವೈಜ್ಞಾನಿಕ ಆಧಾರದ ಮೇಲೆ ಸಮಗ್ರ ಮತ್ತು ಸುಸ್ಥಿರ ಗಣಿಗಾರಿಕೆ ನಿರ್ವಹಣಾ ಯೋಜನೆ ರೂಪಿಸಬೇಕು. ಅದು ಸಾರ್ವಜನಿಕರ ಸಮಾಲೋಚನೆಗೆ

## ಹೊಸ ವ್ಯಾಖ್ಯಾನಕ್ಕೆ ವಿರೋಧ

- ಪರಿಸರ ಸಚಿವಾಲಯ ನೇತೃತ್ವದ ಸಮಿತಿಯು ಅರಾವಳಿ ಬೆಟ್ಟಗಳು ಮತ್ತು ಅರಾವಳಿ ಶ್ರೇಣಿಯನ್ನು ರೂಪಿಸುವ ಏಕರೂಪ ಕಾನೂನು ವ್ಯಾಖ್ಯಾನ ಕುರಿತು ಮಾಡಿದ್ದ ಶಿಫಾರಸನ್ನು ಸುಪ್ರೀಂ ಕೋರ್ಟ್ 2025 ನವೆಂಬರ್‌ನಲ್ಲಿ ಅಂಗೀಕರಿಸಿತ್ತು.
- ಅದರ ಪ್ರಕಾರ, 100 ಮೀಟರ್‌ಗಿಂತ ಹೆಚ್ಚು ಎತ್ತರವಿರುವ ಪ್ರದೇಶವನ್ನು 'ಅರಾವಳಿ ಬೆಟ್ಟ' ಎಂದು, ಎರಡು ಬೆಟ್ಟಗಳ ನಡುವೆ ಕನಿಷ್ಠ 500 ಮೀಟರ್ ಅಂತರವಿದ್ದರೆ ಅದನ್ನು 'ಅರಾವಳಿ ಪರ್ವತ ಶ್ರೇಣಿ' ಎಂದು ಕರೆಯಲಾಗುತ್ತದೆ. 'ಅರಾವಳಿ' ಕುರಿತ ಈ ಹೊಸ ವ್ಯಾಖ್ಯಾನಕ್ಕೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದ ಬಳಿಕ ಪರಿಸರವಾದಿಗಳಿಂದ ವ್ಯಾಪಕ ವಿರೋಧ ವ್ಯಕ್ತವಾಯಿತು. ರಾಜಸ್ಥಾನ, ಹರಿಯಾಣ ಸೇರಿದಂತೆ 'ಅರಾವಳಿ ಉಳಿಸಿ' ಹೋರಾಟ ರೂಪುಗೊಂಡಿತು.
- ಲಭ್ಯವಾಗುವಂತೆ ಮಾಡಬೇಕು ಎಂದು ಸರ್ಕಾರ ಐಸಿಎಫ್‌ಆರ್'ಗೆ ಹೇಳಿದೆ. ಅರಾವಳಿ ಪರಿಸರ ವ್ಯವಸ್ಥೆಯ ದೀರ್ಘಕಾಲೀನ ರಕ್ಷಣೆಗೆ ಸರ್ಕಾರ ಪೂರ್ಣವಾಗಿ ಬದ್ಧವಾಗಿದೆ.
- ಮರುಭೂಮೀಕರಣ ತಡೆ, ಜೀವವೈವಿಧ್ಯ ರಕ್ಷಣೆ, ಜಲಸಂಪನ್ಮೂಲ ಮರುಪೂರಣದಂತಹ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

## ❖ ಸಂವಿಧಾನ ಬದಲಾವಣೆ ಅಸಾಧ್ಯ

• ಚಂದ್ರಹಾಸ ಹಿರೇಮಳಲಿ

ಪ್ರಬಲ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಚನೆ ಮತ್ತು ಸ್ಥಾಪನೆಯೇ ನಮ್ಮ ಉತ್ಕೃಷ್ಟ ಸಂವಿಧಾನದ ಜೀವಾಳ. ಸಾರ್ವತ್ರಿಕ ಚುನಾವಣೆಗಳ ನಂತರ ದೇಶದ ಆಡಳಿತದ ಚುಕ್ಕಾಣಿ ಹಿಡಿಯುವ ಪಕ್ಷ ಸಂಸತ್‌ನಲ್ಲಿ ಮೂರನೇ ಎರಡಕ್ಕಿಂತಲೂ ಅಧಿಕ ಬಹುಮತ ಹೊಂದಿದ್ದರೂ ಸಂವಿಧಾನದ ಮೂಲ ಆಶಯಗಳನ್ನು ಬದಲಿಸುವುದು ಅಸಾಧ್ಯ. ಸಂವಿಧಾನದ ಮೂಲ ಆಶಯಗಳನ್ನು ಬದಲಾವಣೆ ಮಾಡುವ ಅಧಿಕಾರ ದೇಶವನ್ನು ಆಳುವ ಯಾವುದೇ ಪಕ್ಷದ ಸರ್ಕಾರಕ್ಕೂ ಇಲ್ಲ. ಇದೇ ಸಂವಿಧಾನದ ಮೂಲ ತತ್ವ (ಸ್ವರೂಪ).

ನೆರೆಯ ರಾಷ್ಟ್ರ ಪಾಕಿಸ್ತಾನದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಮ್ಮೆ ಅವಲೋಕಿಸಿದರೆ ಭಾರತದ ಸಂವಿಧಾನದ ಮೂಲತತ್ವಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಪಾಕಿಸ್ತಾನದಲ್ಲೂ ಸಂಸದೀಯ ವ್ಯವಸ್ಥೆ ಮತ್ತು ದ್ವಿಸದನಗಳ ಶಾಸಕಾಂಗ ವ್ಯವಸ್ಥೆ ಇದ್ದರೂ ಅಲ್ಲಿನ ಸೇನಾಧಿಕಾರಿಗಳಾಗಿದ್ದ ಅಯೂಬ್ ಖಾನ್, ಯಾಹ್ಯಾ ಖಾನ್, ಜಿಯಾ-ಉಲ್-ಹಕ್, ಪರ್ವೇಜ್ ಮುಷರಫ್ ಮೊದಲಾದವರು ಚುನಾಯಿತವಾದ ಪ್ರಜಾಪ್ರಭುತ್ವ ಸರ್ಕಾರವನ್ನು ಕಿತ್ತೆಸೆದು ದೇಶದ ಆಡಳಿತ ನಡೆಸಿದ್ದಾರೆ. ಸೇನಾ ಹಸ್ತಕ್ಷೇಪದಂತಹ ಒಂದೇ ಒಂದು ಉದಾಹರಣೆ ಭಾರತದಲ್ಲಿ ಕಾಣಲು ಸಾಧ್ಯವಿಲ್ಲ. ನಮ್ಮ ಸಂವಿಧಾನದ ರೀತ್ಯ ಅದು ಎಂದಿಗೂ ಅಸಾಧ್ಯ. 1950ನೇ ಜನವರಿ 26ರಂದು ಸಂವಿಧಾನ ಜಾರಿಗೆ ಬಂದ ನಂತರ (1975–77ರ ತುರ್ತು ಪರಿಸ್ಥಿತಿ ಹೊರತುಪಡಿಸಿ) ಇಲ್ಲಿಯವರೆಗೂ ಜನರಿಂದ ಆಯ್ಕೆಯಾದ ಸರ್ಕಾರಗಳೇ ಆಡಳಿತ ನಡೆಸಿವೆ. ಲೋಕಸಭೆಗೆ ಒಂದು ಸಾರ್ವತ್ರಿಕ ಚುನಾವಣೆ ನಡೆದ ನಂತರ ಬಹುಮತ ಪಡೆದ ಪಕ್ಷ ಅಥವಾ ಪಕ್ಷಗಳ ಒಕ್ಕೂಟಗಳಿಗೆ ಸುಲಲಿತವಾಗಿ ಅಧಿಕಾರ ಹಸ್ತಾಂತರವಾಗಿದೆ. ದೇಶದ ಸಂಸದೀಯ ಪ್ರಜಾಪ್ರಭುತ್ವ ಗಟ್ಟಿಯಾಗುತ್ತಲೇ ಸಾಗಿದೆ.

ಸಂವಿಧಾನದ ಮೂಲತತತ್ವಗಳ ಪ್ರಕಾರ ದೇಶದ ಇತರ ಎಲ್ಲ ಕಾನೂನುಗಳಿಗಿಂತ ಸಂವಿಧಾನಕ್ಕೇ ಪರಮಾಧಿಕಾರ ಇದೆ. ದೇಶದ ಸಾರ್ವಭೌಮತೆಗೆ ಧಕ್ಕೆಯಾಗುವ ನಡವಳಿಕೆಗಳನ್ನು ಆಳುವ ಸರ್ಕಾರಗಳು, ಪ್ರಜೆಗಳು ಪ್ರದರ್ಶಿಸುವುದು ನಿಷಿದ್ಧ. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವೇ ಜಾರಿಗೆ ತಂದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸೇನೆಯಾಗಲಿ, ಸರ್ವಾಧಿಕಾರಿಗಳಾಗಲಿ ಬುಡಮೇಲು ಮಾಡಲು ಸಾಧ್ಯವೇ ಇಲ್ಲ. ಸ್ವತಂತ್ರ ಚುನಾವಣಾ ಆಯೋಗವು ಕಾಲಕಾಲಕ್ಕೆ ನಡೆಸುವ ಲೋಕಸಭಾ ಚುನಾವಣೆಗಳಲ್ಲಿ ಬಹುಮತ ಪಡೆದ ಪಕ್ಷ ಅಥವಾ ಪಕ್ಷಗಳ ಒಕ್ಕೂಟ ಅಧಿಕಾರಕ್ಕೆ ಬರುತ್ತವೆ. ಬಹುಮತ ಪಡೆದ ಪಕ್ಷಗಳ ಸಂಸದೀಯ ನಾಯಕರು ಪ್ರಧಾನಿಯಾಗಿ ಅಧಿಕಾರದ ಚಲಾಯಿಸುತ್ತಾರೆ. ಬಹುಮತ ಕಳೆದುಕೊಂಡ ಕ್ಷಣವೇ ಸರ್ಕಾರ ಪತನವಾಗುತ್ತದೆ. ಈ ಪ್ರಕ್ರಿಯೆ ಏಳು ದಶಕಗಳಿಂದ ಅತ್ಯಂತ ಸುಲಲಿತವಾಗಿ ಸಾಗುತ್ತಾ ಬಂದಿದೆ.

ಅಮೆರಿಕದಂತೆ ಸ್ವತಂತ್ರ್ಯ ರಾಜ್ಯಗಳ ಸಂಯೋಜನೆಯ ಒಕ್ಕೂಟ ವ್ಯವಸ್ಥೆ ಭಾರತದಲ್ಲಿ ಇಲ್ಲ. ಆದರೂ ಭಾಷೆ, ಆಡಳಿತ, ಸಮಾನ ಹಿತಾಸಕ್ತಿ ಪ್ರಾಂತ್ಯಗಳ ಆಧಾರದಲ್ಲಿ ರೂಪುಗೊಂಡ ರಾಜ್ಯಗಳನ್ನು ಒಳಗೊಂಡ ಪ್ರಬಲ ಒಕ್ಕೂಟ ವ್ಯವಸ್ಥೆಗೆ ಸಂವಿಧಾನ ಅವಕಾಶ ಮಾಡಿಕೊಟ್ಟಿದೆ. ರಾಷ್ಟ್ರದ ಸಾರ್ವಭೌಮತೆ ಕಾಪಾಡುವ ಪ್ರಬಲ ಕೇಂದ್ರ ಸರ್ಕಾರ, ಸ್ಥಳೀಯ ಆಡಳಿತದ ಸ್ವಾತಂತ್ರ್ಯವನ್ನು ಹೊಂದಿರುವ ರಾಜ್ಯ ಸರ್ಕಾರಗಳ ಮಧ್ಯೆ ವ್ಯವಸ್ಥಿತವಾಗಿ ಅಧಿಕಾರ ಹಂಚಿಕೆಯ ಸೂತ್ರ ಹೆಣೆಯಲಾಗಿದೆ. ಅದಕ್ಕಾಗಿ ಕೇಂದ್ರ, ರಾಜ್ಯಕ್ಕೆ ಪ್ರತ್ಯೇಕ ಪಟ್ಟಿ, ಎರಡೂ ಸೇರಿ ಸಮವರ್ತಿ ಪಟ್ಟಿ ಅಳವಡಿಸಲಾಗಿದೆ. ಸಮವರ್ತಿ ಪಟ್ಟಿಯ ವಿಷಯಗಳಲ್ಲಿ ಕಾನೂನು ಮಾಡುವ ಅಂತಿಮ ಅಧಿಕಾರವನ್ನು ಕೇಂದ್ರಕ್ಕೇ ನೀಡಲಾಗಿದೆ.

ಬಹುಭಾಷೆ, ಧರ್ಮ, ಸಂಸ್ಕೃತಿ, ಆಚರಣೆಗಳ ದೇಶದಲ್ಲಿ ಏಕತೆ, ಸಮಾನತೆ, ಜಾತ್ಯತೀತ ಪರಿಕಲ್ಪನೆಗಳಿಗೆ ಒತ್ತು ನೀಡಲಾಗಿದೆ. ಅಧಿಕಾರ ಚಲಾಯಿಸುವಾಗ ಕಲ್ಯಾಣ ರಾಜ್ಯದ ಪರಿಕಲ್ಪನೆ ಸಾಕಾರಗೊಳಿಸಲು 'ರಾಜನೀತಿ ನಿರ್ದೇಶಕ ತತ್ವ'ಗಳನ್ನು ಅಳವಡಿಸಲಾಗಿದೆ. ಪ್ರಜೆಗಳ ಹಕ್ಕುಗಳ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಆರು ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಅದೇ ರೀತಿ ಪ್ರಜೆಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಪಟ್ಟಿ ಮಾಡಲಾಗಿದೆ. ಧರ್ಮ ನಿರಪೇಕ್ಷತೆಯೂ ಸಂವಿಧಾನದ ಮೂಲ ಆಶಯ.

ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗದ ವ್ಯಾಪ್ತಿ, ಸ್ವರೂಪ, ಅಧಿಕಾರವನ್ನು ನಿರ್ದಿಷ್ಟವಾಗಿ ನಿಗದಿ ಮಾಡಲಾಗಿದೆ. ಪರಸ್ಪರ ಸಂಘರ್ಷಕ್ಕೆ ಅವಕಾಶ ಇಲ್ಲದಂತೆ ಸೌಹಾರ್ದ, ಸುಲಲಿತ ಕಾರ್ಯನಿರ್ವಹಣೆಯ ಮಿತಿ–ವ್ಯಾಪ್ತಿಗಳನ್ನು ಸ್ಪಷ್ಟಪಡಿಸಲಾಗಿದೆ. ಸಾಂವಿಧಾನಿಕ ಸಂಸ್ಥೆ, ಹುದ್ದೆಗಳನ್ನು ರದ್ದು ಮಾಡಲು ಸಾಧ್ಯವಾಗದಂತೆ ತಡೆಯಲಾಗಿದೆ. ಅದೇ ನಮ್ಮ ಸಂವಿಧಾನದ ಮೂಲತತ್ವಗಳ ವೈಶಿಷ್ಟ್ಯ ಮತ್ತು ಸಾಮರ್ಥ್ಯ. ❖

### ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

### ಪ್ರಮುಖ ಮೂಲತತ್ವಗಳು

- ಸಂವಿಧಾನಕ್ಕೆ ಪರಮಾಧಿಕಾರ
- ಭಾರತದ ಸಾರ್ವಭೌಮತ್ವ
- ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ
- ಒಕ್ಕೂಟದ ಸ್ವರೂಪ, ಪ್ರಬಲ ಕೇಂದ್ರ
- ದೇಶದ ಐಕ್ಯತೆ ಮತ್ತು ಸಮಗ್ರತೆ
- ಧರ್ಮನಿರಪೇಕ್ಷತೆ, ಸಮಾಜವಾದ
- ಕಲ್ಯಾಣ ರಾಜ್ಯದ ಪರಿಕಲ್ಪನೆ
- ಸಾಮಾಜಿಕ ನ್ಯಾಯದ ಆದರ್ಶ
- ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ
- ನ್ಯಾಯಿಕ ಪುನರ್‌ಪರಿಶೀಲನೆ
- ಕಾನೂನಿನ ಮುಂದೆ ಸಮಾನತೆ
- ವ್ಯಕ್ತಿಯ ಘನತೆ, ಸ್ವಾತಂತ್ರ್ಯ
- ಕಾಲಬದ್ಧ ಚುನಾವಣಾ ವ್ಯವಸ್ಥೆ

### ತಿದ್ದುಪಡಿ–ಬದಲಾವಣೆ

ಕಾಲ, ಅಗತ್ಯಕ್ಕೆ ಅನುಗುಣವಾಗಿ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿಗಳನ್ನು ಮಾಡುವ, ಕೆಲ ಅಂಶಗಳನ್ನು ಬದಲಿಸುವ–ಸೇರಿಸುವ ಅಧಿಕಾರವನ್ನು ಸಂಸತ್ ಹೊಂದಿದೆ.

ಭಾರತೀಯ ಸಂವಿಧಾನದ 368ನೇ ವಿಧಿಯ ಅನ್ವಯ ತಿದ್ದುಪಡಿಗಳಿಗೆ ಅವಕಾಶವಿದೆ. ಸಂಸತ್ತಿನ ಉಭಯ ಸದನಗಳು ಸರಳ ಬಹುಮತದಿಂದ ತಿದ್ದುಪಡಿ ಮಾಡಬಹುದು. ಹೆಚ್ಚಿನ ತಿದ್ದುಪಡಿಗಳಿಗೆ ವಿಶೇಷ ಬಹುಮತದ ಅಗತ್ಯವಿದೆ. ಸದನದ ಕನಿಷ್ಠ ಮೂರನೇ ಎರಡರಷ್ಟು ಸದಸ್ಯರು ಹಾಜರಿದ್ದು ಮತ ಚಲಾಯಿಸಬೇಕು. ಒಕ್ಕೂಟ ವ್ಯವಸ್ಥೆಯ ಕೆಲ ತಿದ್ದುಪಡಿಗಳಿಗೆ ಸಂಸತ್‌ನ ಮೂರನೇ ಎರಡರಷ್ಟು ಬಹುಮತದ ಜತೆಗೆ, ರಾಜ್ಯ ಶಾಸಕಾಂಗಗಳ ಅನುಮೋದನೆ ಅಗತ್ಯ.

ಸಂವಿಧಾನದ ಬದಲಾವಣೆ ಎಂದರೆ 'ಮೂಲ ತತ್ವಗಳ' ಬದಲಾವಣೆ. ಅಂತಹ ಅಧಿಕಾರ ಸಂಸತ್‌ಗೂ ಇಲ್ಲ. ಹಾಗಾಗಿ, ತಿದ್ದುಪಡಿ ಹಾಗೂ ಬದಲಾವಣೆ ಎನ್ನುವುದು ಎರಡು ಭಿನ್ನ ಪರಿಕಲ್ಪನೆಗಳು.

### 'ಸುಪ್ರೀಂ' ವ್ಯಾಖ್ಯಾನ

ಸಂವಿಧಾನದ ಯಾವುದೇ ಭಾಗ, ಅಧ್ಯಾಯ ಅಥವಾ ವಿಧಿಗಳಲ್ಲಿ ಅದರ ಮೂಲ ತತ್ವಗಳು ಯಾವುವು ಎಂಬ ವಿವರಣೆ ಇಲ್ಲ. ಸುಪ್ರೀಂಕೋರ್ಟ್ 1973ರಲ್ಲಿ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲತತ್ವಗಳನ್ನು ಹೆಕ್ಕಿ ಪಟ್ಟಿ ಮಾಡಿದೆ. ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತ, ಸಾಮಾಜಿಕ ನ್ಯಾಯ ಸೇರಿದಂತೆ ಯಾವುದೇ ಮೂಲ ತತ್ವಗಳನ್ನು ಬದಲಿಸುವುದು, ತಿದ್ದುಪಡಿ ಮಾಡುವಂತಿಲ್ಲ ಎಂದೂ ಸ್ಪಷ್ಟಪಡಿಸಿದೆ.

2025ರಲ್ಲಿ ಜಗತ್ತಿನ ಹಲವೆಡೆ ಯುದ್ಧಗಳು ಸದ್ದು ಮಾಡಿವೆ. ಕೆಲವು ದೇಶಗಳ ನಡುವೆ ಈ ಹಿಂದೆಯೇ ಆರಂಭವಾಗಿದ್ದ ಯುದ್ಧ ಈ ವರ್ಷವೂ ಮುಂದುವರಿದರೆ, ಮತ್ತೆ ಹಲವು ದೇಶಗಳ ನಡುವೆ ಹೊಸದಾಗಿ ಸಂಘರ್ಷಗಳೂ ನಡೆದಿವೆ. ಹೀಗಾಗಿ, ಸಾವು–ನೋವಿನ ಜೊತೆಗೆ ಲಕ್ಷಾಂತರ ಜನರು ನಿರಾಶ್ರಿತಗೊಂಡು ಇನ್ನಿಲ್ಲದ ಸಂಕಷ್ಟ ಎದುರಿಸಿದರು. ಭಾರತ ಕೂಡ ಈ ವರ್ಷ ಸೇನಾ ಸಂಘರ್ಷಕ್ಕೆ ಸಾಕ್ಷಿಯಾಯಿತು. ಪಾಕಿಸ್ತಾನದೊಂದಿಗೆ ದೊಡ್ಡ ಪ್ರಮಾಣದಲ್ಲಿಯೇ ನಾಲ್ಕು ದಿನಗಳವರೆಗೆ ಶಸ್ತ್ರಾಸ್ತ್ರ ಸಂಘರ್ಷ ನಡೆಸಿತು

# ಜಗದಗಲ ಯುದ್ಧಗಳದ್ದೇ ಸದ್ದು



• ಭೀಮಸೇನ ಚಳಗೇರಿ, ನವೀನ್ ಕುಮಾರ್ ಎನ್.

## ಇಸ್ರೇಲ್ ಹಮಾಸ್ ಕದನ

2023ರ ಅಕ್ಟೋಬರ್ 7ರಂದು ಇಸ್ರೇಲ್‌ನ ರೀಮ್ ನಗರದಲ್ಲಿ ಸೂಪರ್ ನೋವಾ ಸಂಗೀತ ಉತ್ಸವ ನಡೆಯುತ್ತಿದ್ದ ವೇಳೆ ಹಮಾಸ್ ಬಂಡುಕೋರರು ಏಕಾಏಕಿ ದಾಳಿ ನಡೆಸಿದ್ದರು. ಅಂದಿನಿಂದ ಆರಂಭಗೊಂಡ ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಕದನ ಈ ವರ್ಷಾರಂಭದಲ್ಲಿ ಇನ್ನಷ್ಟು ತೀವ್ರಗೊಂಡಿತಲ್ಲದೆ ಯುದ್ಧ ಬೇರೆ ರಾಷ್ಟ್ರಗಳಿಗೂ ವಿಸ್ತರಿಸಿತು. ಇರಾನ್–ಇಸ್ರೇಲ್ ನಡುವೆ 12 ದಿನಗಳ ಭಾರಿ ಯುದ್ಧವೇ ಏರ್ಪಟ್ಟಿತು. ಲೆಬನಾನ್, ಸಿರಿಯಾದಲ್ಲಿನ ಬಂಡುಕೋರ ಸಂಘಟನೆಗಳನ್ನು ಗುರಿಯಾಗಿಸಿಕೊಂಡೂ ಇಸ್ರೇಲ್ ದಾಳಿ ನಡೆಸಿತ್ತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ನವೆಂಬರ್‌ನಲ್ಲಿ ಕದನ ವಿರಾಮ ಮತ್ತು ಶಾಂತಿ ಒಪ್ಪಂದಕ್ಕೆ ಇಸ್ರೇಲ್ ನಾಯಕರು ಹಾಗೂ ಹಮಾಸ್ ಬಂಡಕೋರರು ಸಮ್ಮತಿಸಿದ್ದಾರೆ. ಸಂಘರ್ಷವು ತಾತ್ಕಾಲಿಕವಾಗಿ ಶಮನವಾಗುವ ಹೊತ್ತಿಗೆ ಇಡೀ ಗಾಜಾ ಪಟ್ಟಿ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಮುಚ್ಚಿ ಹೋಗಿತ್ತು. 70 ಸಾವಿರಕ್ಕೂ ಹೆಚ್ಚು ಜನರು ಪ್ರಾಣಕಳೆದುಕೊಂಡಿದ್ದರು. ಇವರಲ್ಲಿ 18 ಸಾವಿರದಷ್ಟು ಮಕ್ಕಳು. 21 ಲಕ್ಷ ಜನಸಂಖ್ಯೆ ಇರುವ ಗಾಜಾದಲ್ಲಿ 19 ಲಕ್ಷ ಜನರು ನಿರಾಶ್ರಿತರಾಗಿದ್ದರು.

## ಇಸ್ರೇಲ್ – ಇರಾನ್ ಸಂಘರ್ಷ

ಈ ವರ್ಷ ಜಾಗತಿಕವಾಗಿ ಗಮನಸೆಳೆದ ಮತ್ತೊಂದು ಯುದ್ಧವೆಂದರೆ ಜೂನ್ ತಿಂಗಳಲ್ಲಿ ವೈರಿರಾಷ್ಟ್ರಗಳಾದ ಇಸ್ರೇಲ್ ಮತ್ತು ಇರಾನ್ ನಡುವೆ 12 ದಿನಗಳ ನಡೆದಿದ್ದ ಸೇನಾ ಸಂಘರ್ಷ. ಎರಡೂ ರಾಷ್ಟ್ರಗಳು ಕ್ಷಿಪಣಿಗಳು, ಡ್ರೋನ್‌ಗಳ ಮೂಲಕ ಪರಸ್ಪರ ದಾಳಿ ನಡೆಸಿ ಇಡೀ ಜಗತ್ತನ್ನೇ ಆತಂಕಕ್ಕೆ ಕೆಡವಿದ್ದವು. ಜೂನ್ 12ರಂದು ಇರಾನಿನ ಪರಮಾಣು ವಿಜ್ಞಾನಿಗಳು, ಸೇನಾಧಿಕಾರಿಗಳು ಹಾಗೂ ರಾಜಕಾರಣಿಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ ದಿಢೀರ್ ದಾಳಿಯು ಇರಾನ್ ಆಡಳಿತವನ್ನು ಕೆರಳಿಸಿತು. ಪ್ರತಿಯಾಗಿ ಅದು ಕ್ಷಿಪಣಿಗಳು ಹಾಗೂ ಡ್ರೋನ್‌ಗಳ ಮೂಲಕ ಇಸ್ರೇಲ್‌ನ ಮೇಲೆ ಬಾಂಬ್‌ಗಳ ಸುರಿಮಳೆಗೆರೆಯಿತು.

ಎರಡೂ ರಾಷ್ಟ್ರಗಳು ಸಂಘರ್ಷವನ್ನು ಕೊನೆಗಾಣಿಸಬೇಕು ಎಂದು ಹೇಳುತ್ತಲೇ ಬಂದಿದ್ದ ಅಮೆರಿಕವು ಜೂನ್ 22ರಂದು ಇರಾನ್‌ನ ಫೋರ್ಡೊ, ನಟಾನ್ಜ್ ಹಾಗೂ ಎಸ್‌ಫಹಾನ್‌ನಲ್ಲಿರುವ ಭೂಗತ ಪರಮಾಣು ಘಟಕಗಳನ್ನು ಗುರಿಯಾಗಿಸಿಕೊಂಡು ಬಿ2 ಬಾಂಬರ್ ವಿಮಾನಗಳ ಮೂಲಕ ದಾಳಿ ನಡೆಸಿತು. ಇದಕ್ಕೆ ಪ್ರತಿಯಾಗಿ ಜೂನ್ 23ರಂದು ಕತಾರ್‌ನ ಅಲ್ ಉದ್ಯೆದ್‌ನಲ್ಲಿರುವ ಅಮೆರಿಕದ ವಾಯು ನೆಲೆಯ ಮೇಲೆ ಕ್ಷಿಪಣಿ ದಾಳಿ ನಡೆಸಿತು. ಅಮೆರಿಕದ ನಿರಂತರದ ಒತ್ತಡದ ನಡುವೆ ಮರುದಿನ ಇಸ್ರೇಲ್, ಇರಾನ್ ಕದನವಿರಾಮ ಘೋಷಿಸಿದವು.



## ಮಂಡಿಯೂರಿದ ಪಾಕಿಸ್ತಾನ

ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಗೆ ಸೇರಿದ ಭಯೋತ್ಪಾದಕರು ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಏಪ್ರಿಲ್ 22ರಂದು 26 ಪ್ರವಾಸಿಗರನ್ನು ಹತ್ಯೆ ಮಾಡಿದ ಪೈಶಾಚಿಕ ಕೃತ್ಯಕ್ಕೆ ಪ್ರತೀಕಾರವಾಗಿ ಮೇ 7ರ ತಡರಾತ್ರಿ ಭಾರತೀಯ ಸೇನಾ ಪಡೆಗಳು ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ (ಪಿಒಕೆ) 9 ಉಗ್ರರ ನೆಲೆಗಳನ್ನು ಗುರಿಯಾಗಿಸಿ ನಡೆಸಿದ 'ಆಪರೇಷನ್ ಸಿಂಧೂರ' ಭಾರತ ಮತ್ತು ಪಾಕಿಸ್ತಾನದ ನಡುವೆ ಸೇನಾ ಸಂಘರ್ಷವನ್ನು ಹುಟ್ಟುಹಾಕಿತು. ನಾಲ್ಕು ದಿನಗಳ ಸಂಘರ್ಷದಲ್ಲಿ ಯುದ್ಧವಿಮಾನಗಳು, ಕ್ಷಿಪಣಿಗಳು, ಡ್ರೋನ್‌ಗಳು ವ್ಯಾಪಕವಾಗಿ ಬಳಕೆಯಾದವು. ಭಾರತ ಇದೇ ಮೊದಲ ಬಾರಿಗೆ ಬ್ರಹ್ಮೋಸ್ ಕ್ಷಿಪಣಿಯನ್ನು ಪ್ರಯೋಗಿಸಿ ಪಾಕಿಸ್ತಾನದ ಬಲವನ್ನೇ ಉಡುಗಿಸಿತು.

ಭಾರತದ ಮೇಲೆ ಚೀನಾ, ಟರ್ಕಿ ನಿರ್ಮಿತ ಕ್ಷಿಪಣಿಗಳು, ಡ್ರೋನ್‌ಗಳ ಮೂಲಕ ಬಾಂಬ್‌ಗಳ ಸುರಿಮಳೆಗೈದ ಪಾಕಿಸ್ತಾನದ ದಾಳಿಯನ್ನು ಭಾರತವು ಯಶಸ್ವಿಯಾಗಿ ಹಿಮ್ಮೆಟ್ಟಿಸಿತು. ಪಾಕ್ ದಾಳಿಯ ಸದ್ದಡಗಿಸಿದ್ದು ನಮ್ಮ ಸಮಗ್ರ ವಾಯು ರಕ್ಷಣಾ ವ್ಯವಸ್ಥೆ (ಇಂಟೆಗ್ರೇಟೆಡ್ ಏರ್ ಡಿಫೆನ್ಸ್ ಸಿಸ್ಟಮ್–ಐಎಡಿಡಬ್ಲ್ಯುಎಸ್). ಸ್ವದೇಶಿ ನಿರ್ಮಿತ ಆಕಾಶ್ ಕ್ಷಿಪಣಿ ವ್ಯವಸ್ಥೆ, ರಷ್ಯಾ ನಿರ್ಮಿತ ಎಸ್–400 ಕ್ಷಿಪಣಿ ವ್ಯವಸ್ಥೆ, ಇದರೊಂದಿಗೆ ದೇಶೀಯ ಆಕಾಶ್‌ತೀರ ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ ಹಾಗೂ ಸಮಗ್ರ ವಾಯು ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆಯು ರಕ್ಷಾ ಕವಚದಂತೆ ಕಾರ್ಯನಿರ್ವಹಿಸಿದ್ದವು. ಹೀಗಾಗಿ ನಮ್ಮಲ್ಲಿ ಹೆಚ್ಚು ಸಾವು ನೋವು ಸಂಭವಿಸಲಿಲ್ಲ.




ಭಾರತದ ಸೇನಾ ಪಡೆಗಳ ದಾಳಿಯನ್ನು ತಡೆಯಲು ಪಾಕಿಸ್ತಾನ ಸಂಪೂರ್ಣವಾಗಿ ವಿಫಲವಾಯಿತು. ಅದರ ಹಲವು ವಾಯುನೆಲೆಗಳು, ಸೇನಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಭಾರತ ನಡೆಸಿದ ದಾಳಿಗಳು ನಿಖರವಾಗಿ ಗುರಿ ತಲುಪಿ ಪಾಕಿಸ್ತಾನಕ್ಕೆ ಭಾರಿ ಪ್ರಮಾಣದ ಹಾನಿ ಉಂಟುಮಾಡಿದವು. ಮೇ 10ರಂದು ದಿಢೀರ್ ಕದನ ವಿರಾಮ ಘೋಷಣೆಯಾಯಿತು. ಪಾಕಿಸ್ತಾನವು ಕರೆ ಮಾಡಿ ಕದನ ವಿರಾಮದ ಪ್ರಸ್ತಾಪ ಮಾಡಿದ್ದರಿಂದ ತಾನು ಇದಕ್ಕೆ ಒಪ್ಪಿಕೊಂಡಿದ್ದಾಗಿ ಭಾರತ ಹೇಳಿತು.

ಈ ಯುದ್ಧವನ್ನು ತಾನು ನಿಲ್ಲಿಸಿದ್ದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಹಲವು ಬಾರಿ ಹೇಳಿಕೊಂಡರು. ಭಾರತ ಪ್ರತಿಬಾರಿಯೂ ಇದನ್ನು ತಿರಸ್ಕರಿಸಿತು. ಆಪರೇಷನ್ ಸಿಂಧೂರ ಮತ್ತು ನಂತರದ ಸೇನಾ ಸಂಘರ್ಷವು ಶತ್ರುವಿನ ಗುರಿಯೆಡೆಗೆ ನಿಖರವಾಗಿ ದಾಳಿ ನಡೆಸುವ ಭಾರತದ ಸಾಮರ್ಥ್ಯವನ್ನು ಜಗತ್ತಿನ ಮುಂದೆ ತೆರೆದಿಟ್ಟಿತು.



## ಡ್ರೋನ್ ಬಳಕೆ ವ್ಯಾಪಕ

ಸೇನಾ ಸಮರದಲ್ಲಿ ಈ ವರ್ಷ ಡ್ರೋನ್‌ಗಳು ವ್ಯಾಪಕವಾಗಿ ಬಳಕೆಯಾದವು. ಮಾನವರಹಿತ ಡ್ರೋನ್‌ಗಳನ್ನೇ ಬಾಂಬ್‌ಗಳ ರೀತಿಯಲ್ಲಿ ಹಲವು ದೇಶಗಳು ಬಳಸಿದವು. ತಂತ್ರಜ್ಞಾನ ಆಧಾರಿತ, ಸ್ವಯಂ ಆಗಿ ಕಾರ್ಯನಿರ್ವಹಿಸಬಲ್ಲ ತಲುಪಬಲ್ಲ ಹಾಗೂ ನಿಗದಿತ ಗುರಿಗೆ ನಿಖರವಾಗಿ ದಾಳಿ ನಡೆಸಬಲ್ಲ ಡ್ರೋನ್ ಮತ್ತು ಕ್ಷಿಪಣಿಗಳ ಅಭಿವೃದ್ಧಿಯತ್ತ ಎಲ್ಲ ರಾಷ್ಟ್ರಗಳು ಗಮನಹರಿಸುವಂತೆ ಆಧುನಿಕ ರಣಾಂಗಣಗಳು ಮಾಡಿವೆ.



## ರಷ್ಯಾ–ಉಕ್ರೇನ್ ಸಮರ

2022ರ ಫೆಬ್ರುವರಿ 24ರಂದು ರಷ್ಯಾವು ಯುರೋಪಿನ ಪುಟ್ಟ ರಾಷ್ಟ್ರ ಉಕ್ರೇನ್ ಮೇಲೆ ದಾಳಿ ನಡೆಸುವುದರೊಂದಿಗೆ ಆರಂಭಗೊಂಡ ಎರಡೂ ರಾಷ್ಟ್ರಗಳ ಯುದ್ಧ ಇನ್ನೂ ನಿಂತಿಲ್ಲ. ಈ ವರ್ಷ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದಲ್ಲಿ ಯುದ್ಧವನ್ನು ಕೊನೆಗಾಣಿಸುವ ರಾಜತಾಂತ್ರಿಕ ಪ್ರಯತ್ನಗಳು ಆರಂಭಗೊಂಡವು. ಆದರೆ, ಅದಿನ್ನೂ ಫಲ ನೀಡಿಲ್ಲ. ಯುದ್ಧವನ್ನು ನಿಲ್ಲಿಸುವ ಒತ್ತಡ ತಂತ್ರವಾಗಿ ಟ್ರಂಪ್ ಅವರು ಉಕ್ರೇನ್‌ಗೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದಿಲ್ಲ ಎಂಬ ಘೋಷಣೆ ಮಾಡಿದರು. ಹಾಗಿದ್ದರೂ ಯುದ್ಧ ನಿಲ್ಲಲಿಲ್ಲ. 2025ರ ಅಂತ್ಯದ ಹೊತ್ತಿಗೆ ಈ ಯುದ್ಧವು ಅಪಾರ ಪ್ರಮಾಣದ ಆಸ್ತಿ ಹಾನಿಯೊಂದಿಗೆ 15 ಲಕ್ಷಕ್ಕೂ ಹೆಚ್ಚು ಜನರ ಪ್ರಾಣಕ್ಕೆ ಕುತ್ತು ತಂದಿದೆ.

## ಇತರ ಸಂಘರ್ಷಗಳು


- ಆಗ್ನೇಯ ಏಷ್ಯಾದ ರಾಷ್ಟ್ರಗಳಾದ ಥಾಯ್ಲೆಂಡ್ ಮತ್ತು ಕಾಂಬೋಡಿಯಾ ಗಡಿ ವಿಚಾರವಾಗಿ ಈ ವರ್ಷ ಎರಡು ಬಾರಿ ಸೇನಾ ಸಂಘರ್ಷ ನಡೆಸಿವೆ. ಮೇ 28ರಂದು 'ಎಮರಾಲ್ಡ್ ಟ್ರಯಾಂಗಲ್' ಎಂಬ ಪ್ರದೇಶದಲ್ಲಿ ಎರಡೂ ಸೇನೆಗಳ ನಡುವೆ ಸಂಘರ್ಷ ನಡೆದಿತ್ತು. ಆ ಪ್ರದೇಶದ ಒಡೆತನದ ಬಗ್ಗೆ ಎರಡೂ ರಾಷ್ಟ್ರಗಳು ಹಕ್ಕು ಸಾಧಿಸುತ್ತಿವೆ. ಜುಲೈನಲ್ಲಿ ಪುನಃ ಐದು ದಿನ ತೀವ್ರ ಸಂಘರ್ಷ ನಡೆದಿತ್ತು. ಚೀನಾ, ಅಮೆರಿಕ, ಮಲೇಷ್ಯಾದ ಪ್ರಯತ್ನದಿಂದಾಗಿ ನಂತರ ಕದನ ವಿರಾಮ ಘೋಷಿಸಲಾಗಿತ್ತು. ಡಿಸೆಂಬರ್ 7ರಂದು ಮತ್ತೆ ಉಭಯ ದೇಶಗಳ ನಡುವೆ ಸಂಘರ್ಷ ಆರಂಭವಾಗಿದೆ. ಈ ವರ್ಷ 80ಕ್ಕೂ ಹೆಚ್ಚು ಜನರು ಮೃತಪಟ್ಟು, ಎಂಟು ಲಕ್ಷ ಜನರು ನಿರಾಶ್ರಿತರಾಗಿದ್ದಾರೆ
- ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಪಡೆಗಳ ನಡುವೆ ಅಕ್ಟೋಬರ್ ಮೊದಲ ವಾರ ಭಾರಿ ಸಂಘರ್ಷ ನಡೆದಿತ್ತು. ಅಫ್ಗನ್‌ನ 19 ಗಡಿ ಭದ್ರತಾ ಠಾಣೆಗಳು ಮತ್ತು 'ಭಯೋತ್ಪಾದಕರ ಅಡಗುತಾಣ'ಗಳನ್ನು ವಶಪಡಿಸಿಕೊಂಡಿದ್ದಾಗಿ ಪಾಕ್ ಸೇನೆ ಹೇಳಿತ್ತು. ತಾನು ನಡೆಸಿದ ಪ್ರತಿದಾಳಿಯಲ್ಲಿ ಪಾಕಿಸ್ತಾನದ 58 ಸೈನಿಕರು ಮೃತಪಟ್ಟಿದ್ದು, 30 ಮಂದಿ ಗಾಯಗೊಂಡಿದ್ದಾರೆ ಎಂದು ಅಫ್ಗಾನಿಸ್ತಾನ ಹೇಳಿಕೊಂಡಿತ್ತು.
- ಸುಡಾನ್‌ನಲ್ಲಿ 2023ರಿಂದ ಸೇನೆಯ ವಿರುದ್ಧ ಅರೆಸೇನಾ ಕ್ಷಿಪ್ರ ಕಾರ್ಯಪಡೆ (ಆರ್‌ಎಸ್‌ಎಫ್) ಸಶಸ್ತ್ರ ಹೋರಾಟ ನಡೆಸುತ್ತಿದೆ. ಈ ವರ್ಷ ಡಿಸೆಂಬರ್ ಮೊದಲ ವಾರದಲ್ಲಿ ಸುಡಾನ್‌ನ ಕೊರ್ಡೊಫಾನ್‌ನ ಶಿಶುವಿಹಾರ ಮತ್ತು ಇತರ ಸ್ಥಳಗಳ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ 63 ಮಕ್ಕಳು ಸೇರಿದಂತೆ 114 ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ. ಅಕ್ಟೋಬರ್‌ನಲ್ಲಿ ನಿರಾಶ್ರಿತರ ಶಿಬಿರವೊಂದರ ಮೇಲೆ ನಡೆದ ದಾಳಿಯಲ್ಲಿ 60 ಮಂದಿ ಮೃತಪಟ್ಟಿದ್ದರು.

**❖ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಳಗೊಂಡ ಕರ್ನಾಟಕ ಉದಯವಾಗಿ ಏಳು ದಶಕಗಳು ಕಳೆದರೂ ರಾಜ್ಯದಲ್ಲಿ ವಾಸಿಸುವ 37.48 ಲಕ್ಷ ಕುಟುಂಬಗಳಿಗೆ ಸ್ವಂತ ಸೂರು ಇಲ್ಲ.**

**ಸಂದರ್ಭ: ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದ ಎಲ್ಲ ಸರ್ಕಾರಗಳೂ ಬಡತನ ನಿರ್ಮೂಲನೆಗಾಗಿ ರೂಪಿಸಿದ ಕಾರ್ಯಕ್ರಮಗಳಲ್ಲಿ ವಸತಿ ಯೋಜನೆಗಳಿಗೆ ಆದ್ಯತೆ ನೀಡಿವೆ. ಆದರೂ ವಸತಿಹೀನರ ಸಂಖ್ಯೆ ಬೆಳೆಯುತ್ತಲೇ ಇದೆ.**

- ವಸತಿರಹಿತರಿಗೆ 'ಸೂರು' ಕಲ್ಪಿಸಲು ಬಸವ ವಸತಿ ಯೋಜನೆ, ಡಾ.ಬಿ.ಆರ್.ಅಂಬೇಡ್ಕರ್ ನಗರ ಮತ್ತು ಗ್ರಾಮೀಣ ವಸತಿ ಯೋಜನೆ, ದೇವರಾಜ ಅರಸು ವಸತಿ ಯೋಜನೆ, ವಾಜಪೇಯಿ ನಗರವಸತಿ ರಾಜ್ಯ ಯೋಜನೆಗಳನ್ನು ಸರ್ಕಾರ ರೂಪಿಸಿದೆ.
- ಅತಿವೃಷ್ಟಿ, ನೆರೆಯಿಂದ ಮನೆಗಳನ್ನು ಕಳೆದುಕೊಂಡು ಸಂತ್ರಸ್ತ ರಾಗುವ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರಿಗೆ ಪುನರ್‌ವಸತಿ ಕಲ್ಪಿಸಲು ದೇವರಾಜ ಅರಸು ಅವರ ಹೆಸರಿನಲ್ಲಿ ಪ್ರತ್ಯೇಕ ವಸತಿ ಯೋಜನೆ ಜಾರಿ ಗೊಳಿಸಲಾಗಿದೆ. ಬೆಂಗಳೂರಿನಲ್ಲಿ ವಾಸಿಸುವ ವಸತಿ ರಹಿತರಿಗೆ ಮಹಡಿ ಬಹು ವಸತಿ ಯೋಜನೆ ಅನುಷ್ಠಾನ ಗೊಳಿಸಲಾಗಿದೆ. ಕೇಂದ್ರ ಕೇಂದ್ರ ಸರ್ಕಾರ ಮತ್ತು ನಗರ ಪ್ರದೇಶಗಳ ವಸತಿ ರಹಿತರಿಗಾಗಿಯೇ ಪ್ರತ್ಯೇಕ ಪ್ರಧಾನ ಮಂತ್ರಿ ಅವಾಸ್ ಯೋಜನೆ ರೂಪಿಸಿದೆ.
- ಪಿಎಂ-ಜನಮನ್ ಯೋಜನೆ ಅಡಿಯೂ ಮನೆಗಳನ್ನು ಮಂಜೂರುಮಾಡುತ್ತಿದೆ ಕೇಂದ್ರದ ಸೂಚನೆಯಂತೆ ರಾಜ್ಯ ಸರ್ಕಾರ ನಡೆಸಿದ್ದ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ ವಸತಿ ಇಲ್ಲದ 37.48 ಲಕ್ಷ ಜನರಲ್ಲಿ 17.31 ಲಕ್ಷ ಜನರಿಗೆ ಸ್ವಂತ ನಿವೇಶನವೂ ಇಲ್ಲ. 20.17 ಲಕ್ಷ ಜನರು ಸಾಲ ಮಾಡಿ ಸ್ವಂತ ನಿವೇಶನಗಳನ್ನು ಖರೀದಿಸಿದ್ದರೂ ಸ್ವಂತ ಸೂರು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ.
- ರಾಜ್ಯ ಸರ್ಕಾರ ವಿವಿಧ ವಸತಿ ಯೋಜನೆಗಳ ಅಡಿ 2024-25ನೇ ಸಾಲಿನಲ್ಲಿ 7.38 ಲಕ್ಷ ಮನೆ ಗಳನ್ನು ನಿರ್ಮಾಣ ಮಾಡುವುದಾಗಿ ಘೋಷಿಸಿತ್ತು. 3.27 ಲಕ್ಷ ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ. ಇನ್ನೂ 4.11 ಲಕ್ಷ ಮನೆಗಳ ಅನುಮೋದನೆ ಬಾಕಿ ಇದೆ.
- 2025-26ನೇ ಹಣಕಾಸು ವರ್ಷ ಮುಗಿಯುತ್ತಾ ಬಂದರೂ ಅನುಮೋದನೆ ನೀಡಿದ ಮನೆಗಳಲ್ಲಿ ಪೂರ್ಣ ಗೊಂಡಿರುವುದು 9,839 ಮನೆಗಳು ಮಾತ್ರ. 46,540 ಮನೆಗಳ ನಿರ್ಮಾಣ ಕಾರ್ಯ ಪ್ರಗತಿ-ಯಲ್ಲಿದೆ. 2.70 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಇದುವರೆಗೂ ಆರಂಭವಾಗಿಲ್ಲ.
- ಪ್ರಧಾನಮಂತ್ರಿ ಅವಾಸ್ ಯೋಜನೆಯಲ್ಲಿ 2024-25 ರಲ್ಲಿ ರಾಜ್ಯದಲ್ಲಿ 2.74 ಲಕ್ಷ ಮನೆ ನಿರ್ಮಾಣದ ಗುರಿ ಹೊಂದಲಾಗಿತ್ತು. ಇಲ್ಲಿಯವರೆಗೆ 4,443 ಮನೆಗಳು ಮಾತ್ರ ನಿರ್ಮಾಣವಾಗಿವೆ.
- ಆಶ್ರಯ ಯೋಜನೆಗಳಲ್ಲಿ ಮನೆಗಳ ನಿರ್ಮಾಣ ಕಾರ್ಯಗಳು ನಿರೀಕ್ಷೆಯಂತೆ ಅನುಷ್ಠಾನಗೊಳ್ಳದೇ ಇರಲು ಪ್ರಮುಖ ಕಾರಣ ಸರ್ಕಾರ ನೀಡುವ ಕಡಿಮೆ ವಂತಿಗೆ, ವಂತಿಗೆ ನೀಡುವಲ್ಲಿನ ವಿಳಂಬ.
- ಪ್ರತಿ ಮನೆಗಳ ನಿರ್ಮಾಣಕ್ಕೆ ಸರ್ಕಾರ ₹1.20 ಲಕ್ಷ ನಿಗದಿ ಮಾಡಿದೆ. ಉದ್ಯೋಗ ಖಾತ್ರಿ ಯೋಜನೆ ಯಡಿ ₹20,000 ಭರಿಸಲಾಗುತ್ತದೆ. ಅಲ್ಲಿಗೆ ಒಂದು ಮನೆಯ ನಿರ್ಮಾಣಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ಭರಿಸುವ ವೆಚ್ಚ ₹1.40 ಲಕ್ಷ ಮಾತ್ರ. ಉಳಿದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಿದೆ.
- 'ಕಳೆದ ನಾಲ್ಕು ತಿಂಗಳಿನಿಂದ ಹಣ ಬಿಡುಗಡೆ ಯಾಗಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಕೇಂದ್ರದ ಪಾಲೂ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ' ಎನ್ನುತ್ತಾರೆ ವಸತಿ ಯೋಜನೆ ಹೋರಾಟ ಸಮಿತಿ ಕಾರ್ಯದರ್ಶಿ ನಿರಂಜನ್.
- 'ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ವಿಳಂಬ, ನಿವೇಶನಗಳ ಪಕ್ಕಾ ದಾಖಲೆಗಳ ಕೊರತೆ, ಸಾಲ ಮಂಜೂರಾತಿ ವಿಳಂಬ ಮತ್ತಿತರ ಸಮಸ್ಯೆಗಳಿಂದ ಮನೆಗಳ ನಿರ್ಮಾಣ ಕಾರ್ಯ ನಿರೀಕ್ಷೆಯಂತೆ ನಡೆಯುತ್ತಿಲ್ಲ. ಬಡತನದ ರೇಖೆ ಗಿಂತ ಕೆಳಗಿರುವ ವಸತಿ ರಹಿತ ಕುಟುಂಬಗಳಿಗೆ ಸರ್ಕಾರವೇ ಪೂರ್ಣಮೊತ್ತ ಪಾವತಿಸಿ ಮನೆ ನಿರ್ಮಾಣ ಮಾಡಿಕೊಡಬೇಕು' ಎನ್ನುತ್ತಾರೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಅಧ್ಯಕ್ಷ.

# ಸಾಧನೆಯ ಶಿಖರ ಏರಿದವರು




• ಬಾಲಚಂದ್ರ, ಸಿಂಧು ಕೆ.ಟಿ.

**ಸಾಹಿತ್ಯ,** ಕಲೆ, ವಿಜ್ಞಾನ, ಸಂಶೋಧನೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ, ಕಠಿಣ ಪರಿಶ್ರಮ, ನಿಸ್ವಾರ್ಥ ಸೇವೆ ಮತ್ತು ಸಾಮರ್ಥ್ಯದಿಂದ ಈ ವರ್ಷದ ಸಾಧನೆಯ ಶಿಖರವನ್ನೇರಿದ ಪ್ರಮುಖರು ಇವರು

**ಶುಭಾಂಶು ಶುಕ್ಲಾ:** ಜೂನ್ 25ರಿಂದ ಜುಲೈ 15ರವರೆಗೆ 'ಆಕ್ಸಿಯಂ-4'ರ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ಕಳೆದಿದ್ದ ಶುಭಾಂಶು ಅವರು, ಬಾಹ್ಯಾಕಾಶಕ್ಕೆ ತೆರಳಿದ ಎರಡನೇ, ಐಎಸ್‌ಎಸ್‌ಗೆ ತೆರಳಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು


**ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ:** ಹಿರಿಯ ಕಥೆಗಾರ್ತಿ ಬಾನು ಮುಷ್ತಾಕ್ ಅವರ ಆಯ್ದ ಸಣ್ಣ ಕಥೆಗಳ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್'ಗೆ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಒಲಿದು ಬಂತು. ಕನ್ನಡಕ್ಕೆ ಬಂದ ಮೊದಲ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಇದು. ಕಥಾ ಸಂಕಲನವೊಂದಕ್ಕೆ ಈ ಗೌರವ ಲಭಿಸುತ್ತಿರುವುದು ಕೂಡ ಇದೇ ಮೊದಲು. ಈ ಪ್ರಶಸ್ತಿಗೆ ಭಾಜನರಾದ ಮೊದಲ ಭಾರತೀಯ ಅನುವಾದಕಿ ಎಂಬ ಹಿರಿಮೆಗೆ ಕನ್ನಡದವರೇ ಆದ ದೀಪಾ ಭಾಸ್ತಿ ಪಾತ್ರರಾದರು


ಬಾನು ಮುಷ್ತಾಕ್

ದೀಪಾ ಭಾಸ್ತಿ

**ಡಾ. ಜಯಶ್ರೀ ವೆಂಕಟೇಶನ್:** ಭಾರತೀಯ ಪರಿಸರ ಕಾರ್ಯಕರ್ತೆಯಾದ ಅವರು 'ವೆಟ್‌ಲ್ಯಾಂಡ್ ವೈಸ್ ಯೂಸ್' ವಿಭಾಗದಲ್ಲಿ 2025ರ ವಾರ್ಷಿಕ (ಆರ್ದ್ರಭೂಮಿಗಳ ಸಂರಕ್ಷಣೆಗಾಗಿ) ರಾಮ್ಸರ್ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಎಂಬ ಮನ್ನಣೆ ಗಳಿಸಿದರು

**ಮೋಹನ್‌ಲಾಲ್:** ಮಲಯಾಳ ಚಿತ್ರರಂಗದ ಹಿರಿಯ ನಟ, 400ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಮೋಹನ್‌ಲಾಲ್ ಅವರು ಭಾರತೀಯ ಸಿನಿಮಾ ಕ್ಷೇತ್ರದ ಅತ್ಯುನ್ನತ ಗೌರವ ಎನಿಸಿರುವ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಗೆ ಆಯ್ಕೆಯಾದರು


ಮೋಹನ್‌ಲಾಲ್

**ವರ್ಷಾ ದೇಶಪಾಂಡೆ:** 2025ರ ವಿಶ್ವಸಂಸ್ಥೆಯ ಜನಸಂಖ್ಯಾ ಪ್ರಶಸ್ತಿಯನ್ನು ಭಾರತದ ಮಹಿಳಾ ಹಕ್ಕುಗಳ ಕಾರ್ಯಕರ್ತೆ ಮತ್ತು ವಕೀಲೆ ವರ್ಷಾ ದೇಶಪಾಂಡೆ ಅವರು ಪಡೆದರು. ಲಿಂಗ ಸಮಾನತೆ, ಸಂತಾನೋತ್ಪತ್ತಿ ಹಕ್ಕುಗಳು ಮತ್ತು ಲಿಂಗ ಆಧಾರಿತ ಗರ್ಭಪಾತಗಳನ್ನು ತಡೆಗಟ್ಟುವಲ್ಲಿ ಅವರು ನಡೆಸಿದ ಹೋರಾಟಕ್ಕಾಗಿ ಈ ಪ್ರಶಸ್ತಿ ಒಲಿಯಿತು. ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನದಂದು ನ್ಯೂಯಾರ್ಕ್‌ನಲ್ಲಿ ಪ್ರಶಸ್ತಿ ಪ್ರದಾನ ನಡೆಯಿತು

**ಶೀಲಾ ಗೌಡ:** ಅಂತರರಾಷ್ಟ್ರೀಯ ಮಟ್ಟದ ಕಲಾಸಾಧಕರಿಗೆ ಕೊಡಮಾಡುವ ಪ್ರತಿಷ್ಠಿತ 'ಸ್ಯಾಮ್ ಗಿಲ್ಲಿಯಾಮ್ ಪ್ರಶಸ್ತಿ'ಗೆ ಈ ವರ್ಷ ಕನ್ನಡತಿ ಕಲಾವಿದೆ ಶೀಲಾ ಗೌಡ ಅವರು ಭಾಜನರಾದರು. ದಿಯಾ ಆರ್ಟ್ ಫೌಂಡೇಷನ್ ಮತ್ತು ಸ್ಯಾಮ್ ಗಿಲ್ಲಿಯಾಮ್ ಫೌಂಡೇಷನ್ ಜಂಟಿಯಾಗಿ ಏಪ್ರಿಲ್‌ನಲ್ಲಿ ಈ ಪ್ರಶಸ್ತಿಯ ಘೋಷಣೆ ಮಾಡಿತು. ಪ್ರಶಸ್ತಿಯ ಮೊತ್ತ 75 ಸಾವಿರ ಡಾಲರ್ (ಆಗಿನ ಮೌಲ್ಯ ₹63.49 ಲಕ್ಷ)


ಶೀಲಾ ಗೌಡ

Publication Date
26/12/2025

Presented by

# ಸಿಹಿ ಅಧ್ಯಾಯದಲ್ಲಿ ಕೆಲ ಕಹಿ ಪುಟಗಳು

**ವರ್ಷದ ಕೊನೆಯಲ್ಲಿ ನಿಂತು, ಇಡೀ ವರ್ಷದಲ್ಲಿ ದೇಶದ ಹಣಕಾಸಿನ ಲೋಕದಲ್ಲಿ ಆಗಿಹೋದ ಪ್ರಮುಖ ವಿದ್ಯಮಾನಗಳ ಅವಲೋಕನ ನಡೆಸಲು ಯತ್ನಿಸಿದರೆ ಬೇವು–ಬೆಲ್ಲಗಳೆರಡರ ಅನುಭವ ದಕ್ಕುತ್ತದೆ. ವರ್ಷದ ಆರಂಭದಲ್ಲಿ ಬೇವು–ಬೆಲ್ಲ ನೀಡುವುದರ ಹಿಂದಿನ ಆಶಯವು ಆಧ್ಯಾತ್ಮಿಕ ಮಹತ್ವವನ್ನಷ್ಟೇ ಅಲ್ಲದೆ, ಆರ್ಥಿಕ ಜಗತ್ತಿನಲ್ಲಿಯೂ ಎಷ್ಟೊಂದು ಅರ್ಥವನ್ನು ಹೊಂದಿದೆಯಲ್ಲ ಎಂಬ ಸೋಜಿಗ ಉಂಟಾಗುತ್ತದೆ**

• ವಿಜಯ್ ಜೋಷಿ

ವರ್ಷದ ಎರಡನೆಯ ತಿಂಗಳ ಮೊದಲ ದಿನ ಮಂಡನೆಯಾದ ಕೇಂದ್ರ ಬಜೆಟ್ ಮಹತ್ವದ ಬದಲಾವಣೆಯೊಂದನ್ನು ಹೊತ್ತು ತಂದಿತು. ₹12 ಲಕ್ಷದವರೆಗಿನ ವೈಯಕ್ತಿಕ ಆದಾಯಕ್ಕೆ ತೆರಿಗೆ ಇಲ್ಲ, ವೇತನದಾರರಿಗೆ ₹12.75 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು.

ಕೋವಿಡ್–19 ಸಾಂಕ್ರಾಮಿಕವು ಅಪ್ಪಳಿಸಿದ ದಿನದಿಂದಲೂ ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಹೆಚ್ಚಳ ಆಗಬಹುದು ಎಂಬ ನಿರೀಕ್ಷೆಯಲ್ಲಿ ಇದ್ದ ದೇಶದ ಮಧ್ಯಮ ವರ್ಗಕ್ಕೆ ಇದು ಸಿಹಿ ನೀಡಿತು. 'ವಿವಿಧ ರಾಜ್ಯ ಸರ್ಕಾರಗಳು ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಯು ಹೆಚ್ಚಳ ಕಾಣುತ್ತಿದೆ. ಕೇಂದ್ರದ ಕ್ರಮವು ನಗರ ಪ್ರದೇಶಗಳಲ್ಲಿ ಬೇಡಿಕೆಯನ್ನು ಜಾಸ್ತಿ ಮಾಡಲಿದೆ' ಎಂದು ಆಗ ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದರು.

## ಜಿಎಸ್‌ಟಿ ದರ ಪರಿಷ್ಕರಣೆ

ಜಿಡಿಪಿ ಬೆಳವಣಿಗೆ ಪ್ರಮಾಣಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಈ ಅಂದಾಜು ಸರಿ ಎಂದು ಹೇಳುತ್ತಿರಬಹುದು. ಏಪ್ರಿಲ್ 1ರಿಂದ ಶುರುವಾದ ಹೊಸ ಆರ್ಥಿಕ ವರ್ಷದ ಎರಡು ತ್ರೈಮಾಸಿಕಗಳಲ್ಲಿ ಜಿಡಿಪಿ ಬೆಳವಣಿಗೆ ದರವು ಹೆಚ್ಚುತ್ತ ಸಾಗಿದೆ. ಆದರೆ ಆದಾಯ ತೆರಿಗೆ ವಿನಾಯಿತಿಯ ಮಟ್ಟವನ್ನು ಹೆಚ್ಚಿಸಿದ್ದಕ್ಕಿಂತ ಹೆಚ್ಚು ಸಿಹಿಯಾದ, ಹೆಚ್ಚು ವ್ಯಾಪಕ ಪರಿಣಾಮ ಉಂಟುಮಾಡುವ ತೀರ್ಮಾನವೊಂದು ನಂತರದಲ್ಲಿ ಜಾರಿಗೆ ಬಂತು.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ದೇಶದ ಜನರಿಗೆ ಸಿಹಿ ಸುದ್ದಿಯೊಂದು ಸಿಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ದಿನ ಪ್ರಕಟಿಸಿದರು. ಆ ಸಿಹಿ ಸುದ್ದಿಯು ಜಿಎಸ್‌ಟಿ ದರ ಪರಿಷ್ಕರಣೆಗೆ ಸಂಬಂಧಿಸಿದ್ದಾಗಿರಲಿದೆ ಎಂದು ಅಧಿಕೃತ ಮೂಲಗಳು ಆಗಲೇ ಮಾಹಿತಿ ನೀಡಿದ್ದವು.

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳನ್ನು ಒಳಗೊಂಡಿರುವ ಜಿಎಸ್‌ಟಿ ಮಂಡಳಿಯು ಪರೋಕ್ಷ ತೆರಿಗೆ ಹಂತಗಳಲ್ಲಿ ದೊಡ್ಡ ಬದಲಾವಣೆ ತರುವ ತೀರ್ಮಾನ ತೆಗೆದುಕೊಂಡಿತು. ಆ ತೀರ್ಮಾನಗಳು ಸೆಪ್ಟೆಂಬರ್ 22ರಿಂದ ಜಾರಿಗೆ ಬಂದವು. ಜಿಎಸ್‌ಟಿ ವ್ಯವಸ್ಥೆಯನ್ನು ರೂಪಿಸಿದ್ದು ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲಿನ ಅತಿದೊಡ್ಡ ಸುಧಾರಣೆಯಾದರೆ, ಸೆಪ್ಟೆಂಬರ್ 22ರಂದು ಜಾರಿಗೆ ಬಂದ ದರ ಪರಿಷ್ಕರಣೆಯು ಜಿಎಸ್‌ಟಿ ವ್ಯವಸ್ಥೆಯಲ್ಲಿನ ಅತಿದೊಡ್ಡ ಸುಧಾರಣೆ.

ದಿನಸಿ ಉತ್ಪನ್ನಗಳು, ಕೃಷಿ ಉಪಕರಣಗಳು, ಬಟ್ಟೆ, ಔಷಧಗಳು ಮತ್ತು ವಾಹನಗಳು ಸೇರಿದಂತೆ ಒಟ್ಟು 375 ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರ ಪರಿಷ್ಕರಣೆ ಕಂಡಿತು. ಜಿಎಸ್‌ಟಿ ಸುಧಾರಣೆಯನ್ನು ಪ್ರಧಾನಿ ಮೋದಿ ಅವರು 'ಜಿಎಸ್‌ಟಿ ಉಳಿತಾಯ ಉತ್ಸವ' ಎಂದು ಬಣ್ಣಿಸಿದರು. ಜಿಎಸ್‌ಟಿ ದರ ಇಳಿಕೆಯಿಂದ ಅರ್ಥ ವ್ಯವಸ್ಥೆಗೆ ಆದ ಅನುಕೂಲವನ್ನು ಎಸ್‌ಬಿಐ ರಿಸರ್ಚ್ ಸಂಸ್ಥೆಯು ಬಹಳ ಚೆನ್ನಾಗಿ ಹೇಳಿದೆ. ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ಆದಾಯ ತೆರಿಗೆ ಮಿತಿ ಸಡಿಲಿಕೆ ಕ್ರಮ ಹಾಗೂ ಜಿಎಸ್‌ಟಿ ಸುಧಾರಣೆಯ ಒಟ್ಟು ಪರಿಣಾಮವಾಗಿ, ಅರ್ಥ ವ್ಯವಸ್ಥೆಯಲ್ಲಿ ₹5.31 ಲಕ್ಷ ಕೋಟಿ ಮೌಲ್ಯದ ಬೇಡಿಕೆ ಸೃಷ್ಟಿಯಾಗಲಿದೆ ಎಂದು ಎಸ್‌ಬಿಐ ಅಂದಾಜು ಮಾಡಿದೆ.






- ಜಾಗತಿಕ ರೇಟಿಂಗ್ಸ್ ಸಂಸ್ಥೆ ಎಸ್‌ಆ್ಯಂಡ್‌ಪಿ ಆಗಸ್ಟ್‌ನಲ್ಲಿ ಭಾರತದ ರೇಟಿಂಗ್ ಮಟ್ಟವನ್ನು 18 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಮೇಲ್ದರ್ಜೆಗೆ ಏರಿಸಿತು
- ವಿಮಾ ಕ್ಷೇತ್ರದಲ್ಲಿ ಶೇಕಡ 100ರಷ್ಟು ಎಫ್‌ಡಿಐಗೆ ಅವಕಾಶ ನೀಡುವ ಮಸೂದೆಗೆ ಸಂಸತ್ತು ಒಪ್ಪಿಗೆ ನೀಡಿತು
- ದೇಶದ ಅತ್ಯಂತ ಪ್ರಮುಖ ಉದ್ಯಮ ಸಮೂಹಗಳಲ್ಲಿ ಒಂದಾದ ಟಾಟಾ ಸಮೂಹದ ಮಾಲೀಕತ್ವದ ಹೊಂದಿರುವ ಟಾಟಾ ಟ್ರಸ್ಟ್ಸ್‌ನಲ್ಲಿನ ಆಂತರಿಕ ಕಲಹ ಬಯಲಾಯಿತು

## ಕುಸಿದ ರೂಪಾಯಿ

ಇದುವರೆಗೆ ಉಲ್ಲೇಖಿಸಿದ ಎರಡು ಪ್ರಮುಖ ವಿದ್ಯಮಾನಗಳು 'ಬೆಲ್ಲ'ವನ್ನು ಪ್ರತಿನಿಧಿಸುವಂಥವು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 90ಕ್ಕಿಂತ ಕೆಳಮಟ್ಟಕ್ಕೆ ಕುಸಿದು ಸಾರ್ವಕಾಲಿಕ ಕನಿಷ್ಠ ಮಟ್ಟವನ್ನು ತಲುಪಿದ್ದು 2025ರ ಕಹಿ ಸಂಗತಿಗಳಲ್ಲೊಂದು. ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಗಳಿಂದ ಹಣವನ್ನು ನಿರಂತರವಾಗಿ ಹಿಂಪಡೆದಿದ್ದು, ಜಾಗತಿಕ ಅನಿಶ್ಚಿತತೆಗಳ ಕಾರಣದಿಂದಾಗಿ ಹೂಡಿಕೆದಾರರು ಅಮೆರಿಕದ ಡಾಲರ್‌ನಲ್ಲಿ ಹೆಚ್ಚು ಹಣ ತೊಡಗಿಸಿದ್ದು, ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದ ಸುತ್ತಲಿನ ಅನಿಶ್ಚಿತತೆ ಕೊನೆಗೊಂಡಿಲ್ಲದಿರುವುದು ಸೇರಿದಂತೆ ರೂಪಾಯಿ ಕುಸಿತಕ್ಕೆ ಹಲವು ಕಾರಣಗಳನ್ನು ಆರ್ಥಿಕ ತಜ್ಞರು ನೀಡಿದ್ದಾರೆ. ಮೌಲ್ಯ ಕುಸಿತದಿಂದಾಗಿ ರಫ್ತು ಆಧಾರಿತ ಉದ್ದಿಮೆಗಳು ಖುಷಿ ಅನುಭವಿಸುವಂತೆ ಆಯಿತಾದರೂ, ಕಚ್ಚಾ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಕೈಗಾರಿಕೆಗಳಿಗೆ ಇದು ದೊಡ್ಡ ತಲೆನೋವಾಗಿ ಪರಿಣಮಿಸಿದೆ.



ರೂಪಾಯಿ ಮೌಲ್ಯ ಇಳಿಕೆಯ ವಿದ್ಯಮಾನದಲ್ಲಿ ಕುತೂಹಲಕರ ಸಂಗತಿಯೊಂದಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ರೂಪಾಯಿ ಮೌಲ್ಯ ಕುಸಿದಿದ್ದಾಗ, ಅದು ಅರ್ಥ ವ್ಯವಸ್ಥೆಗೆ ಬಹಳ ದೊಡ್ಡ ಕೇಡು ಎಂಬಂತೆ ಮಾತನಾಡಿದ್ದ ರಾಜಕೀಯ ವರ್ಗವು ಈಗಿನ ಕುಸಿತವು ಅರ್ಥ ವ್ಯವಸ್ಥೆಗೆ ಒಂದು ಬಗೆಯಲ್ಲಿ ಒಳ್ಳೆಯದು ಎಂಬ ಸಂಕಥನವನ್ನು ಕಟ್ಟಲು ಯತ್ನಿಸಿದೆ!

## ಚಿನ್ನ, ಬೆಳ್ಳಿ ನಾಗಾಲೋಟ

ಈ ವರ್ಷದಲ್ಲಿ ಚಿನ್ನ ಹಾಗೂ ಬೆಳ್ಳಿಯ ದರ ಹುಬ್ಬೇರಿಸುವ ಪ್ರಮಾಣದಲ್ಲಿ ಜಿಗಿತ ಕಂಡಿವೆ. ಜನವರಿ 1ರಂದು ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹80,440 ಆಗಿತ್ತು. ಇದು ಈಗ ₹1,43,400ಕ್ಕೆ ಬಂದು ನಿಂತಿದೆ.

ಬೆಳ್ಳಿಯ ಬೆಲೆಯು ಜನವರಿ 1ರಂದು ಬೆಂಗಳೂರಿನಲ್ಲಿ ಕೆ.ಜಿ.ಗೆ ₹91,000 ಆಗಿತ್ತು. ಅದು ಈಗ ₹2,33,500ಕ್ಕೆ ಬಂದಿದೆ. 'ಚಿನ್ನ ಮತ್ತು ಬೆಳ್ಳಿಯ ದರ ಏರಿಕೆಯು ವಿನಾಕಾರಣ ಆಗುತ್ತಿರುವುದಲ್ಲ. ಜಾಗತಿಕ ಸವಾಲುಗಳು, ಸರ್ಕಾರಗಳ ಕರೆನ್ಸಿಗಳಲ್ಲಿ ವಿಶ್ವಾಸ ಕಡಿಮೆ ಆಗಿರುವುದು ಇದಕ್ಕೆ ಕಾರಣ. ಚಿನ್ನ, ಬೆಳ್ಳಿ ಈಗ ಮಹತ್ವದ ಆಸ್ತಿಯಾಗಿ ಬದಲಾಗುತ್ತಿವೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಕರೆನ್ಸಿ ವಿಭಾಗದ ಸಂಶೋಧನಾ ಮುಖ್ಯಸ್ಥೆ ಅನಿಂದ್ಯ ಬ್ಯಾನರ್ಜಿ ಹೇಳುತ್ತಾರೆ.



## ಇಳಿದ ಹಣದುಬ್ಬರ

2025ರಲ್ಲಿ ಭಾರತವು ದಶಕದ ಅತ್ಯಂತ ಕನಿಷ್ಠ ಮಟ್ಟದ ಹಣದುಬ್ಬರ ಪ್ರಮಾಣವನ್ನು ದಾಖಲಿಸಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರ ಮಟ್ಟದಲ್ಲಿ ಕಾಯ್ದುಕೊಳ್ಳಬೇಕು ಎಂಬುದು ಕೇಂದ್ರ ಸರ್ಕಾರವು ಆರ್‌ಬಿಐಗೆ ನೀಡಿರುವ ಗುರಿ. ಆದರೆ ಈ ವರ್ಷದ ಅಕ್ಟೋಬರ್‌ನಲ್ಲಿ ಹಣದುಬ್ಬರವು ಶೇ 0.25ರ ಮಟ್ಟಕ್ಕೆ ಕುಸಿದಿತ್ತು. ಹಣದುಬ್ಬರದ ಇಳಿಕೆಯು ಖರೀದಿದಾರರಿಗೆ ಖುಷಿ ನೀಡಬಹುದಾದರೂ ಒಟ್ಟಾರೆ ಅರ್ಥವ್ಯವಸ್ಥೆಗೆ ಅದು ಒಳ್ಳೆಯದನ್ನೇ ಮಾಡುತ್ತದೆ ಎನ್ನಲಾಗದು.

## ಷೇರುಪೇಟೆ: ಸಮಾಧಾನಕರ ವಹಿವಾಟು

2020ರ ನಂತರದಲ್ಲಿ ಭರ್ಜರಿ ಏರಿಕೆ ದಾಖಲಿಸಿದ್ದ ದೇಶದ ಷೇರುಪೇಟೆ 2025ರಲ್ಲಿ ಹೂಡಿಕೆದಾರರ ಪಾಲಿಗೆ ಹೆಚ್ಚಿನ ಲಾಭವನ್ನೇನೂ ನೀಡಿಲ್ಲ. ದೇಶದ 50 ಬ್ಲ್ಯೂ ಚಿಪ್ ಕಂಪನಿಗಳನ್ನು ಪ್ರತಿನಿಧಿಸುವ ನಿಫ್ಟಿ–50 ಸೂಚ್ಯಂಕವು ಈ ವರ್ಷ ಇದುವರೆಗೆ ಶೇ 10.25ರಷ್ಟು ಏರಿಕೆಯನ್ನು ಮಾತ್ರ ದಾಖಲಿಸಿದೆ. ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳಿಂದ ನಿರಂತರವಾಗಿ ಹಣ ಹಿಂಪಡೆಯುತ್ತಿದ್ದಾರೆ. ವಿದೇಶಿ ಹೂಡಿಕೆದಾರರು ಮತ್ತೆ ಭಾರತದ ಮಾರುಕಟ್ಟೆಗಳತ್ತ ಮುಖ ಮಾಡುವವರೆಗೆ ಷೇರುಪೇಟೆಯಲ್ಲಿ ತೇಜಿ ವಹಿವಾಟು ನಡೆಯುವ ಸಾಧ್ಯತೆ ಕ್ಷೀಣ.





Publication Date
26/12/2025

Presented by

# ಅಗಲಿದವರು...

● ಜಗದೀಶ, ಅಶ್ವಿನಿ ಸಿ.

**ಸಾಹಿತ್ಯ,** ರಾಜಕೀಯ, ಸಾಮಾಜಿಕ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹಲವು ಗಣ್ಯರು ಈ ವರ್ಷ ನಮ್ಮನ್ನಗಲಿದ್ದಾರೆ. ಪ್ರಮುಖರ ವಿವರ ಇಲ್ಲಿದೆ



ಪೋಪ್ ಫ್ರಾನ್ಸಿಸ್

**ಪ್ರೀತಿಶ್ ನಂದಿ:** ಪತ್ರಕರ್ತ, ಕವಿ, ಚಿತ್ರ ನಿರ್ಮಾಪಕರಾಗಿದ್ದ ಪ್ರೀತಿಶ್ ನಂದಿ (73) ಅವರು ಜನವರಿ 8ರಂದು ನಿಧನರಾದರು. ರಾಜ್ಯಸಭಾ ಸದಸ್ಯರಾಗಿದ್ದ ಪ್ರೀತೀಶ್ ಪ್ರಾಣಿ ಹಕ್ಕುಗಳ ಪರ ವಕೀಲರಾಗಿದ್ದರು

**ಮನೋಜ್ ಕುಮಾರ್:** ಬಾಲಿವುಡ್‌ನ ಖ್ಯಾತ ನಟ, ನಿರ್ಮಾಪಕರಾಗಿದ್ದ ಮನೋಜ್ ಕುಮಾರ್ (87) ಅವರು ಹೃದಯಸಂಬಂಧಿ ಕಾಯಿಲೆಯಿಂದಾಗಿ ಏಪ್ರಿಲ್ 4 ರಂದು ಮುಂಬೈನಲ್ಲಿ ನಿಧನರಾದರು. ದೇಶಭಕ್ತಿ ಕಥಾ ಹಂದರದ ಸಿನಿಮಾಗಳಲ್ಲಿ ತಮ್ಮ ಪಾತ್ರದಿಂದಲೇ ಚಿರಪರಿಚಿತರಾಗಿದ್ದ ಇವರು 'ಭಾರತ ಕುಮಾರ' ಎಂದೇ ಪ್ರಸಿದ್ಧಿ ಹೊಂದಿದ್ದರು

**ಪೋಪ್ ಫ್ರಾನ್ಸಿಸ್:** ಪೋಪ್ ಹುದ್ದೆಗೇರಿದ ಲ್ಯಾಟಿನ್ ಅಮೆರಿಕದ ಮೊದಲ ಧರ್ಮಗುರು ಎಂಬ ಖ್ಯಾತಿಗೆ ಪಾತ್ರರಾಗಿದ್ದ ಪೋಪ್ ಫ್ರಾನ್ಸಿಸ್ (88) ಅವರು ಏಪ್ರಿಲ್ 21ರಂದು ಕೊನೆಯುಸಿರೆಳೆದರು. ವಿನಮ್ರ ವ್ಯಕ್ತಿತ್ವ, ಬಡವರ ಬಗ್ಗೆ ಹೊಂದಿದ್ದ ಅಪಾರ ಕಾಳಜಿಯಿಂದ ಜಗತ್ತಿನಾದ್ಯಂತ ಅವರು ಮನ್ನಣೆಗಳಿಸಿದ್ದರು



ಫ್ರಾಂಕ್ ಕೆಪ್ರಿಯೋ

**ಕೆ.ಕಸ್ತೂರಿ ರಂಗನ್:** ಇಸ್ರೊ ಮಾಜಿ ಅಧ್ಯಕ್ಷ , ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ(ಎನ್‌ಇಪಿ) ಕರಡು ಸಮಿತಿ ಅಧ್ಯಕ್ಷರಾಗಿದ್ದ ಕೃಷ್ಣಸ್ವಾಮಿ ಕಸ್ತೂರಿರಂಗನ್ (84) ಅವರು ಏಪ್ರಿಲ್ 25ರಂದು ಕೊನೆಯುಸಿರೆಳೆದರು. ಒಂದು ದಶಕದವರೆಗೆ ಭಾರತೀಯ ಅಂತರಿಕ್ಷ ಕಾರ್ಯಕ್ರಮದ ನೇತೃತ್ವ ವಹಿಸಿ, ಮುನ್ನಡೆಸಿದ್ದ ಅವರು ಅಂತರಿಕ್ಷ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲದೇ ಶಿಕ್ಷಣ, ಸಂಶೋಧನೆ, ಪರಿಸರ, ಸಂಸದೀಯ ಪ್ರಜಾಪ್ರಭುತ್ವ, ಆಡಳಿತ, ಆರ್ಥಿಕತೆ, ಸಂವಹನ ಸೇರಿ ವೈವಿಧ್ಯಮಯ ಕ್ಷೇತ್ರಗಳಿಗೆ ಕೊಡುಗೆ ನೀಡಿದ್ದರು. ರಾಜ್ಯಸಭೆಯ ಸದಸ್ಯರಾಗಿ, ಯೋಜನಾ ಆಯೋಗದ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದರು



ಕೆ.ಕಸ್ತೂರಿ ರಂಗನ್

**ಎಂ.ಆರ್ ಶ್ರೀನಿವಾಸನ್:** ದೇಶದ ಅಣು ಶಕ್ತಿ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಎಂ.ಆರ್ ಶ್ರೀನಿವಾಸನ್ (95) ಅವರು ಮೇ 20ರಂದು ನಿಧನರಾದರು. ಅಣುಶಕ್ತಿ ಆಯೋಗದ (ಎಆರ್‌ಸಿ) ಅಧ್ಯಕ್ಷರಾಗಿ, ಅಣುಶಕ್ತಿ ಶಕ್ತಿ ವಿಭಾಗದ ಕಾರ್ಯದರ್ಶಿಯಾಗಿ ಕೊಡುಗೆ ನೀಡಿದ್ದ ಇವರಿಗೆ ಭಾರತೀಯ ಅಣು ಶಕ್ತಿ ನಿಗಮವನ್ನು (ಎನ್‌ಪಿಸಿಐಎಲ್) ಹುಟ್ಟುಹಾಕಿದ ಶ್ರೇಯ ಕೂಡ ಸಂದಿತ್ತು



ಎಂ.ಆರ್ ಶ್ರೀನಿವಾಸನ್

**ವಾಲ್ಮೀಕ್ ಥಾಪರ್:** ದೇಶದ ವನ್ಯಜೀವಿ ಸಂರಕ್ಷಕರಲ್ಲಿ ಪ್ರಮುಖರಾಗಿದ್ದ ವಾಲ್ಮೀಕ್ ಥಾಪರ್(73) ಅವರು ಮೇ 31ರಂದು ಕೊನೆ ಉಸಿರೆಳೆದರು. ಅವರು ಲೇಖಕರಾಗಿಯೂ ಚಿರಪರಿಚಿತ ರಾಗಿದ್ದರು



ಧರ್ಮೇಂದ್ರ

**ವಿಜಯ್ ರೂಪಾನಿ:** ಬಿಜೆಪಿ ಮುಖಂಡ, ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ(68) ಅವರು ಜೂನ್ 12ರಂದು ಏರ್ ಇಂಡಿಯಾ ವಿಮಾನ ದುರಂತದಲ್ಲಿ ಕೊನೆ ಉಸಿರೆಳೆದರು

**ವಿ.ಎಸ್.ಅಚ್ಯುತಾನಂದನ್:** ಕೇರಳದ ಮಾಜಿ ಮುಖ್ಯಮಂತ್ರಿ, ಸಿಪಿಎಂನ ಹಿರಿಯ ನಾಯಕ ವಿ.ಎಸ್. ಅಚ್ಯುತಾನಂದನ್ (101 ವರ್ಷ) ಅವರು ಜುಲೈ 21ರಂದು ನಿಧನರಾದರು

**ಶಿಬು ಸೊರೇನ್:** ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ರಾಜಕೀಯ ಪಕ್ಷದ ಸಂಸ್ಥಾಪಕ ಶಿಬು ಸೊರೇನ್ (81) ಅವರು ಆಗಸ್ಟ್ 4ರಂದು ನಿಧನ ಹೊಂದಿದರು

**ಸತ್ಯಪಾಲ್ ಮಲಿಕ್:** ಜಮ್ಮು ಮತ್ತು ಕಾಶ್ಮೀರ, ಗೋವಾ ಮತ್ತು ಮೇಘಾಲಯದ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್(79) ಆಗಸ್ಟ್ 5ರಂದು ನಿಧನ ಹೊಂದಿದರು.

**ಫ್ರಾಂಕ್ ಕೆಪ್ರಿಯೋ:** ಮಾನವೀಯತೆ ಆಧಾರದಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಜಗತ್ತಿನ ಅತ್ಯಂತ ಸಹೃದಯಿ ನ್ಯಾಯಾಧೀಶ ಎಂದೇ ಖ್ಯಾತರಾಗಿದ್ದ ಅಮೆರಿಕದ ರೋಡ್ ಐಲೆಂಡ್‌ನ ಮುನ್ಸಿಪಲ್ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಫ್ರಾಂಕ್ ಕ್ಯಾಪ್ರಿಯೊ (80) ಅವರು ಆಗಸ್ಟ್ 20ರಂದು ನಿಧನರಾದರು.

**ಜುಬೀನ್ ಗರ್ಗ್:** ಅಸ್ಸಾಮಿ ಖ್ಯಾತ ಗಾಯಕ ಜುಬೀನ್ ಗರ್ಗ್(52) ಸೆಪ್ಟೆಂಬರ್ 19ರಂದು ಮೃತಪಟ್ಟರು. ಕಾರ್ಯಕ್ರಮವೊಂದರ ನಿಮಿತ್ತ ಸಿಂಗಪುರಕ್ಕೆ ತೆರಳಿದ್ದ ಅವರು ಈಜಲು ತೆರಳಿದ್ದ ವೇಳೆ ಅನುಮಾನಾಸ್ಪದವಾಗಿ ಸಾವಿಗೀಡಾದರು. ಅಸ್ಸಾಮಿ, ಹಿಂದಿ, ಬಂಗಾಳಿ ಸೇರಿದಂತೆ ವಿವಿಧ ಭಾಷೆಗಳಲ್ಲಿ 38 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದ್ದ ಅವರು ಭಾರಿ ಜನ ಮನ್ನಣೆಗಳಿಸಿದ್ದರು. ಅವರನ್ನು ಕೊಲೆ ಮಾಡಲಾಗಿದೆ ಎಂಬುದು ತನಿಖೆಯಿಂದ ದೃಢಪಟ್ಟಿದೆ ಎಂದು ಅಸ್ಸಾಂ ಸರ್ಕಾರ ಹೇಳಿತ್ತು.

**ಪೀಯೂಷ್ ಪಾಂಡೆ:** ದೇಶದ ಜಾಹೀರಾತು ಲೋಕಕ್ಕೆ ವಿಶೇಷ ಮೆರುಗು ತುಂಬಿದ್ದ ಪದ್ಮಶ್ರೀ ಪುರಸ್ಕೃತ ಪೀಯೂಷ್ ಪಾಂಡೆ (70) ಅವರು ಅಕ್ಟೋಬರ್ 24ರಂದು ನಿಧನ ಹೊಂದಿದರು

**ಧರ್ಮೇಂದ್ರ:** ಹಿಂದಿ ಚಿತ್ರರಂಗದ ಸ್ಫುರದ್ರೂಪಿ ನಟ ಧರ್ಮೇಂದ್ರ ಅವರು ನವೆಂಬರ್ 24ರಂದು ತಮ್ಮ 89ನೇ ವಯಸ್ಸಿನಲ್ಲಿ ನಿಧನರಾದರು. ಆರು ದಶಕಗಳ ಸಿನಿಮಾ ವೃತ್ತಿ ಬದುಕಿನಲ್ಲಿ 250ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದ ಅವರು ರಾಜಕಾರಣಿಯೂ ಆಗಿದ್ದರು

**ಶಿವರಾಜ್ ಪಾಟೀಲ್:** ಕೇಂದ್ರ ಸರ್ಕಾರದ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಶಿವರಾಜ್ ಪಾಟೀಲ್ (90) ಅವರು ಡಿಸೆಂಬರ್ 12ರಂದು ನಿಧನ ಹೊಂದಿದರು.

## ❖ ದೇಶದಲ್ಲಿ 1 ಲಕ್ಷ ಪೆಟ್ರೋಲ್ ಬಂಕ್: ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ನಿಯಂತ್ರಣದಲ್ಲಿ ಶೇ 90ರಷ್ಟು ಬಂಕ್‌ಗಳು

**ಸಂದರ್ಭ: ದೇಶದಲ್ಲಿ ಪೆಟ್ರೋಲ್ ಬಂಕ್‌ಗಳ ಸಂಖ್ಯೆ 1 ಲಕ್ಷ ದಾಟಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಅಂಕಿ-ಅಂಶಗಳು ಹೇಳುತ್ತಿವೆ.**

- 20150 0 50,451 ಪೆಟ್ರೋಲ್ ಬಂಕ್‌ಗಳು ಇದ್ದವು. ಅದು ಈ ನವೆಂಬರ್ ವೇಳೆಗೆ 1,00,266ಕ್ಕೆ ಹೆಚ್ಚಳವಾಗಿದೆ. ಅಮೆರಿಕ ಮತ್ತು ಚೀನಾ ಬಳಿಕ ಭಾರತದಲ್ಲಿ ಅತಿ ಹೆಚ್ಚು ಪೆಟ್ರೋಲ್ ಬಂಕ್‌ಗಳು ಇವೆ.
- ಪೆಟ್ರೋಲ್ ಬಂಕ್‌ಗಳ ಪೈಕಿ ಶೇ 90ರಷ್ಟನ್ನು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಿರ್ವಹಿಸುತ್ತಿವೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ).
- 41,664 ಬಂಕ್‌ಗಳನ್ನು ಹೊಂದಿದೆ. ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) 24,605 ಮತ್ತು ಎಚ್‌ಪಿಸಿಎಲ್ 24,418 ಬಂಕ್‌ಗಳನ್ನು ಹೊಂದಿದೆ.
- 2003-04ರಲ್ಲಿ ಖಾಸಗಿ ವಲಯವು 27 ಬಂಕ್‌ಗಳೊಂದಿಗೆ ಪೆಟ್ರೋಲ್ ಬಂಕ್ ವ್ಯ-ವಹಾರವನ್ನು ಆರಂಭಿಸಿತ್ತು. 2015ರಲ್ಲಿ ಖಾಸಗಿ ವಲಯದ ಪೆಟ್ರೋಲ್ ಬಂಕ್‌ಗಳ ಪ್ರಮಾಣ ಶೇ 5.9ರಷ್ಟಿತ್ತು. ಅದು ಪ್ರಸ್ತುತ ಶೇ 9.3ಕ್ಕೇರಿದೆ. ಖಾಸಗಿ ವಲಯದ ನಯಾರಾ ಎನರ್ಜಿ ಲಿಮಿಟೆಡ್ 6,921, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ 2,114 ಮತ್ತು ಬಿ.ಪಿ ಶೆಲ್ 346 ಬಂಕ್‌ಗಳನ್ನು ಹೊಂದಿದೆ.
- 2024ರ ವರದಿ ಪ್ರಕಾರ, ಅಮೆರಿಕದಲ್ಲಿ 1,96,643 ಮತ್ತು ಚೀನಾದಲ್ಲಿ 1,15,228 ಪೆಟ್ರೋಲ್ ಬಂಕ್‌ಗಳಿವೆ.
- ಗ್ರಾಮೀಣ ಪ್ರದೇಶಗಳಲ್ಲಿನ ಪೆಟ್ರೋಲ್ ಬಂಕ್‌ಗಳ ಪ್ರಮಾಣ 2015ರಲ್ಲಿ ಶೇ 22ರಷ್ಟಿತ್ತು. ಅದು ಈಗ ಶೇ 29ಕ್ಕೇರಿದೆ. ಪೆಟ್ರೋಲ್ ಬಂಕ್‌ಗಳು ಪೆಟ್ರೋಲ್ ಮತ್ತು ಡೀಸೆಲ್ ವ್ಯವಹಾರದ ಜೊತೆಗೆ ಇದೀಗ ಸಿಎನ್‌ಜಿಯಂತಹ ಪರ್ಯಾಯ ಇಂಧನವನ್ನು ಕೂಡ ಮಾರಾಟ ಮಾಡುತ್ತಿವೆ. ಅಲ್ಲದೆ ಇ.ವಿ ಚಾರ್ಜಿಂಗ್ ಕೇಂದ್ರಗಳನ್ನೂ ಹೊಂದಿವೆ.
- ಇಂಧನ ಇಂಧನ ಬೆಲೆಯ ಮೇಲೆ ಸರ್ಕಾರದ ಪರೋಕ್ಷ ನಿಯಂತ್ರಣದಿಂದ ವಹಿವಾಟಿನಲ್ಲಿ ಖಾಸಗಿ ಪಾಲುದಾರಿಕೆ ಕಡಿಮೆ ಇದೆ ಎಂದು ಕೈಗಾರಿಕಾ ವಲಯದ ಮೂಲಗಳು ತಿಳಿಸಿವೆ.

## ❖ ಸಂತಾಲಿ ಭಾಷೆಯಲ್ಲಿ ಭಾರತ ಸಂವಿಧಾನ

**ಸಂದರ್ಭ: ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮ ವೊಂದರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂತಾಲಿ ಭಾಷೆಯಲ್ಲಿ ಭಾರತ ಸಂವಿಧಾನವನ್ನು ಬಿಡುಗಡೆ ಮಾಡಿದರು.**

- 'ಭಾರತೀಯ ಸಂವಿಧಾನವು ಸಂತಾಲಿ ಭಾಷೆಯಲ್ಲಿ ಲಭ್ಯವಿರುವುದು ಸಂತಾಲಿ ಜನರಿಗೆ ಹೆಮ್ಮೆ ಮತ್ತು ಸಂತೋಷದ ವಿಷಯವಾಗಿದೆ. ಇದನ್ನು ಒಲ್ ಚಿಕಿ ಲಿಪಿಯಲ್ಲಿ ಬರೆಯಲಾಗಿದೆ. ಅವರ | ಭಾಷೆಯಲ್ಲಿ ಸಂವಿಧಾನವನ್ನು ಓದಲು | ಮತ್ತು ಅರ್ಥ ಮಾಡಿಕೊಳ್ಳಲು | ಸಾಧ್ಯವಾಗುತ್ತದೆ' ಎಂದು ದ್ರೌಪದಿ ಮುರ್ಮು ಅವರು ಹೇಳಿದರು.
- ಒಲ್ ಚಿಕಿ ಲಿಪಿಯ ಶತಮಾನೋತ್ಸವದ ಸಂದರ್ಭದಲ್ಲಿ ಸಂವಿಧಾನವನ್ನು ಈ ಲಿಪಿಯಲ್ಲಿ ಹೊರತಂದಿರುವುದಕ್ಕೆ ಕೇಂದ್ರ ಕಾನೂನು ಸಚಿವ ಅರ್ಜುನ್ | ರಾಮ್ ಮೇಘವಾಲ್ ಅವರನ್ನು ಮುರ್ಮು ಶ್ಲಾಘಿಸಿದರು.

## ❖ ನೌಕಾನೆಲೆಗೆ ರಾಷ್ಟ್ರಪತಿ ಭೇಟಿ

**ಸಂದರ್ಭ: ರಾಷ್ಟ್ರಪತಿ ದ್ರೌಪದಿ ಮುರ್ಮು ಇಲ್ಲಿನ ಕದಂಬ ನೌಕಾನೆಲೆಗೆ ಭೇಟಿ ನೀಡಲಿದ್ದು, ಜಲಾಂತರ್ಗಾಮಿ ಯುದ್ಧನೌಕೆಯೊಳಗೆ ಸಮುದ್ರದಲ್ಲಿ ಸಂಚರಿಸುವರು.**

- 'ರಾಷ್ಟ್ರ ಪತಿ ಭೇಟಿ ಮತ್ತು ಸಮುದ್ರದೊಳಗೆ ಅವರು ಸಂಚರಿಸುವ ಹಿನ್ನೆಲೆಯಲ್ಲಿ ಅಂದು ಬೆಳಿಗ್ಗೆಯಿಂದ ಮಧ್ಯಾಹ್ನ 3.30ರವರೆಗೆ ಕಾರವಾರ ತಾಲ್ಲೂಕಿನ ಮಾಜಾಳಿಯಿಂದ ಹಾರವಾಡವರೆಗೆ 18ಕಿ.ಮೀ ವ್ಯಾಪ್ತಿಯಲ್ಲಿ ಮೀನುಗಾರಿಕೆ ಚಟುವಟಿಕೆಗೆ ನಿಷೇಧವಿರುತ್ತದೆ' ಎಂದು ಉತ್ತರಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.

## ❖ ಸುಪ್ರೀಂ ಕೋರ್ಟ್: ದೇಶದ ಗಮನ ಸೆಳೆದ ತೀರ್ಪುಗಳು

**ಸಂದರ್ಭ: 2025ರಲ್ಲಿ ಸುಪ್ರೀಂ ಕೋರ್ಟ್ ಸಿವಿಲ್, ಸೇವಾ ವಲಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಹಲವು ಪ್ರಮುಖ ತೀರ್ಪುಗಳನ್ನು ನೀಡಿದೆ. ರಾಜ್ಯಗಳ ಮಸೂದೆಗಳನ್ನು ರಾಜ್ಯಪಾಲರು ಅಂಗೀಕರಿಸುವುದು, ವಕ್ಸ್ ಕಾಯ್ದೆ ತಿದ್ದುಪಡಿ, ಬೀದಿ ನಾಯಿಗಳಿಗೆ ಸಂಬಂಧಿಸಿದ ಆದೇಶಗಳು ಈ ಪೈಕಿ ಸೇರಿವೆ.**

- ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಅವರಿಗೆ ಕಾಲಮಿತಿ ನಿಗದಿ ಮಾಡುವಂತಿಲ್ಲ ಎಂದು ತಮಿಳುನಾಡು ಸರ್ಕಾರ ಮತ್ತು ತಮಿಳುನಾಡು ರಾಜ್ಯಪಾಲ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2025ರ ನ.20ರಂದು ಮಹತ್ವದ ತೀರ್ಪು ನೀಡಿದೆ. ಆದರೆ, ಸಂವಿಧಾನದ 200ನೇ ವಿಧಿಯಡಿ ನೀಡಲಾಗಿರುವ ಅಧಿಕಾರ ಮೀರಿ ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕದೆಯೂ ಇರುವಂತಿಲ್ಲ ಎಂದು ಆಗಿನ ಸಿಜೆಐ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಪೀಠವು ಸರ್ವಾನುಮತದ ತೀರ್ಪು ನೀಡಿದೆ.
- ಮತ್ತೊಂದು ಮುಖ್ಯ ಆದೇಶ ವಕ್ಸ್ ಕಾಯ್ದೆಗೆ ಸಂಬಂಧಿಸಿದ್ದು, ಇಸ್ಲಾಂ ಧರ್ಮವನ್ನು ಕನಿಷ್ಠ ಐದು ವರ್ಷ ಅನುಸರಿಸಿದ ವ್ಯಕ್ತಿ ಮಾತ್ರ ಅಸ್ತಿಯನ್ನು ವಕ್‌ಗೆ ದಾನ ನೀಡಬಹುದು ಎಂಬ ಷರತ್ತು ಸೇರಿದಂತೆ ವಕ್ಸ್ (ತಿದ್ದುಪಡಿ) ಕಾಯ್ದೆ-2025ರ ಕೆಲವು ಪ್ರಮುಖ ಅಂಶಗಳಿಗೆ ಸುಪ್ರೀಂ ಕೋರ್ಟ್ (ಸೆ. 15) ತಡೆ ನೀಡಿ ಮಧ್ಯಂತರ ಆದೇಶ ಪ್ರಕಟಿಸಿತ್ತು. ಆದರೆ, ಇಡೀ ಕಾಯ್ದೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿತು.
- ಶಾಸಕರ ಉಚ್ಚಾಟನೆಗೆ ಸಂಬಂಧಿಸಿದ ತೀರ್ಪೊಂದು ಈ ವರ್ಷ ಹೊರಬಿದ್ದಿದೆ. ಬಿಹಾರ ವಿಧಾನ ಪರಿಷತ್‌ನಲ್ಲಿ ಆಜೆಡಿ ಸದಸ್ಯ ಸುನಿಲ್‌ಕುಮಾರ್ ಸಿಂಗ್ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಘೋಷಣೆ ಕೂಗಿದ್ದ ನಡವಳಿಕೆಯನ್ನು 'ಒಪ್ಪಲಾಗದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ (ಫೆಬ್ರುವರಿ 25). ಆದರೆ ಅಶಿಸ್ತಿನ ಕಾರಣ ನೀಡಿ ಅವರನ್ನು ಸದನದಿಂದ ಉಚ್ಚಾಟಿಸಿದ್ದ ಕ್ರಮವನ್ನು 'ಕಠಿಣ ಮತ್ತು ವಿಪರೀತ' ಎಂದು ಹೇಳಿ, ಉಚ್ಚಾಟನೆಯನ್ನು ರದ್ದುಗೊಳಿಸಿತ್ತು.
- ಅಖಿಲ ಭಾರತೀಯ ನ್ಯಾಯಾಧೀಶರ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಮಹತ್ವದ ತೀರ್ಪು ಪ್ರಕಟಿಸಿತು, 'ಕಾನೂನು ಪದವೀಧರರು ನ್ಯಾಯಾಧೀಶರಾಗಬೇಕು ಎಂದಾದರೆ, ಕಡ್ಡಾಯವಾಗಿ ಕನಿಷ್ಠ ಮೂರು ವರ್ಷ ವಕೀಲರಾಗಿ ಕೆಲಸ ಮಾಡಿರಬೇಕು' ಎಂದು ಸುಪ್ರೀಂ ಕೋರ್ಟ್ ಮೇ 20ರಂದು ತೀರ್ಪು ನೀಡಿದೆ.

### ಬೀದಿ ನಾಯಿ ನಿಯಂತ್ರಣ

- ಬೀದಿ ನಾಯಿಗಳ ನಿಯಂತ್ರಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನಾಲ್ಕು ತಿಂಗಳ ಅವಧಿಯಲ್ಲಿ ಮೂರು ಬಗೆಯ ಆದೇಶಗಳನ್ನು ನೀಡಿದೆ.
- ಮೊದಲು, ಬೀದಿ ನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಂದ ತೊಲಗಿಸಿ, ಆಶ್ರಯ ಕೇಂದ್ರಗಳಿಗೆ ಸಾಗಿಸಬೇಕು ಎಂದು ಆದೇಶಿಸಿತು (ಆಗಸ್ಟ್ 11). ನಂತರ, ಶಸ್ತ್ರಚಿಕಿತ್ಸೆ, ಲಸಿಕೆ ನೀಡಿ ಸ್ವಸ್ಥಾನದಲ್ಲೇ ತಂದುಬಿಡಬೇಕು. ಆಕ್ರಮಣಕಾರಿಯಂತೆ ತೋರುವ ನಾಯಿಗಳನ್ನು ಮಾತ್ರ ಆಶ್ರಯ

- ತಾಣಗಳಲ್ಲಿ ಇಡಬೇಕು ಎಂದಿತು (ಆಗಸ್ಟ 22). ಮತ್ತೊಮ್ಮೆ ಆದೇಶ ಬದಲಿಸಿದ ಸುಪ್ರೀಂ ಕೋರ್ಟ್, ಶಾಲೆ, ಕಾಲೇಜು, ಆಸ್ಪತ್ರೆ, ಮೈದಾನ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಿಂದ ಬೀದಿ ನಾಯಿಗಳನ್ನು ತೊಲಗಿಸಬೇಕು ಎಂದು ನವೆಂಬರ್ 11ರಂದು ಹೇಳಿತು.

**ಇತರ ಮುಖ್ಯ ತೀರ್ಪುಗಳು**

- ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಬೋಧಿ ಪ್ರಾಪರ್ಟಿ ಕಂ.ಲಿ. ಪ್ರಕರಣ; ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ನಿರ್ದೇಶನಗಳನ್ನು ನೀಡುವ ಅಧಿಕಾರ ಹೊಂದಿರುವಂತೆಯೇ ಹಾನಿಗೆ ಪರಿಹಾರವನ್ನು ವಿಧಿಸುವ ಅಧಿಕಾರವನ್ನೂ ಹೊಂದಿವೆ (2025 5.4)
- ಊರ್ಮಿಳಾ ದೀಕ್ಷಿತ್ ಮತ್ತು ಸುನಿಲ್ ಶರಣ್ ದೀಕ್ಷಿತ್ ಪ್ರಕರಣ: ಹಿರಿಯ ನಾಗರಿಕರಿಂದ ಆಸ್ತಿ ಪಡೆದ ಮಕ್ಕಳು ಅವರ ಆರೈಕೆ ಮಾಡದಿದ್ದರೆ, ಆಸ್ತಿ ವರ್ಗಾವಣೆ ರದ್ದುಗೊಳಿಸಲು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆಯು (2007) ನ್ಯಾಯಾಲಯಗಳಿಗೆ ಅಧಿಕಾರ ನೀಡುತ್ತದೆ (2025 ಜ.2)

**ಬದಲಾದ ಮುಖ್ಯ ನ್ಯಾಯಮೂರ್ತಿಗಳು**

- ಸುಪ್ರೀಂ ಕೋರ್ಟ್ ಈ ವರ್ಷ ಇಬ್ಬರು ಮುಖ್ಯ ನ್ಯಾಯಮೂರ್ತಿಗಳನ್ನು (ಸಿಜೆಐ) ಕಂಡಿತು. ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಸುಪ್ರೀಂ ಕೋರ್ಟ್‌ನ 52ನೇ ಸಿಜೆಐ ಆಗಿ ಮೇ 14ರಂದು ಪ್ರಮಾಣ ವಚನ ಸ್ವೀಕರಿಸಿದ್ದರು. ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ವಯೋನಿವೃತ್ತಿಯಿಂದಾಗಿ ತೆರವಾಗಿದ್ದ ಸ್ಥಾನವನ್ನು ನ್ಯಾ.ಗವಾಯಿ ಅಲಂಕರಿಸಿದ್ದರು. ಅವರು ದೇಶದ ಎರಡನೇ ದಲಿತ ಹಾಗೂ ಮೊದಲ ಬೌದ್ಧ ಸಿಜೆಐ ಆಗಿದ್ದರು. ಅವರು ಇದೇ ನ.23ರಂದು ನಿವೃತ್ತಿ ಹೊಂದಿದರು.
- ಈ ನಡುವೆ, ಅಕ್ಟೋಬರ್ 6ರಂದು ರಾಕೇಶ್ ಕಿಶೋರ್ ಎನ್ನುವ ವಕೀಲ ಸಿಜೆಐ ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದ ಘಟನೆ ನಡೆದಿತ್ತು. ವಿಷ್ಣುವಿನ ಮೂರ್ತಿ ಮರುಸ್ಥಾಪಿಸುವ ಕುರಿತ ಅರ್ಜಿಯ ವಿಚಾರಣೆ ವೇಳೆ ಸಿಜೆಐ ಗವಾಯಿ ಅವರು ಸನಾತನ ಧರ್ಮಕ್ಕೆ ಅವಮಾನವಾಗುವಂತಹ ಮಾತುಗಳನ್ನು ಆಡಿದ್ದರು ಎಂದು ಅಸಮಾಧಾನದಿಂದ ಹಾಗೆ ಮಾಡಿದ್ದಾಗಿ ರಾಕೇಶ್ ಕಿಶೋರ್ ಹೇಳಿದ್ದರು.
- ಗವಾಯಿ ನಂತರ ಸೂರ್ಯಕಾಂತ್ ಅವರು ಸಿಜೆಐ ಆದರು.

## ❖ ಎಚ್-1ಬಿ ವೀಸಾ ಸಂದರ್ಶನ ರದ್ದು: ಭಾರತ ಕಳವಳ

**ಸಂದರ್ಭ: ಎಚ್-1ಬಿ ವೀಸಾಕ್ಕೆ ಸಂಬಂಧಿಸಿದಂತೆ ಪೂರ್ವ ನಿಗದಿತ ಸಂದರ್ಶನಗಳನ್ನು ಅಮೆರಿಕ ರದ್ದು ಪಡಿಸಿರುವ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ.**

- ಡಿಸೆಂಬರ್ 15 ಎಚ್-1ಬಿ ವೀಸಾ ಅರ್ಜಿದಾರರ ಸಂದರ್ಶನ ನಿಗದಿಯಾಗಿತ್ತು. ಆದರೆ, ಸಂದರ್ಶನ ರದ್ದುಪಡಿಸಿರುವುದಾಗಿಅಮೆರಿಕದ ವಲಸೆ ಅಧಿಕಾರಿಗಳು, ಅಭ್ಯರ್ಥಿಗಳಿಗೆ ಇಮೇಲ್ ಮೂಲಕ ತಿಳಿಸಿದ್ದಾರೆ. ಸಂದರ್ಶನ ರದ್ದಾಗಿರುವುದು ಭಾರಿ ಸಂಖ್ಯೆಯ ಭಾರತೀಯ ಅರ್ಜಿದಾರ-ರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.
- ಸಂದರ್ಶನವನ್ನು ಮುಂದಿನ ವರ್ಷದ ಮೇ ತಿಂಗಳಿಗೆ ಮುಂದೂಡಲಾಗಿದೆ ಎಂಬ ಇಮೇಲ್ ಸಂದೇಶ ಕೆಲವು ಅರ್ಜಿದಾರರಿಗೆ ಬಂದಿವೆ. 'ಭಾರತೀಯ ಅಭ್ಯರ್ಥಿಗಳಿಗೆ ಆಗಿರುವ ಸಮಸ್ಯೆಯನ್ನು ಇತ್ಯರ್ಥಪಡಿಸಲು ಅಮೆರಿಕದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ' ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

## ❖ 'ರಫ್ತು ಮೌಲ್ಯ ₹76 ಲಕ್ಷ ಕೋಟಿ ನಿರೀಕ್ಷೆ'

- ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಮೌಲ್ಯವು ₹76 ಲಕ್ಷ ಕೋಟಿ ದಾಟ ಲಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್ಐ) ಅಂದಾಜಿ ಸಿದೆ. ಕಳೆದ ಆರ್ಥಿಕ ವರ್ಷದಲ್ಲಿ ರಫ್ತು ಮೌಲ್ಯವು ₹74 ಲಕ್ಷ ಕೋಟಿಯಷ್ಟಾಗಿತ್ತು.

## ❖ ಸರ್ಕಾರ ಮಾರ್ಗದರ್ಶಕನಾಗಲಿ, ನಿಯಂತ್ರಕನಲ್ಲ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು ಈ 30ಗಳ ಅಂತ್ಯಕ್ಕೆ 25 ವರ್ಷಗಳು ಪೂರ್ಣಗೊಳ್ಳುತ್ತವೆ. 1997ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಮಸೂದೆಯನ್ನು ವಿಧಾನಮಂಡಲ ಅಂಗೀಕರಿಸಿತ್ತು. ರಾಷ್ಟ್ರಪತಿ ಅವರು 2000ದ ಮಾರ್ಚ್ 28ರಂದು ಇದಕ್ಕೆ ಅನುಮತಿ ನೀಡಿದ್ದರು. ಸರ್ಕಾರವು ಈ 2021ರಲ್ಲಿ ಮತ್ತು ಈ ವರ್ಷ ಈ ಕಾಯ್ದೆಗೆ ತಿದ್ದುಪಡಿ ತಂದಿದೆ. ತಿದ್ದುಪಡಿಯಲ್ಲಿನ ಕೆಲವು ಅಂಶಗಳಿಗೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಕೊಂಡಿರುವವರು ಆಕ್ಷೇಪವನ್ನೂ ವ್ಯಕ್ತಪಡಿಸಿದ್ದಾರೆ. ಕಾಯ್ದೆಯ ಬೆಳ್ಳಿ ಹಬ್ಬದ ಆಚರಣೆ ಕೊನೆಗೊಳ್ಳುವ ಹೊತ್ತಿನಲ್ಲಿ ಸೌಹಾರ್ದ ಸಹಕಾರಿ ಚಳವಳಿಗೆ ಸಂಬಂಧಿಸಿದ ವಿಶೇಷ ಲೇಖನ ಇಲ್ಲಿದೆ

# ಸರ್ಕಾರ ಮಾರ್ಗದರ್ಶಕನಾಗಲಿ, ನಿಯಂತ್ರಕನಲ್ಲ

### ಜನರ ಚಳವಳಿಯಾಗಿ ಬೆಳೆದ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷದ ಸಂಭ್ರಮ

• ಮನೋಹರ ಮಸ್ಕಿ

ದೇಶದಲ್ಲಿ ಸಹಕಾರಿ ಕ್ಷೇತ್ರ ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸುವಲ್ಲಿ ವಿಫಲವಾಗಿದೆ ಎಂದು ಯೋಜನಾ ಆಯೋಗದ (ಈಗಿನ ನೀತಿ ಆಯೋಗ) ವರದಿಗಳು ಹೇಳಿದ್ದವು. ಆಯೋಗ ನೀಡಿದ ಮಾದರಿ ಸಹಕಾರಿ ಕಾಯ್ದೆಯಿಂದ ರೂಪುಗೊಂಡಿದ್ದೇ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ. ಇದು ಈ ವರ್ಷಾಂತ್ಯಕ್ಕೆ 25 ವರ್ಷಗಳನ್ನು ಪೂರೈಸುತ್ತಿದೆ.

ಸಹಕಾರ ಕ್ಷೇತ್ರವನ್ನು 'ಸರ್ಕಾರದ ವಿಸ್ತರಣೆ'ಯಾಗಿ ಅಲ್ಲದೆ, 'ಜನರ ಸ್ವಂತ ಸಂಸ್ಥೆ'ಯಾಗಿ ನೋಡುವ ದೃಷ್ಟಿಕೋನದಿಂದಾಗಿ ಸೌಹಾರ್ದ ಕಾಯ್ದೆಯು ಒಂದು ಪರ್ಯಾಯ ದಾರಿಯಾಗಿ ಹೊರಹೊಮ್ಮಿತು. ಬದಲಾವಣೆಯ ಹರಿಕಾರನಾಗಿದ್ದ ಈ ಸೌಹಾರ್ದ ಕಾಯ್ದೆಯನ್ನು ಮತ್ತೆ 25 ವರ್ಷಗಳಷ್ಟು ಹಿಂದಕ್ಕೆ ಒಯ್ಯುವ ಪ್ರಯತ್ನಗಳು ನಡೆಯುತ್ತಿರುವ ಹೊತ್ತಿನಲ್ಲಿ ಸೌಹಾರ್ದ ಸಹಕಾರಿಗಳ ಕಾಲು ಶತಮಾನದ ಪ್ರಗತಿಯ ಹೆಜ್ಜೆಗಳತ್ತ ನಾವು ದೃಷ್ಟಿ ಹಾಯಿಸಬೇಕಿದೆ.

ಸದಸ್ಯರ ಸ್ವಾಯತ್ತೆ, ಸ್ವನಿಯಂತ್ರಣ, ಸ್ವಶಾಸನ ಎಂಬ ಮೂಲತತ್ವಗಳನ್ನು ಆಧಾರವಾಗಿಟ್ಟುಕೊಂಡು ರಾಜ್ಯದೆಲ್ಲೆಡೆ ಇರುವ 5,800ಕ್ಕೂ ಅಧಿಕ ಸೌಹಾರ್ದ ಸಹಕಾರಿಗಳು, ಸುಮಾರು 50 ಲಕ್ಷಕ್ಕೂ ಹೆಚ್ಚು ಸದಸ್ಯರ ಜೀವನದಲ್ಲಿ ಆರ್ಥಿಕ–ಸಾಮಾಜಿಕ ಬದಲಾವಣೆ ತಂದಿವೆ. ವಾರ್ಷಿಕ ವ್ಯವಹಾರವು ₹51 ಸಾವಿರ ಕೋಟಿಯನ್ನು ದಾಟಿರುವುದು ಈ ಚಳವಳಿಯ ಶಕ್ತಿ ಮತ್ತು ಅದರ ಮೇಲೆ ಜನರಿಗಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಸಂದರ್ಭದಲ್ಲೇ ಸೌಹಾರ್ದ ಚಳವಳಿ ಬೆಳ್ಳಿ ಹಬ್ಬ ಆಚರಿಸಿರುವುದು ಹೆಮ್ಮೆಯ ಸಂಗತಿ, ಜೊತೆಗೆ ಇದು ಗಂಭೀರ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಕ್ಷಣವೂ ಹೌದು.

ಡಿಜಿಟಲೀಕರಣದ ಕ್ಷೇತ್ರದಲ್ಲಿ ಸೌಹಾರ್ದ ಬ್ಯಾಂಕುಗಳು ಎಟಿಎಂ, ಇಂಟರ್‌ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಕಾರ್ಡ್ ಸೇವೆಗಳು ಇತ್ಯಾದಿ ಸೇವೆಗಳನ್ನು ಗ್ರಾಮ-ನಗರಗಳಲ್ಲಿ ವಿಸ್ತರಿಸಿ, ಗ್ರಾಹಕಸ್ನೇಹಿ, ಪಾರದರ್ಶಕ ವ್ಯವಹಾರ ಮಾದರಿಯನ್ನು ನಿರ್ಮಿಸುತ್ತಿವೆ. ಇದರಿಂದ ಸದಸ್ಯತ್ವ, ಠೇವಣಿಗಳು, ಸಾಲ ಮತ್ತು ಲಾಭ ಎಲ್ಲವೂ ಶಾಶ್ವತ ಏರಿಕೆಯನ್ನು ಕಂಡಿವೆ. ಗ್ರಾಮೀಣ–ನಗರ ಆರ್ಥಿಕ ಚಟುವಟಿಕೆಗಳಿಗೆ ಈ ಚಳವಳಿ ದೊಡ್ಡ ಕೊಡುಗೆ ನೀಡಿದೆ ಎಂಬುದು ಸ್ಪಷ್ಟ.

ಸೌಹಾರ್ದ ಕಾಯ್ದೆಯ ಅಡಿಯಲ್ಲಿ ನೋಂದಣಿಯಾದ ಪ್ರಥಮ ಸಹಕಾರಿ ಸಂಸ್ಥೆಯೆಂದರೆ ಸುಕೋ ಬ್ಯಾಂಕ್. ಇದು ಹಳೆಯ ಸಹಕಾರ ಕಾಯ್ದೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯಾಗಿದ್ದು, ಸ್ವಯಂಪ್ರೇರಿತವಾಗಿ ಸೌಹಾರ್ದ ಕಾಯ್ದೆಗೆ ಪರಿವರ್ತನೆಯಾಯಿತು. ಈ ಪರಿವರ್ತನೆಯು ಕೇವಲ ಒಂದು ಸಹಕಾರಿ ಬ್ಯಾಂಕಿನ ನಿರ್ಧಾರವಲ್ಲ; ಇಡೀ ರಾಜ್ಯದ ಸಹಕಾರ ಕ್ಷೇತ್ರಕ್ಕೆ ದಾರಿ ತೋರಿಸಿದ ಒಂದು ಐತಿಹಾಸಿಕ ಹೆಜ್ಜೆಯಾಯಿತು. ಇದರ ಬಳಿಕ 50ಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳು ಸೌಹಾರ್ದ ಕಾಯ್ದೆಯನ್ನು ಅಳವಡಿಸಿಕೊಳ್ಳಲೂ ಸುಕೋ ಬ್ಯಾಂಕ್ ಕೆಲಸ ಮಾಡಿತು. ಇದರ ಫಲವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಎಂಬ ರಾಜ್ಯಮಟ್ಟದ ಫೆಡರಲ್ ಸಂಸ್ಥೆ ಹುಟ್ಟಿಕೊಂಡಿತು. ಇದು ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಯಲ್ಲ; ಸೌಹಾರ್ದ ಸಹಕಾರಗಳೇ ಸೇರಿ ನಿರ್ಮಿಸಿದ ಸ್ವಯಂ-ಆಡಳಿತ ಸಂಸ್ಥೆ. ಇದರ ಉದ್ದೇಶ ನಿಯಂತ್ರಣವಲ್ಲ, ಮಾರ್ಗದರ್ಶನ; ಆದೇಶವಲ್ಲ, ಸಂಯೋಜನೆ.

### 25 ವರ್ಷದ ಸಾಧನೆಗಳು

25 ವರ್ಷಗಳಲ್ಲಿ ಸೌಹಾರ್ದ ಸಹಕಾರಿಗಳು ಸರ್ಕಾರದ ಅನುದಾನಗಳಿಲ್ಲದೆ, ರಾಜಕೀಯ ಆದೇಶಗಳಿಲ್ಲದೆ, ಸ್ಥಳೀಯ ಜನರ ಹಣವನ್ನು ಸ್ಥಳೀಯ ಜನರಿಗೇ ಸಾಲವಾಗಿ ನೀಡಿ ಒಂದು ಮೌನ ಕ್ರಾಂತಿಯನ್ನು ನಡೆಸಿವೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸಣ್ಣ ವ್ಯಾಪಾರಿಗಳು, ಕೃಷಿಕರು, ಸೌಹಾರ್ದ ಸಹಕಾರಿಗಳ ಮೂಲಕ ಆರ್ಥಿಕ ಭದ್ರತೆ ಪಡೆದಿದ್ದಾರೆ. ಸಹಕಾರ ಸಂಸ್ಥೆಗಳು ಸರ್ಕಾರದ ಯೋಜನೆಗಳಾಗಿ ಅಲ್ಲ, ಜನರ ನಂಬಿಕೆಯ ಸಂಸ್ಥೆಗಳಾಗಿ ಬೆಳೆದಿವೆ. ಕೆಲವು ಸೌಹಾರ್ದ ಸಂಸ್ಥೆಗಳು ಜನರ ನಂಬಿಕೆಯನ್ನು ಹಾಳು ಮಾಡಿದ ಉದಾಹರಣೆಗಳೂ ಇವೆ.

ಆದರೆ, ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಮಾಡಿದ ಕೆಲವು ಕಾನೂನು ತಿದ್ದುಪಡಿಗಳು ಸೌಹಾರ್ದ ಕಾಯ್ದೆಯ ಮೂಲ ಸ್ವಭಾವವನ್ನೇ ಪ್ರಶ್ನಿಸುತ್ತಿವೆ. ರಿಜಿಸ್ಟ್ರಾರ್ ಅಧಿಕಾರ ವಿಸ್ತರಣೆ, ಠೇವಣಿಗಳ ಮೇಲೆ ಹೆಚ್ಚುವರಿ ಕಡ್ಡಾಯ ರಿಸರ್ವ್ ನಿಯಮಗಳು, ನಿಧಿ ಹೂಡಿಕೆಗಳ ಮೇಲಿನ ಕಠಿಣ ನಿಯಂತ್ರಣಗಳು ಸೌಹಾರ್ದ ಸಂಸ್ಥೆಗಳ ಸ್ವಾಯತ್ತ ನಿರ್ಧಾರ ಶಕ್ತಿಯನ್ನು ಕುಗ್ಗಿಸುವ ದಿಕ್ಕಿನಲ್ಲಿ ಸಾಗುತ್ತಿರುವುದು ಸ್ಪಷ್ಟವಾಗಿದೆ. ಇವುಗಳು ಸೌಹಾರ್ದ ಕಾಯ್ದೆಯ ಆತ್ಮಕ್ಕೆ ವಿರುದ್ಧವಾಗಿವೆ ಎಂಬ ಅಭಿಪ್ರಾಯವಿದೆ.

ಫೆಡರಲ್ ಕೋ-ಆಪರೇಟಿವ್ ದುರ್ಬಲವಾದರೆ, ಸೌಹಾರ್ದ ಸಹಕಾರಿಗಳು ಸರ್ಕಾರದ ಮುಂದೆ ಏಕಾಂಗಿಗಳಾಗುತ್ತವೆ. ಸದಸ್ಯರ ಹಿತರಕ್ಷಣೆಗೆ ಇರುವ ಒಟ್ಟುಗೂಡಿದ ವೇದಿಕೆ ನಾಶವಾಗುತ್ತದೆ. ಸ್ವಯಂ ನಿಯಂತ್ರಣದ ಬದಲು ಸರ್ಕಾರಿ ನಿಯಂತ್ರಣ ಬಲಗೊಳ್ಳುತ್ತದೆ. ಇದು ಸಹಕಾರ ಕ್ಷೇತ್ರವನ್ನು ಮತ್ತೆ 1959ರ ಯುಗದ ಹಿಂದಕ್ಕೆ ಕರೆದೊಯ್ಯುತ್ತದೆ.



| ಮಾಡಬೇಕಿರುವುದು | ಸರ್ಕಾರ | ಮಾಡುತ್ತಿರುವುದು |
|---|---|---|
| • ಸ್ವತಂತ್ರ ಸಹಕಾರಿ ಓಂಬುಡ್ಸ್‌ಮನ್ ವ್ಯವಸ್ಥೆ<br>• ಆಂತರಿಕ ಅಪಾಯ ಆಧಾರಿತ ಲೆಕ್ಕ ಪರಿಶೋಧನೆ ಮತ್ತು ಅದರ ಅನುಷ್ಠಾನದ ಬಗ್ಗೆ ಸೂಕ್ತ ನಿಯಮ<br>• ಸಹಕಾರಿ ಆಧಾರಿತ ಠೇವಣಿ ಭದ್ರತಾ ವ್ಯವಸ್ಥೆ | | • ಇಲಾಖಾ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ<br>• ಪ್ರತಿ 3 ವರ್ಷಕ್ಕೊಮ್ಮೆ ಇಲಾಖಾ ಅಧಿಕಾರಿಗಳಿಂದ ಲೆಕ್ಕ ಪರಿಶೋಧನೆ<br>• ನಿರ್ದೇಶಕರ ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿ ಸಲ್ಲಿಕೆ |

### ಸಮಸ್ಯೆ ಎಲ್ಲಿ? ಪರಿಹಾರ ಏನು?

ಸೌಹಾರ್ದ ಸಹಕಾರಿಗಳ ಸಮಸ್ಯೆ ಸ್ವಾಯತ್ತೆಯಲ್ಲ. ಆದರೆ, ಸ್ವಾಯತ್ತೆಯನ್ನು ಬೆಂಬಲಿಸುವ ಸೂಕ್ತ, ಸ್ಪಷ್ಟ ಮತ್ತು ಜವಾಬ್ದಾರಿಯುತ ಆಡಳಿತ ವ್ಯವಸ್ಥೆಗಳ ಕೊರತೆಯಲ್ಲಿ ಸಮಸ್ಯೆ ಇದೆ. ಸ್ವಾಯತ್ತೆ ಎಂದರೆ ನಿಯಂತ್ರಣವಿಲ್ಲದ ಸ್ವೇಚ್ಛೆ ಅಲ್ಲ; ಅದು ಹೊಣೆಗಾರಿಕೆಯೊಂದಿಗೆ ಕಾರ್ಯನಿರ್ವಹಿಸುವ ಸದಸ್ಯರ ಸ್ವಾತಂತ್ರ್ಯ. ಈ ಸೂಕ್ಷ್ಮ ಅಂತರವನ್ನು ಅರಿಯದೆ, ಸ್ವಾಯತ್ತೆಯನ್ನೇ ಸಮಸ್ಯೆಯಾಗಿ ಚಿತ್ರಿಸುವುದು ಸರಿಯಲ್ಲ.

ನಿಯಂತ್ರಣ ಅನಿವಾರ್ಯ ಎನ್ನುವುದು ನಿಜ. ಯಾವುದೇ ಹಣಕಾಸು ಸಂಸ್ಥೆಯಲ್ಲಿ ಠೇವಣಿದಾರರ ಹಣದ ರಕ್ಷಣೆ ಆದ್ಯತೆಯಾಗಬೇಕು. ಆದರೆ ಈ ನಿಯಂತ್ರಣ ಮೇಲಿನಿಂದ ಹೇರಲಾದ ಅಥವಾ ನೇರ ಸರ್ಕಾರಿ ಹಸ್ತಕ್ಷೇಪ ಆಗಬಾರದು. ಅಂಥ ಕ್ರಮಗಳು ಸೌಹಾರ್ದ ಸಹಕಾರಿಗಳ ಆತ್ಮವನ್ನೇ ಕುಗ್ಗಿಸುತ್ತವೆ. ಇದರ ಬದಲಾಗಿ ನಿಯಂತ್ರಣವು ಸಂಸ್ಥೆಯ ಒಳಗಿನಿಂದಲೇ ಬಲಪಡಿಸುವ ರೀತಿಯಲ್ಲಿ ರೂಪುಗೊಳ್ಳಬೇಕು. ಸರ್ಕಾರವು ಇಲ್ಲಿ ಮಾರ್ಗದರ್ಶಕನ ಮಾತ್ರ ನಿರ್ವಹಿಸಬೇಕೇ ವಿನಾ ನಿರ್ವಾಹಕನಾಗಬಾರದು.

ಇಲ್ಲಿ ಅಪಾಯ ಆಧಾರಿತ ನಿಯಂತ್ರಣ ಮಹತ್ವ ಪಡೆದುಕೊಳ್ಳುತ್ತದೆ. ಎಲ್ಲ ಸೌಹಾರ್ದ ಸಹಕಾರಗಳನ್ನೂ ಒಂದೇ ತಟ್ಟೆಯಲ್ಲಿ ತೂಗುವುದರಿಂದ ಸಮಸ್ಯೆ ಪರಿಹಾರವಾಗದು. ಹಣಕಾಸು ಸ್ಥಿತಿ, ಆಡಳಿತ ಗುಣಮಟ್ಟ ಮತ್ತು ಅಪಾಯ ಮಟ್ಟವನ್ನು ಆಧರಿಸಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಬೇಕು; ದುರ್ಬಲ ಸಂಸ್ಥೆಗಳ ಮೇಲೆ ಮಾತ್ರ ಹೆಚ್ಚುವರಿ ಮೇಲ್ವಿಚಾರಣೆ ಇರಬೇಕು. ಇದು ನಿಯಂತ್ರಣ ಮತ್ತು ಸ್ವಾಯತ್ತೆಯ ನಡುವಿನ ಸಮತೋಲನಕ್ಕೆ ಸೂಕ್ತ ಮಾರ್ಗ.

ಉದಾಹರಣೆಗೆ, ಸ್ವತಂತ್ರ ಸಹಕಾರಿ ಓಂಬುಡ್ಸ್‌ಮನ್ ವ್ಯವಸ್ಥೆ ತರುವ ಅಗತ್ಯವಿತ್ತು. ರಿಜಿಸ್ಟ್ರಾರ್‌ಗೆ ಅತಿಯಾದ ಅಧಿಕಾರ ಒಪ್ಪಿಸುವ ಬದಲು, ಠೇವಣಿದಾರರು ಮತ್ತು ಸದಸ್ಯರ ದೂರುಗಳಿಗೆ ವೇಗವಾಗಿ ಸ್ಪಂದಿಸುವ ಸ್ವತಂತ್ರ ವ್ಯವಸ್ಥೆ ರೂಪಿಸಬೇಕು. ಇದರಿಂದ ಆಡಳಿತದ ಮೇಲಿನ ವಿಶ್ವಾಸ ಹೆಚ್ಚುತ್ತದೆ ಮತ್ತು ಸರ್ಕಾರದ ನೇರ ಹಸ್ತಕ್ಷೇಪದ ಅಗತ್ಯ ಕಡಿಮೆಯಾಗುತ್ತದೆ.

### ಸ್ವಾಯತ್ತೆ ಹೆಚ್ಚಿಸಬೇಕು

ಠೇವಣಿದಾರರ ರಕ್ಷಣೆಗೆ ಸರ್ಕಾರ ತಾನೇ ಅಧಿಕಾರ ಸ್ವಾಧೀನಪಡಿಸಿಕೊಳ್ಳುವ ಮಾರ್ಗವನ್ನು ಆಯ್ಕೆಮಾಡುವ ಬದಲು, ಸಹಕಾರಿ ಆಧಾರಿತ ಠೇವಣಿ ಭದ್ರತಾ ವ್ಯವಸ್ಥೆ ರೂಪಿಸುವುದು ಹೆಚ್ಚು ಸೂಕ್ತ. ಸಹಕಾರಿಗಳೇ ಸೇರಿ ನಿರ್ಮಿಸುವ ಠೇವಣಿ ಭದ್ರತಾ ನಿಧಿ ಅಥವಾ ವಿಮಾ ವ್ಯವಸ್ಥೆ, ಅಪಾಯ ಎದುರಾದಾಗ ಠೇವಣಿದಾರರಿಗೆ ರಕ್ಷಣೆ ನೀಡಬಹುದು. ಇದು ಸಹಕಾರದ ತತ್ವಕ್ಕೂ ಹೊಂದಿಕೆಯಾಗುತ್ತದೆ ಮತ್ತು ಸ್ವಾಯತ್ತೆಯನ್ನೂ ಉಳಿಸುತ್ತದೆ.

ಸೌಹಾರ್ದ ಸಹಕಾರಗಳಿಗೆ ಬೇಕಾಗಿರುವುದು ಸ್ವಾಯತ್ತೆಯ ಕಡಿತವಲ್ಲ; ಅದನ್ನು ಜವಾಬ್ದಾರಿಯುತವಾಗಿ ನಡೆಸುವ ಪ್ರಬಲ ವ್ಯವಸ್ಥೆಗಳು. ನಿಯಂತ್ರಣ ಮತ್ತು ಸ್ವಾತಂತ್ರ್ಯ ಪರಸ್ಪರ ವಿರೋಧಿಗಳಲ್ಲ; ಇವೆರಡರ ನಡುವೆ ಸಮತೋಲನ ಸಾಧಿಸುವುದೇ ಸೌಹಾರ್ದ ಸಹಕಾರ ಚಳವಳಿಯ ಮುಂದಿನ ಹಂತದ ಯಶಸ್ಸಿನ ಕೀಲಿಕೈ. ಈ ಬಗ್ಗೆ ರಾಜ್ಯ ಮತ್ತು ಸರ್ಕಾರದ ಮಟ್ಟದಲ್ಲಿ ಸೂಕ್ತವಾದ ಚರ್ಚೆ ನಡೆಯದಿರುವುದು ದುರದೃಷ್ಟಕರ. ಸೌಹಾರ್ದ ಸಹಕಾರ ಚಳವಳಿ ಒಂದು ಕಾನೂನು ಸಮಸ್ಯೆಯಲ್ಲ; ಅದು ಒಂದು ವಿಚಾರ ಚಳವಳಿ. 25 ವರ್ಷಗಳ ನಂತರವೂ ಇದು ಚರ್ಚೆಯಲ್ಲಿದೆ ಎಂದರೆ, ಅದು ವೈಫಲ್ಯವಲ್ಲ– ಅದರ ಪ್ರಸ್ತುತತೆಯ ಸಾಕ್ಷಿ. ಸ್ವಾಯತ್ತೆಯನ್ನು ಕುಗ್ಗಿಸಿ ಸಹಕಾರವನ್ನು ಉಳಿಸಲಾಗದು. ಸ್ವಾಯತ್ತೆಯನ್ನು ಬಲಪಡಿಸಿದರೆ ಮಾತ್ರ ಸಹಕಾರ ಚಳವಳಿ ಜೀವಂತವಾಗಿರುತ್ತದೆ.

ಲೇಖಕ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಸಂಸ್ಥಾಪಕ ಅಧ್ಯಕ್ಷ ಮತ್ತು ಮಾಜಿ ಶಾಸಕ

Publication Date 27/12/2025

Presented by

## ❖ ಅಗರಬತ್ತಿಗೆ ಬಿಐಎಸ್ ಮಾನದಂಡ

**ಸಂದರ್ಭ: ಅಗರಬತ್ತಿ ತಯಾರಿಕೆ ಮತ್ತು ರಫ್ತಿನಲ್ಲಿ ಭಾರತವು ವಿಶ್ವದಲ್ಲೇ ಮುಂಚೂಣಿಯಲ್ಲಿದ್ದು, ಭಾರತೀಯ ಮಾಪನ ಸಂಸ್ಥೆಯು (ಬಿಐಎಸ್), ಅಗರಬತ್ತಿ ಉದ್ಯಮಕ್ಕೆ ಹೊಸ ನಿಗದಿಪಡಿಸಿದೆ.**

- ಮಾನದಂಡಗಳನ್ನು ಅಂತರರಾಷ್ಟ್ರೀಯ ಗುಣಮಟ್ಟ ಕಾಯ್ದುಕೊಳ್ಳುವುದು, ಗ್ರಾಹಕರ ಸುರಕ್ಷತೆ ಖಾತರಿಪಡಿಸುವುದು ಮತ್ತು ಅಗರಬತ್ತಿ ತಯಾರಿಕೆಯಲ್ಲಿ ಕೆಲವು ರಾಸಾಯನಿಕಗಳ ಬಳಕೆಯನ್ನು ನಿಷೇಧಿಸಿ ಹೊಸ ಮಾನದಂಡ 'ಐಎಸ್ 19412:2025' ರೂಪಿಸಲಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ತಿಳಿಸಿದೆ.
- ಹೊಸ ಮಾನದಂಡವು, ಗ್ರಾಹಕರಿಗೆ ಗುಣಮಟ್ಟದ ಅಗರಬತ್ತಿ ಆಯ್ಕೆಗೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ವಿಸ್ತರಣೆಗೆ ನೆರವು ನೀಡಲಿದೆ ಎಂದು ಸಚಿವಾಲಯ ಹೇಳಿದೆ.

- "ಬಿಐಎಸ" ಅಗರಬತ್ತಿಗಳು ಅಥವಾ ಧೂಪದ್ರವ್ಯ ತಯಾರಿಕೆಯಲ್ಲಿ ಬಳಸಲು ನಿಷೇಧಿಸಲಾದ ವಸ್ತುಗಳನ್ನು ಪಟ್ಟಿ ಮಾಡಿದೆ. ಇದರಲ್ಲಿ ಅಲೆಥ್ರಿನ್, ಪರ್ಮೆಥ್ರಿನ್, ಸೈಪರ್ಮೆಥ್ರಿನ್, ಡೆಲ್ಟಾಮೆಥ್ರಿನ್ ಮತ್ತು ಫಿಪ್ರೊನಿಲ್ ನಂತಹ ಕೆಲವು ಕೀಟನಾಶಕ ರಾಸಾಯನಿಕಗಳು ಹಾಗೂ ಬೆಂಜೈಲ್ ಸೈನೈಡ್, ಈಥೈಲ್ ಅಕ್ರಿಲೇಟ್ ಮತ್ತು ಡೈಫೆನಿಲಮೈನ್ ಸಹ ಸೇರಿವೆ.
- ಮಾನವನ ಆರೋಗ್ಯ, ವಾಯು ವಿನ ಗುಣಮಟ್ಟ ಮತ್ತು ಪರಿಸರ ಸುರಕ್ಷತೆಯ ಮೇಲೆ ಇವು ಪರಿಣಾಮ ಬೀರುವುದರಿಂದ ಇವುಗಳಲ್ಲಿ ಹಲವು ವಸ್ತುಗಳನ್ನು ಅಂತರರಾಷ್ಟ್ರೀಯ ಮಟ್ಟ ದಲ್ಲಿನಿರ್ಬಂಧಿಸಲಾಗಿದೆ ಎಂದು ತಿಳಿಸಿದೆ.
- ಈ ಕ್ರಮವು ಗ್ರಾಹಕರಲ್ಲಿ ವಿಶ್ವಾಸವನ್ನು ಹೆಚ್ಚಿಸುವುದಲ್ಲದೆ, ತಯಾರಿಕ ಘಟಕಗಳು ನೈತಿಕ ಮತ್ತು ಸುಸ್ಥಿರ ತಯಾರಿಕಾ ಚಟುವಟಿಕೆ ಅನುಸರಿ ಸುವಂತೆ ಮಾಡಲಿವೆ ಎಂದು ತಿಳಿಸಿದೆ.

**150 ದೇಶಕ್ಕೆ ರಫ್ತು**

ಭಾರತದ ಅಗರಬತ್ತಿ ಉದ್ಯಮದ ವಾರ್ಷಿಕ ವಹಿವಾಟು 28 ಸಾವಿರ ಕೋಟಿಯಷ್ಟಿದೆ. ಈ ಪೈಕಿ 1,200 ಕೋಟಿ ಮೌಲ್ಯದಷ್ಟು ಆಗರಬತ್ತಿಗಳನ್ನು 150ಕ್ಕೂ ಹೆಚ್ಚು ದೇಶಗಳಿಗೆ ಭಾರತ ರಫ್ತು ಮಾಡಲಾಗುತ್ತದೆ. ಅಮೆರಿಕ, ಮಲೇಷ್ಯಾ, ನೈಜೀರಿಯಾ, ಬ್ರೆಜಿಲ್ ಮತ್ತು ಮೆಕ್ಸಿಕೊ ಭಾರತದ ಅಗರಬತ್ತಿಯ ಪ್ರಮುಖ ಮಾರುಕಟ್ಟೆಗಳಾಗಿವೆ.

## ❖ 20 ಸಾಧಕ ಮಕ್ಕಳಿಗೆ ಬಾಲ ಪುರಸ್ಕಾರ ಪ್ರದಾನ

# 20 ಸಾಧಕ ಮಕ್ಕಳಿಗೆ ಬಾಲ ಪುರಸ್ಕಾರ ಪ್ರದಾನ

### ಶೌರ್ಯ, ಸಮಾಜ ಸೇವೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆ

ನವದೆಹಲಿ (ಪಿಟಿಐ): ಕರ್ನಾಟಕದ ಈಜುಪಟು ಧಿನಿಧಿ ದೇಸಿಂಗು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 20 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ವನ್ನು ಶುಕ್ರವಾರ ಪ್ರದಾನ ಮಾಡಿದರು.

ಶೌರ್ಯ, ಸಮಾಜ ಸೇವೆ, ಪರಿಸರ, ಕ್ರೀಡೆ, ಕಲೆ, ಸಂಸ್ಕೃತಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಈ ಪ್ರಶಸ್ತಿ ನೀಡಿ ಗೌರವಿಸಿದರು.

ವೀರ ಬಾಲ ದಿನದ (ಡಿಸೆಂಬರ್ 26) ಅಂಗವಾಗಿ ನವದೆಹಲಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುರಸ್ಕಾರ ಸ್ವೀಕರಿಸಿದ ಮಕ್ಕಳನ್ನು ಅಭಿನಂದಿಸಿದರು.

'ವಿಜೇತ ಮಕ್ಕಳು ತಮ್ಮ ಕುಟುಂಬ, ಸಮುದಾಯ ಮತ್ತು ಇಡೀ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಈ ಪ್ರಶಸ್ತಿಯು ದೇಶದ ಎಲ್ಲ ಮಕ್ಕಳಿಗೆ ಸ್ಫೂರ್ತಿಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಏಳು ವರ್ಷದ ವಾಕಾ ಲಕ್ಷ್ಮಿ ಪ್ರಾಜ್ಞಿಕಾ ಳಂತಹ ಪ್ರತಿಭಾನ್ವಿತ ಮಕ್ಕಳಿಂದಾಗಿ ವಿಶ್ವದ ವೇದಿಕೆಗಳಲ್ಲಿ ಭಾರತವನ್ನು 'ಚೆಸ್ ಪವರ್‌ಹೌಸ್' ಎಂದು ಪರಿಗಣಿಸಲಾಗುತ್ತಿದೆ. ಅಜಯ್ ರಾಜ್ ಮತ್ತು ಮಹಮ್ಮದ್ ಸಿದಾನ್ ಪಿ. ತಮ್ಮ ಜಾಣ್ಮೆ ಮತ್ತು ಶೌರ್ಯದಿಂದ ಹಲವು ಜನರ ಜೀವವನ್ನು ಉಳಿಸಿದ್ದಾರೆ. ಇವರು ಎಲ್ಲ ಶ್ಲಾಘನೆಗೆ ಅರ್ಹರು' ಎಂದು ಹೇಳಿದರು.

'9 ವರ್ಷದ ವ್ಯೋಮ ಪ್ರಿಯಾ ಮತ್ತು 11 ವರ್ಷದ ಕಮ್ಲೇಶ್ ಕುಮಾರ್ ಜನರ ಜೀವವನ್ನು ಉಳಿಸಲು ಹೋಗಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. 10 ವರ್ಷದ ಶ್ರವಣ್ ಸಿಂಗ್ ಆಪರೇಷನ್ ಸಿಂಧೂರ ಸಂದರ್ಭದಲ್ಲಿ ಅಪಾಯವನ್ನೂ ಲೆಕ್ಕಿಸದೆ ಮನೆ ಸಮೀಪ ನಿಯೋಜನೆಗೊಂಡಿದ್ದ ಭಾರತೀಯ ಸೈನಿಕರಿಗೆ ನಿತ್ಯ ನೀರು, ಹಾಲು ಮತ್ತು ಮಜ್ಜಿಗೆ ನೀಡಿದ್ದಾರೆ. ಅಂಗವಿಕಲ ಬಾಲಕಿ ಶಿವಾನಿ ಹೊಸೂರು ಉಪ್ಪಾರ ಅವರು ದೈಹಿಕ ಮತ್ತು ಆರ್ಥಿಕ ಮಿತಿಯನ್ನೂ ಲೆಕ್ಕಿಸದೆ ವಿಶ್ವ ಕ್ರೀಡೆಯಲ್ಲಿ ಸಾಧನೆ ಮಾಡಿದ್ದಾರೆ' ಎಂದು ತಿಳಿಸಿದರು.

'ವೈಭವ್ ಸೂರ್ಯವಂಶಿ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿ ಹಲವು ದಾಖಲೆ ಮಾಡಿದ್ದಾರೆ' ಎಂದು ಹೇಳಿದರು.




ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿಯನ್ನು ಶುಕ್ರವಾರ ಪ್ರದಾನ ಮಾಡಿದರು —ಪಿಟಿಐ ಚಿತ್ರ

### ಮಿಜೋರಾಂ ಪುಟ್ಟ ಗಾಯಕಿಗೆ ಪ್ರಶಸ್ತಿ

ಐಜ್ವಾಲ್: ಮಿಜೋರಾಂನ ಖ್ಯಾತ ಬಾಲ ಗಾಯಕಿ ಏಸ್ತೇರ್ ಲಾಲ್ದುಹಾಮಿ ಹನಾಮ್ತೆ ಅವರು ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಸೇವೆಯನ್ನು ಪರಿಗಣಿಸಿ ಬಾಲ ಪುರಸ್ಕಾರವನ್ನು ನೀಡಲಾಗಿದೆ.

ದಕ್ಷಿಣ ಮಿಜೋರಾಂನ ಹನಾಮ್ತೆ ಮೂರು ವರ್ಷದವರಿದ್ದಾಗಿನಿಂದಲೇ ಚರ್ಚ್ ಮತ್ತು ಇತರ ಕಾರ್ಯಕ್ರಮಗಳಲ್ಲಿ ಹಾಡುತ್ತಿದ್ದರು.

ಎ.ಆರ್.ರೆಹಮಾನ್ ಖಾನ್ ಅವರ 'ವಂದೇ ಮಾತರಂ' ಗೀತೆಯಲ್ಲಿ ಹನಾಮ್ತೆ ಅವರು ಹಾಡಿದ್ದ ವಿಡಿಯೊವನ್ನು ಮಿಜೋರಾಂನ ಮಾಜಿ ಮುಖ್ಯಮಂತ್ರಿ ಜೋರಾಮ್‌ತಂಗಾ ಅವರು ಹಂಚಿಕೊಂಡಿದ್ದರು. ಬಳಿಕ ಪ್ರಧಾನಿ ಮೋದಿ ಅವರೂ ಹಂಚಿಕೊಂಡಿದ್ದರು. 2020ರಲ್ಲಿ ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಹಂಚಿಕೆಯಾಗಿತ್ತು. ಅಲ್ಲಿಂದ ಹನಾಮ್ತೆ ಪ್ರಖ್ಯಾತಿ ಪಡೆದರು. ನಂತರ ಅವರ ಪ್ರತಿ ವಿಡಿಯೊಗಳಿಗೂ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ.

### ನಕ್ಸಲ್ ಪೀಡಿತ ಹಳ್ಳಿ ಹುಡುಗಿಯ ಸಾಧನೆ

ರಾಯ್‌ಪುರ/ಕೊಂಡಗಾವ್: ಛತ್ತೀಸಗಢದ ನಕ್ಸಲ್ ಪೀಡಿತ ಕೊಂಡಗಾವ್ ಜಿಲ್ಲೆಯ ಸಣ್ಣ ಗ್ರಾಮದ ಜುಡೊ ಆಟಗಾರ್ತಿ ಯೋಗಿತಾ ಮಾಂಡವಿ (14) ಅವರು ಬಾಲ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಸಾಮಾಜಿಕ ಸವಾಲುಗಳು ಮತ್ತು ಕೌಟುಂಬಿಕ ಸಂಕಷ್ಟದ ನಡುವೆಯೂ ಯೋಗಿತಾ ಅವರು ರಾಷ್ಟ್ರ ಮಟ್ಟದ ಜುಡೊ ಸ್ಪರ್ಧೆಗಳಲ್ಲಿ ಅಪ್ರತಿಮ ಸಾಧನೆ ತೋರಿದ್ದಾರೆ.

ಯೋಗಿತಾ ನಾಲ್ಕು ವರ್ಷದವರಿದ್ದಾಗಲೇ ತಂದೆ ಮತ್ತು ತಾಯಿಯನ್ನು ಕಳೆದುಕೊಂಡರು. ಅನಂತರ ಚಿಕ್ಕಪ್ಪ ಮತ್ತು ಚಿಕ್ಕಮ್ಮನ ನೆರಳಲ್ಲಿ ಬದುಕಿದರು. 10ನೇ ವಯಸ್ಸಿನಲ್ಲಿ ಜೊಡೊ ತರಬೇತಿ ಪಡೆದು ತಮ್ಮ ಪ್ರತಿಭೆಯನ್ನು ಅನಾವರಣ ಮಾಡಿದರು.

7 ವರ್ಷದ ಚೆಸ್‌ಪಟು ವಾಕಾ ಲಕ್ಷ್ಮಿ ಪ್ರಾಜ್ಞಿಕಾಗೆ ರಾಷ್ಟ್ರೀಯ ಬಾಲ ಪುರಸ್ಕಾರ

# ವೈಭವ್ ಸೂರ್ಯವಂಶಿ, ಧಿನಿಧಿಗೆ ಗೌರವ

ನವದೆಹಲಿ (ಪಿಟಿಐ): 14 ವರ್ಷದ ಬ್ಯಾಟಿಂಗ್ ಪ್ರತಿಭೆ ವೈಭವ್ ಸೂರ್ಯವಂಶಿ, 7 ವರ್ಷದ ಚೆಸ್ ಪಟು ವಾಕಾ ಲಕ್ಷ್ಮಿ ಪ್ರಾಜ್ಞಿಕಾ ಸೇರಿ 20 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರತಿಷ್ಠಿತ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಶುಕ್ರವಾರ ಪ್ರದಾನ ಮಾಡಿದರು.

ಕ್ರೀಡೆ, ಶೌರ್ಯ, ಸಾಮಾಜಿಕ ಸೇವೆ ಮತ್ತು ಪರಿಸರ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಗಾಗಿ ನೀಡಲಾಗುವ ಈ ಪ್ರಶಸ್ತಿಗೆ ಕರ್ನಾಟಕದ ಈಜು ಪ್ರತಿಭೆ ಧಿನಿಧಿ ದೇಸಿಂಗು ಕೂಡ ಪಾತ್ರರಾಗಿದ್ದಾರೆ.

ವರ್ಷದ ಆರಂಭದಲ್ಲಿ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಪರ ಆಡಿದ್ದ ವೈಭವ್, ಗುಜರಾತ್ ಟೈಟನ್ಸ್ ವಿರುದ್ಧ 38 ಎಸೆತಗಳಲ್ಲಿ 101 ರನ್ ಗಳಿಸಿದ್ದರು. ಅದರೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ವಯಸ್ಸಿನ ಬ್ಯಾಟರ್ ಎಂಬ ದಾಖಲೆ ಬರೆದರು. 35 ಎಸೆತಗಳಲ್ಲಿ ಮೂರಂಕಿ ದಾಟಿದ ಅವರು, ಐಪಿಎಲ್ ಇತಿಹಾಸದಲ್ಲಿ ಎರಡನೇ ಅತ್ಯಂತ ವೇಗದ ಶತಕ ದಾಖಲಿಸಿದ್ದರು.

ಬುಧವಾರ ರಾಂಚಿಯಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿಯ ಪಂದ್ಯದಲ್ಲಿ ಬಿಹಾರ ತಂಡದ ಸೂರ್ಯವಂಶಿ 84 ಎಸೆತಗಳಲ್ಲಿ 190 ರನ್ ಗಳಿಸಿದ್ದರು. ಈ ಮೂಲಕ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಅತ್ಯಂತ ಕಿರಿಯ ವಯಸ್ಸಿನ (14 ವರ್ಷ, 272 ದಿನ) ಆಟಗಾರ ಎಂಬ ದಾಖಲೆ ಬರೆದರು. ಅವರು ಕೇವಲ 36 ಎಸೆತಗಳಲ್ಲಿ ಮೂರು ಅಂಕಿಗಳ ಗಡಿಯನ್ನು ದಾಟಿದ್ದರು.

ಸೂರತ್‌ನ ಪ್ರಾಜ್ಞಿಕಾ, ಸರ್ಬಿಯಾದಲ್ಲಿ ನಡೆದ 2025ರ ಫಿಡೆ ವಿಶ್ವ ಶಾಲಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 7 ವರ್ಷದೊಳಗಿನ ಬಾಲಕಿಯರ ಪ್ರಶಸ್ತಿಯನ್ನು ಜಯಿಸಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವೈಭವ್ ಸೂರ್ಯವಂಶಿ ಅವರಿಗೆ ನವದೆಹಲಿಯಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಶುಕ್ರವಾರ ಪ್ರದಾನ ಮಾಡಿದರು

## ಬೆಂಗಳೂರಿನ ಈಜುತಾರೆಗೆ ಪುರಸ್ಕಾರ



ಧಿನಿಧಿ ದೇಸಿಂಗು

ಬೆಂಗಳೂರಿನ ಧಿನಿಧಿ ಮಹಿಳೆಯರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಒಲಿಂಪಿಕ್ಸ್‌ನ ಭಾರತದ ತುಕಡಿಯಲ್ಲಿ ಅತ್ಯಂತ ಕಿರಿಯ ವಯಸ್ಸಿನ (14 ವರ್ಷ) ಕ್ರೀಡಾಪಟು ಅವರಾಗಿದ್ದರು.

200 ಮೀಟರ್ ಫ್ರೀಸ್ಟೈಲ್‌ನಲ್ಲಿ ಪರಿಣತಿ ಹೊಂದಿರುವ 15 ವರ್ಷದ ಧಿನಿಧಿ, 100 ಮೀಟರ್ ಫ್ರೀಸ್ಟೈಲ್ ಮತ್ತು 200 ಮೀಟರ್ ವೈಯಕ್ತಿಕ ಮೆಡ್ಲೆಯಲ್ಲೂ ಸ್ಪರ್ಧಿಸುತ್ತಾರೆ. 2022ರ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ್ದ ಭಾರತದ ಅತ್ಯಂತ ಕಿರಿಯ ವಯಸ್ಸಿನ ಕ್ರೀಡಾಪಟು ಅವರಾಗಿದ್ದರು.

ಸಿ.ವಿ.ರಾಮನ್ ನಗರದ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ 10ನೇ ತರಗತಿ ಓದುತ್ತಿರುವ ಧಿನಿಧಿ 2018ರಲ್ಲಿ ಹವ್ಯಾಸಕ್ಕಾಗಿ ಈಜು ಕಲಿಯಲು ಆರಂಭಿಸಿದ್ದರು. ಕ್ರಮೇಣ ಪರಿಣತಿ ಪಡೆದ ಅವರು ಸ್ಪರ್ಧಾತ್ಮಕ ಈಜಿನಲ್ಲಿ ತೊಡಗಿಸಿಕೊಂಡರು. ಅವರು ಡಾಲ್ಫಿನ್ ಅಕ್ವಾಟಿಕ್ಸ್‌ನ ಬಿ.ಎಂ. ಮಧು ಕುಮಾರ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

2023ರಲ್ಲಿ 100 ಮೀ ಫ್ರೀಸ್ಟೈಲ್‌ನಲ್ಲಿ ಜೂನಿಯರ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದರು. 200 ಮೀ ಫ್ರೀಸ್ಟೈಲ್ ಮತ್ತು 200 ಮೀ ವೈಯಕ್ತಿಕ ಮೆಡ್ಲೆಯಲ್ಲೂ ದಾಖಲೆ ನಿರ್ಮಿಸಿದ್ದರು.

ಗೋವಾದಲ್ಲಿ ನಡೆದ (2023) ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಏಳು ಚಿನ್ನದ ಪದಕಗಳನ್ನು ಗೆದ್ದರು. ದೋಹಾದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿಯೂ ಭಾಗವಹಿಸಿದ್ದರು. ಒಡಿಶಾದಲ್ಲಿ ನಡೆದ 78ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ 100 ಮೀ. ಮತ್ತು 200 ಮೀ.ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆಗಳೊಂದಿಗೆ ಚಿನ್ನದ ಪದಕಗಳನ್ನು ಗೆದ್ದಿದ್ದಾರೆ.

------------------------------------------ಶುಭವಂದನೆಗಳು------------------------------------------